
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


23 ಆಗಸ್ಟ್ 2017 ಪುಟ 16 ರೂ. 15/-



ಫಿರಂಗಿ (ಟ್ಯಾಂಕ್) ರಾಷ್ಟ್ರೀಯವಾದ



ಗದ್ದ ಡೀಕೆ ಏಡಿವಿದ ಶಾ





ಕಾವ್ಯ ಕೊಲೆ ಆದಳೇ?

ಮೈಸೂರು:
ಶ್ರೀನಿವಾಸ್ ಪ್ರಸಾದ್‌ರಿಗೆ ಹೀಗಾಗಬಾರದಿತ್ತು!

ರೋಣ:
ಕುರುಬರ ಝೇಂಕಾರದ 'ಟಿಕೆಟ್ ಪೊಲಿಟಿಕ್ಸ್'




ಕೊಡಗು:
ವಿಶ್ವನಾಥ್‌ಗೆ ಶಾಕ್ ಕೊಟ್ಟ ಜೆಡಿಎಸ್ ಗದ್ದಲ!

ಮಳವಳ್ಳಿ:
ಅನ್ನದಾನಿಯ ಐಲಾಟ!



ಚುನಾವಣೆಗೆ ತಯಾರಿಯನ್ನು ಆರಂಭಿಸೋ...

ಅಂಚಿನಿಂದ....



ಡಾ.ವಾಸು ಎಚ್.ವಿ.

2018ರ ಏಪ್ರಿಲ್-ಮೇನಲ್ಲಿ ನಡೆಯಬೇಕಾದ ಕರ್ನಾಟಕದ ವಿಧಾನಸಭೆ ಚುನಾವಣೆಯ ಲೆಕ್ಕಾಚಾರ ಈಗಾಗಲೇ ಶುರುವಾಗಿದೆ. ಈ ಸಾರಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿರುವವರು ರಾಜಕೀಯ ಪಕ್ಷಗಳು ಮಾತ್ರವೇ ಅಲ್ಲ. ಹಲವು ರೀತಿಯ ಸ್ಟಾರ್ಟ್‌ಅಪ್‌ಗಳು ಕೆಲಸ ಶುರು ಹಚ್ಚಿಕೊಂಡಿವೆ. ರಾಜ್ಯದ ಪ್ರತೀ ವಿಧಾನಸಭಾ ಕ್ಷೇತ್ರದ ಡಾಟಾಬೇಸ್ ಸಿದ್ಧ ಮಾಡುವುದು, ಪ್ರಚಾರಕ್ಕೆ ಹೊಸ ಬಗೆಯ ವಿಧಾನಗಳನ್ನು ಅಳವಡಿಸುವುದು, ಸೋಷಿಯಲ್ ಮೀಡಿಯಾ ಪ್ರಚಾರ ಇತ್ಯಾದಿಗಳನ್ನು ಗುತ್ತಿಗೆ ಆಧಾರದಲ್ಲಿ ಮಾಡಿಕೊಡಲು ಸಿದ್ಧವಿರುವ ಗುಂಪುಗಳು ಹುಟ್ಟಿಕೊಂಡಿವೆ. 5-6 ತಿಂಗಳ ಹಿಂದೆಯೇ ಅಂತಹ ಏಜೆನ್ಸಿಗಳು ಹಾಲಿ ಶಾಸಕರು ಮತ್ತು ಸಂಭಾವ್ಯ ಅಭ್ಯರ್ಥಿಗಳನ್ನು ಸಂಪರ್ಕಿಸಿವೆ. ಮೇಲ್ನೋಟಕ್ಕೆ ಕಾಣುವುದಕ್ಕಿಂತಲೂ ಹೆಚ್ಚಿನ ತಯಾರಿಯನ್ನು ಪಕ್ಷಗಳೂ ಮಾಡುತ್ತಿವೆ; ಅಭ್ಯರ್ಥಿ ಆಕಾಂಕ್ಷಿಗಳೂ ಮಾಡಲು ಆರಂಭಿಸಿದ್ದಾರೆ.

ಇಷ್ಟು ಹೊತ್ತಿಗೆ ಬಿಜೆಪಿಯ ಅಬ್ಬರ ದೊಡ್ಡ ಪ್ರಮಾಣದಲ್ಲಿ ಕಾಣಬೇಕಿತ್ತು; ಒಳಜಗಳ ಹಾಗೂ ಇನ್ನೂ ಕೆಲವು ಕಾರಣಗಳಿಂದ ಅದು ನಡೆಯುತ್ತಿಲ್ಲವೆಂದು ಹಲವರು ಭಾವಿಸಿದ್ದಾರೆ. ಅದು ವಾಸ್ತವವಲ್ಲ. ತಳಮಟ್ಟದಿಂದ ಅತ್ಯಂತ ವ್ಯವಸ್ಥಿತವಾಗಿ ಚುನಾವಣೆಯ ತಯಾರಿಯನ್ನು ಬಿಜೆಪಿಯ ಚುನಾವಣೆಯ ಯಂತ್ರಾಂಗ ನಡೆಸುತ್ತಿದೆ. 2-3 ಸುತ್ತಿನ ಸಮೀಕ್ಷೆಗಳ ನಂತರ, ಕ್ಷೇತ್ರವಾರು ಜವಾಬ್ದಾರಿಯನ್ನು ವಿವಿಧ ಬಗೆಯ ವಿಸ್ತಾರಕ ಕಾರ್ಯಕರ್ತರಿಗೆ ವಹಿಸಲಾಗಿದೆ. ಕ್ಷೇತ್ರದ ಸಾಮಾನ್ಯ ಜನರನ್ನು ಮಾತ್ರವಲ್ಲದೇ, ಧಾರ್ಮಿಕ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಸೇರಿದಂತೆ ಆಯಕಟ್ಟಿನ ಜನರನ್ನು ಅವರು ಮಾತನಾಡಿಸುತ್ತಿದ್ದಾರೆ. 'ಬಿಜೆಪಿಯಿಂದ ಯಾರಿಗೇ ಟಿಕೆಟ್ ಕೊಟ್ಟರೂ' ಅವರಿಗೆ ಮತ ಹಾಕಬೇಕೆಂದು ಮನವರಿಕೆ ಮಾಡಿಕೊಡುವ ಕೆಲಸ ಅವರದ್ದು. ಇದಲ್ಲದೇ, ಚುನಾವಣಾ ಗುರುತಿನ ಚೀಟಿ ಇಲ್ಲವಾ, ಅದರಲ್ಲೇನಾದರೂ ತಿದ್ದುಪಡಿ ಆಗಬೇಕಾ ಎಂದು ಬೂತ್ ಕಾರ್ಯಕರ್ತರು ತಮ್ಮ ವ್ಯಾಪ್ತಿಯ ಮನೆಮನೆಗಳಿಗೆ ತಿರುಗುತ್ತಿದ್ದಾರೆ.

ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಕೆಲವು 'ಮಾಸ್ಟರ್ ಸ್ಟ್ರೋಕ್'ಗಳನ್ನು ಆಡಿದೆ. ಕೆಲವಂತೂ ಯಾರೂ ನಿರೀಕ್ಷಿಸಿರದ ಕ್ರಮಗಳು. ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನವನ್ನು ಯೋಜಿಸಿದ್ದೇ ಚುನಾವಣೆಯ ಉದ್ದೇಶದಿಂದ ಎಂದು ಹೇಳಲು ಬರುವುದಿಲ್ಲವಾದರೂ, ಈ ಸಂದರ್ಭದಲ್ಲಿ ಆ ಪರಿಣಾಮವೂ ಆಗುವಂತೆ ಆಯೋಜನೆ ಮಾಡಲಾಗಿತ್ತು. ಮೆಟ್ರೋದಲ್ಲಿ ಹಿಂದಿ ಹೇರಿಕೆಯ ವಿಚಾರ ಮುನ್ನೆಲೆಗೆ ಬಂದಾಗಲೂ, ಸಿದ್ದರಾಮಯ್ಯನವರ ಸರ್ಕಾರವು ಏನು ಮಾಡಬೇಕಿತ್ತೋ ಅದನ್ನೇ ಮಾಡಿತು. ಹಾಗೆಯೇ ಕನ್ನಡ ಧ್ವಜದ ವಿಚಾರವೂ ಸಹ. ಎಲ್ಲಕ್ಕಿಂತ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಇರುವ ಮತ್ತು ಇನ್ನೂ ಸಾಕಷ್ಟು ಕಾಲ ಸುದ್ದಿಯಲ್ಲಿ ಇರಲಿರುವ ವಿಚಾರವೆಂದರೆ, ಲಿಂಗಾಯತ ಸ್ವತಂತ್ರ ಧರ್ಮದ್ದು. ಈ ನಾಲ್ಕೂ ಸಂಗತಿಗಳು ಎಂಥವೆಂದರೆ, ಮುಖ್ಯಮಂತ್ರಿಯವರ ನಡೆಯ ಕುರಿತು ವಿರೋಧಿಸಬೇಕೆಂದುಕೊಂಡರೂ, ಯಾರಾದರೂ ಮೊದಲಿಗೇ ಅಳುಕಿನಿಂದ ಮುಂದಡಿಯಿಡಬೇಕು; ನಂತರವೂ ಕಪ್ಪುಬಿಳುಪು ರೀತಿಯಲ್ಲಿ ಅವರನ್ನು ವಿರೋಧಿಸುವ ಇನ್ನೊಂದು ಧ್ರುವಕ್ಕೆ ಹೋಗಿ ನಿಲ್ಲುವುದೂ ಕಷ್ಟ. ಇಂತಹ ಪರಿಸ್ಥಿತಿ ವಿರೋಧ ಪಕ್ಷಗಳಿಗೆ ಸೃಷ್ಟಿಯಾಗಿದೆ.


ಇದೇ ಅವಧಿಯಲ್ಲಿ ಕಾರಾಗೃಹ ಇಲಾಖೆಯಲ್ಲಿ ಉಂಟಾದ ಬಿಕ್ಕಟ್ಟು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಂದರ್ಭ ಏರ್ಪಟ್ಟಿತ್ತು. ಆದರೆ, ಈ ಸಾರಿ ಅದೊಂದು ದೊಡ್ಡ ವಿಚಾರವಾಗಿ ಮುಂದುವರೆಯಲಿಲ್ಲ. ಬದಲಿಗೆ ಕನ್ನಡ ಬಾವುಟದ ವಿಚಾರ ಮುನ್ನೆಲೆಗೆ ಬಂದಿತು. ಅದರಲ್ಲಿ ಕೇಂದ್ರ ಸರ್ಕಾರವನ್ನು ನಡೆಸುವ ಬಿಜೆಪಿ ಪಕ್ಷ ಇಕ್ಕಟ್ಟಿಗೆ ಸಿಲುಕುವ ವಾತಾವರಣ ನಿರ್ಮಾಣವಾಯಿತು. ಸಿದ್ದರಾಮಯ್ಯನವರ ಸರ್ಕಾರದ ಮೇಲೆ ಕೆಲವು ಪ್ರಕರಣಗಳನ್ನು ಸರಿಯಾಗಿ ನಿಭಾಯಿಸಲಿಲ್ಲ ಎಂಬ ಆರೋಪವಿದೆ. ಬಹುತೇಕ ಮಾಧ್ಯಮ ಕ್ಷೇತ್ರ ಅವರ ವಿರುದ್ಧ ಇದ್ದಾಗ ಈ ನಿಭಾವಣೆಯು ಇನ್ನಷ್ಟು ಕಷ್ಟ. ಆದರೆ ಕಳೆದ ಎರಡು ತಿಂಗಳ ವಿದ್ಯಮಾನಗಳಲ್ಲಿ ರಾಜ್ಯ ಸರ್ಕಾರವೇ ಮೇಲುಗೈ ಸಾಧಿಸಿದೆ.

ಚುನಾವಣೆಗಳು ಹತ್ತಿರ ಬಂದಂತೆ ಇಂತಹ ಬೆಳವಣಿಗೆಗಳು ಇನ್ನೂ ಹೆಚ್ಚಾಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ. ನಾವು ವಿರೋಧಿಸುವ ಅಥವಾ ಬೆಂಬಲಿಸುವ ಪಕ್ಷಗಳಿಗೆ ಅನುಕೂಲವೋ ಅಥವಾ ಅನಾನುಕೂಲವೋ ಎಂಬುದರ ಆಧಾರದ ಮೇಲೆ ಇಂತಹ ವಿದ್ಯಮಾನಗಳನ್ನು ನೋಡುವುದು ಒಂದು ಕ್ರಮ. ದೇಶದ ಜನರಿಗೆ ಇದರಿಂದ ಅನುಕೂಲವೋ, ಅನಾನುಕೂಲವೋ ಎಂದು ನೋಡುವುದು ಇನ್ನೊಂದು ಕ್ರಮ. ನಾವು ಬೆಂಬಲಿಸುವ ಪಕ್ಷಕ್ಕೆ ಆಗುವ ಒಳಿತು, ದೇಶಕ್ಕೆ ಆಗುವ ಒಳಿತೂ ಆಗಿರುತ್ತದೆ ಎಂದು ಯಾರಾದರೂ ಭಾವಿಸಿದರೆ? ಹಾಗೆ ಭಾವಿಸಲು ಸಾಧ್ಯ; ಆದರೆ, ಸಾಧ್ಯವಾದಷ್ಟೂ ಮುಕ್ತ ಮನಸ್ಸಿನಿಂದ ಇದನ್ನು ನೋಡಿ ಎಂದು ಮನವಿ ಮಾಡಿಕೊಳ್ಳಬಹುದು ಅಷ್ಟೇ.

ಇವನ್ನೆಲ್ಲಾ ಹೇಳಲು ಕಾರಣವಿದೆ. ಈ ಒಂದು ವರ್ಷದಲ್ಲಿ ಕರ್ನಾಟಕದಲ್ಲಿ ಏನೆಲ್ಲಾ ಬೆಳವಣಿಗೆಗಳು ಆಗಲಿವೆ ಎಂದು ಊಹಿಸುವುದು ಕಷ್ಟ. ಜನರ ದಿಕ್ಕುತಪ್ಪಿಸುವ, ಅವರ ಭಾವನೆಗಳನ್ನು ಕೆಣಕಿ ಮತಗಳಿಸುವ ವಿವಿಧ ಬಗೆಯ ತಂತ್ರಗಳು ಬಳಕೆಯಾಗಬಹುದು. ಜನರ ಬದುಕಿಗೆ ಸಂಬಂಧಿಸಿದ ಸಂಗತಿಗಳಿಗಿಂತ ಇಂತಹವೇ ನಮ್ಮ ಮಾಧ್ಯಮಗಳಿಗೆ ಪ್ರಿಯವಾದ್ದರಿಂದ, ಅವು ನೂರಾರು ಪಟ್ಟು ಹಿಗ್ಗಿ ಹರಡಲು ಅವೂ ಕೆಲಸ ಮಾಡುತ್ತವೆ. ಹೀಗಿರುವಾಗ, ದೇಶದ ಸಾಮಾನ್ಯ ಜನರ ಬದುಕಿಗೆ ಸಂಬಂಧಿಸಿದ ಮಹತ್ವದ ಸಂಗತಿಗಳನ್ನು ಮುನ್ನೆಲೆಗೆ ಬರುವಂತೆ ಮಾಡುವುದು ನಮ್ಮ ಕರ್ತವ್ಯವಾಗುತ್ತದೆ.

ಎರಡು ವಿದ್ಯಮಾನಗಳನ್ನು ಗಮನಿಸೋಣ. ಒಂದು, ಮೊನ್ನೆಯಿಂದ ಸುದ್ದಿಯಲ್ಲಿರುವ ಗ್ಯಾಸ್ ಸಬ್ಸಿಡಿ ಹಿಂತೆಗೆತದ ವಿಚಾರ. ಸಬ್ಸಿಡಿ ಸಹಿತ ಸಿಲಿಂಡರ್, ಸಬ್ಸಿಡಿ ರಹಿತ ಸಿಲಿಂಡರ್ ಎಂಬ ವಿಭಜನೆ ಮೊದಲು ಶುರುವಾಯಿತು; ನಂತರ ಸಬ್ಸಿಡಿ ಸಹಿತ ಸಿಲಿಂಡರ್‌ಗಳ ಸಂಖ್ಯೆಯನ್ನು ಸೀಮಿತಗೊಳಿಸಲಾಯಿತು. ಇವೆರಡೂ ನಡೆದದ್ದು ಯುಪಿಎ ಸರ್ಕಾರದ ಅವಧಿಯಲ್ಲಿ. ಆಗಲೇ ಸಂಖ್ಯೆಯ ಮಿತಿಯನ್ನು ತೆಗೆಯಲಾಯಿತು. ಮೋದಿಯವರ ಸರ್ಕಾರ ಬಂದನಂತರ, ಸ್ವಯಂಪ್ರೇರಿತರಾಗಿ ಸಬ್ಸಿಡಿ ಬಿಡಿ ಎಂದು ಕರೆ ನೀಡಲಾಯಿತು. ಈಗ ಕಡ್ಡಾಯವಾಗಿ ಸಬ್ಸಿಡಿ ತೆಗೆಯುತ್ತೇವೆ ಎಂದು ಹೊರಟಿದ್ದಾರೆ. ಇದರ ಬಗ್ಗೆ ಸಂಸತ್ತಿನಲ್ಲೂ ವಿರೋಧ ವ್ಯಕ್ತವಾಗಿದೆ. ಈಗ ಈ ವಿದ್ಯಮಾನವನ್ನು ನಾವು ಹೇಗೆ ನೋಡಬೇಕು? ಕನ್ನಡಪ್ರಭದ ಸಂಪಾದಕೀಯ ಒಂದು ದೃಷ್ಟಿಕೋನವನ್ನು ನೀಡಿದೆ. ಗ್ಯಾಸ್ ಸಬ್ಸಿಡಿ ಹಿಂತೆಗೆತ: ದೇಶಕ್ಕೆ ಒಳ್ಳೆಯದು-ಜನರಿಗೆ ದುಬಾರಿ ಎಂಬುದು ಅದರ ಶೀರ್ಷಿಕೆ. ಜನರಿಗೆ ತೊಂದರೆಯಾದರೂ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನಂಬಿಸುವ ಒಂದು ಪ್ರಕ್ರಿಯೆ ನಮ್ಮ ದೇಶದಲ್ಲಿ ನಡೆಯುತ್ತಿದೆ. ದೇಶವೆಂದರೆ ಮನುಷ್ಯರಲ್ಲ ಎಂದು ತಿಳಿದಿರುವವರು ಪ್ರತಿಪಾದಿಸುವ ತಿಳಿವಳಿಕೆ ಇದು. ಭಾವನೆಗಳ ಆಧಾರದ ಮೇಲೆ ನಡೆಸುವ ರಾಜಕಾರಣವದು. ಜಾತಿ ಧರ್ಮಗಳು ಇದರಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

ಎರಡು, ಕರ್ನಾಟಕವನ್ನು ಕಾಡುತ್ತಿರುವ, ಮುಂದೆಯೂ ಕಾಡಲಿರುವ ಬರ ಪರಿಸ್ಥಿತಿಯದ್ದು. ನಿಜಕ್ಕೂ ಕರ್ನಾಟಕದ ಬರಪರಿಸ್ಥಿತಿ ಎಷ್ಟು ಕೆಟ್ಟದಾಗಿದೆಯೆಂದರೆ, ಇದು ಎಲ್ಲರನ್ನು ಭಾವನಾತ್ಮಕವಾಗಿಯೂ ಕಾಡಬೇಕಿತ್ತು. ಕಳೆದ ವರ್ಷದಲ್ಲೇ ತೀವ್ರವಾದ ಬರವಿತ್ತೆಂದು ಭಾವಿಸಿದ್ದೆವು. ಉತ್ತರ ಕರ್ನಾಟಕದ ಪರಿಸ್ಥಿತಿ ಇದ್ದುದರಲ್ಲಿ ಪರವಾಗಿಲ್ಲ. ಈಗ ಆಲಮಟ್ಟಿ ಜಲಾಶಯ ಭರ್ತಿಯಾಗಿರುವ ಸುದ್ದಿ ಬಂದಿದೆ. ಆದರೆ ತುಂಗಭದ್ರಾ ಮತ್ತು ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ



ನಾಲೆಗಳು ಮತ್ತು ನದಿಗಳು ಬತ್ತಿ ಹೋಗಿವೆ. ತುಂಗಭದ್ರಾ ನದಿ ಅವಲಂಬಿತ ಜಲಚರಗಳೂ ಸತ್ತು ಹೋಗುತ್ತಿರುವುದನ್ನು ಪರಿಸರ ಹಾಗೂ ವನ್ಯಜೀವಿ ತಜ್ಞ ಸಮದ್ ಕೊಟ್ಟೂರು ಅವರು ನೀರಾವರಿ ಇಲಾಖೆಯ ಗಮನಕ್ಕೆ ತಂದಿರುವುದು ಪ್ರಜಾವಾಣಿಯಲ್ಲಿ ವರದಿಯಾಗಿದೆ. ಒಂದು ವರದಿ ಪ್ರಕಾರ, ಕಳೆದ ವರ್ಷ ಇದೇ ದಿನ ಕೆಆರ್‌ಎಸ್, ಕಬಿನಿ, ಹಾರಂಗಿ ಮತ್ತು ಹೇಮಾವತಿ ಜಲಾಶಯಗಳು ಶೇ.78ರಷ್ಟು ಭರ್ತಿಯಾಗಿದ್ದವು; ಈ ಸಾರಿ ಶೇ.44ರಷ್ಟು ಮಾತ್ರ ಭರ್ತಿಯಾಗಿವೆ! ಕಳೆದ 17 ವರ್ಷಗಳಲ್ಲಿ ಕರ್ನಾಟಕದ 86ಕ್ಕೂ ಹೆಚ್ಚು ತಾಲೂಕುಗಳು 11 ವರ್ಷಗಳ ಕಾಲ ಬರಪೀಡಿತವಾಗಿದ್ದವು ಎಂಬುದರ ಹಿನ್ನೆಲೆಯಲ್ಲಿ ಇದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

ಅಂದರೆ ಕರ್ನಾಟಕವು ಸತತ ಮೂರನೇ ವರ್ಷದ ಬರಕ್ಕೆ ಕಾಲಿಡುತ್ತಿದೆ. ಯಥಾಪ್ರಕಾರ ಕುಡಿಯುವ ನೀರಿಗೆ ಆದ್ಯತೆ ಎಂದು ಹೇಳಿ, ನಗರ ಪ್ರದೇಶಗಳ ಕೈಗಾರಿಕೆಗಳ ದಾಹವನ್ನೂ ತಣಿಸಲಾಗುತ್ತದೆ. ಇದರ ಮಧ್ಯೆ, ತಮಿಳುನಾಡಿನವರ ಜೊತೆಗೆ ನಡೆಯುವ ಜಗಳವು, ರಾಜ್ಯದೊಳಗಿನ ಜನರ ಸಮಸ್ಯೆಯನ್ನು ನೆನಪಿಸಿಕೊಳ್ಳದಂತೆ ಮಾಡುತ್ತದೆ. ಕಳೆದ 100 ವರ್ಷಗಳಲ್ಲೇ ಅತ್ಯಂತ ಭೀಕರ ಬರ ಎದುರಿಸುತ್ತಿರುವ ತಮಿಳುನಾಡಿನಲ್ಲೂ ಅಲ್ಲಿನ ರಾಜಕಾರಣಿಗಳು ಭಾವಾವೇಶದ 'ಹೋರಾಟ' ಮಾಡಿ ಜನರನ್ನು ದಿಕ್ಕೆಡಿಸುತ್ತಾರೆ. ಕೇಂದ್ರ ಸರ್ಕಾರವು ಇವ್ಯಾವಕ್ಕೂ ತನಗೂ ಸಂಬಂಧವೇ ಇಲ್ಲದಂತೆ ಇದ್ದು ಬಿಡುತ್ತದೆ. ಇದ್ದುದರಲ್ಲಿ ಆಸಕ್ತ ಸಾಮಾನ್ಯ ಜನರೇ ಕೆರೆ-ಕಟ್ಟೆಗಳ ಹೂಳು ತೆಗೆಯುವುದು, ಬೀಜದುಂಡೆ ಮಾಡುವುದು, ಸಸಿ ನೆಡುವುದು, ಪರ್ಯಾಯ ಕೃಷಿ ವಿಧಾನಗಳ ಪ್ರಚಾರ ಮಾಡುವುದು ಇತ್ಯಾದಿಗಳನ್ನು ಮಾಡುತ್ತಾ ಭೂಮಿಯನ್ನು ಬದುಕಿಸಲು ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರವೂ ಕೆಲವು ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತಿದೆಯಾದರೂ, ಅವ್ಯಾವುವೂ ಪರಿಣಾಮಕಾರಿಯಾಗುತ್ತಿಲ್ಲ.

ಇವೆರಡು ಸಮಸ್ಯೆಗಳು ನಮ್ಮನ್ನು ಕಾಡುತ್ತಿರುವ ಹಲವು ಪ್ರಮುಖ ಸಂಕಷ್ಟಗಳಿಗೆ ಉದಾಹರಣೆಗಳು ಅಷ್ಟೇ. ಗ್ಯಾಸ್ ಸಬ್ಸಿಡಿ ಹಿಂತೆಗೆತ ಎಂಬುದು ಒಂದು ಪ್ರತ್ಯೇಕ ಬಿಡಿ ಬೆಳವಣಿಗೆಯಲ್ಲ. ಜನಸಾಮಾನ್ಯರಿಗೆ ಇದುವರೆಗೂ ನ್ಯಾಯಬದ್ಧವಾಗಿ ಸಲ್ಲುತ್ತಿದ್ದ ಕಲ್ಯಾಣ ಕಾರ್ಯಕ್ರಮಗಳ ಹಿಂತೆಗೆತದ ನೂರು ಕ್ರಮಗಳಲ್ಲಿ ಒಂದು ಅಷ್ಟೇ. ಜೊತೆಜೊತೆಗೇ ಜನಸಾಮಾನ್ಯರನ್ನು ಹಿಂಡಿ ಹಿಪ್ಪೆ ಜಿಎಸ್‌ಟಿಯಂತಹ ಹೊಸ ವಿಧಾನಗಳೂ ಜಾರಿಯ ಆದರೆ, ಇವೆಲ್ಲವೂ ದೇಶದ ಒಳ್ಳೆಯದಕ್ಕೆ ನಂಬಿಸಲಾಗುತ್ತಿದೆ. ಅಂದರೆ ಜನರ ಬದುಕಿನ ಸಮಸ್ಯೆಗಳನ್ನು ಬಿಟ್ಟು ಭಾವಾವೇಶದ ಸಂಗತಿಗಳನ್ನು ಮಾಡಲಾಗುತ್ತಿದೆ. ಚುನಾವಣೆ ಹತ್ತಿರ ಹತ್ತಿರ ಇದು ಹೆಚ್ಚೆಚ್ಚು ಆಗುತ್ತಿದೆ.


ಮೇಲೆ ಹೇಳಲಾದ ಉದಾಹರಣೆಗಳಲ್ಲಿ ಸಿದ್ದ ನವರ ಸರ್ಕಾರವೂ 'ಮೇಲುಗೈ' ಸಾಧಿಸಿರುವುದು 'ಭಾವನಾತ್ಮಕ' ವಿಚಾರಗಳಲ್ಲೇ ಎಂಬುದೂ ಸತ್ಯ ಕೇವಲ ಭಾವನಾತ್ಮಕ ವಿಚಾರಗಳಲ್ಲ ಎಂಬುದು ನಿಜ ಆ ಅಂಶವೂ ಇದ್ದೇ ಇದೆ. ಕಾರಾಗೃಹಗಳಲ್ಲಿ ನಡ ಭ್ರಷ್ಟಾಚಾರವನ್ನು ಬಯಲಿಗೆಳೆಯುವ 'ದಿಟ್ಟತನ' ತೆ ಎಂದು ಹೇಳಲಾದ ಐಪಿಎಸ್ ಅಧಿಕಾರಿ ರೂಪ ತನ್ನ ತಪ್ಪುಗಳನ್ನು ಮುಚ್ಚಿಟ್ಟುಕೊಂಡು ಬೇರೆ ಇಮೇಜ್ ಮಾಡಿದ ಪ್ರಯತ್ನ ಅದಾಗಿತ್ತು. ಆ ರೀತಿಯಲ್ಲಿ ಎದುರಿಸುವುದು ಕಷ್ಟಕರವಾಗಿತ್ತು. ಆಗ ನೆರವಿಗೆ ಕನ್ನಡ ಧ್ವಜದ ವಿದ್ಯಮಾನ. ಲಿಂಗಾಯತ ಪ್ರತ್ಯೇಕ ಮಾನ್ಯತೆಯಿಂದ ಆ ಸಮುದಾಯದವರಿಗೆ ಅನುಕೂಲಗಳು ಲಭಿಸು ತ್ತದಾದರೂ, ಮುಂದಿಡಲಾಗುತ್ತಿರುವುದು ಬದುಕಿನ ದೈನಂದಿನ ಪರಿಹಾರಕ್ಕಲ್ಲ. ಇದಕ್ಕೆ ಯಾವುದೋ ರೀತಿಯಲ್ಲಿ ಸರ್ಕಾರದ ಬೆಂಬಲವಿದೆ. ಈ ಅರ್ಥದಲ್ಲಿ ಅದೂ ಭಾ ವಿಚಾರವೇ. ಈ ಟ್ರೆಂಡ್ ಒಳ್ಳೆಯದಲ್ಲ.

ಆದರೆ, ಕಳೆದ ಎರಡು ತಿಂಗಳಲ್ಲಿ ಸಿದ್ದರಾಮ ಸರ್ಕಾರವು ಮೇಲೆ ಹೇಳಲಾದ ಪ್ರಕರಣಗಳನ್ನು ನಿಭಾ ರೀತಿಯಿಂದ ಅದಕ್ಕೆ ಅನುಕೂಲವಾಗಿರುವುದನ್ನು ಸರ್ಕಾರದ ನಡೆಯನ್ನು ಖಂಡಿಸುವ ಕೆಲವರ ಅನಿ ಪ್ರಾಮಾಣಿಕತೆಯಿಲ್ಲ. ಹಾಗೆ ನೋಡಿದರೆ ಆ ವಿಚಾರಗಳು ಸಮಾಜವನ್ನು ಮತ್ತಷ್ಟು ಪ್ರಜಾತಂ ಗೊಳಿಸುವ 'ಭಾವನಾತ್ಮಕ' ಸಂಗತಿಗಳು ಹೆಚ್ಚುವಂಥವಲ್ಲ. ನಿಜಕ್ಕೂ ಬೆಂಕಿ ಹಚ್ಚುವ ಕೆಲಸ ಆರೆಸ್ಸೆಸ್ ಮತ್ತು ಅದರ ಪರಿವಾರ, ಬಿಜೆಪಿ, ಅಮಿತ್ ಶಾಗಳ ಘಾತುಕ ಕ್ರಮಗಳ ವಿರುದ್ಧ ಬಹಿ ಒಮ್ಮೆಯೂ ಮಾತಾಡದವರು, ಇವುಗಳನ್ನು ಟೀ ವುದು ಸೋಜಿಗದ ಸಂಗತಿ. ಇಂದು ರಾಜಕೀಯ ಜನಬೆಂಬಲವಿದ್ದು ಮುಂಚೂಣಿಯಲ್ಲಿರುವ ನಾ ಸಿದ್ದರಾಮಯ್ಯನವರೇ ಸಾಪೇಕ್ಷವಾಗಿ ಆಯ್ಕೆಯಾಗಿದ್ದಾರೆ. ಅವರ ಆಡಳಿತದ ಭ್ರಷ್ಟಾಚಾರಿಗಳಿಗೆ ಅವಕಾಶ ಮಾಡಿಕೊಟ್ಟಿರುವುದು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಹಿ ಇರುವುದು ಇಂತಹ ಹಲವಾರು ಸಮಸ್ಯೆಗಳ ಅವರೇ ಹೇಳಿಕೊಳ್ಳುವ ಸಮಾಜವಾದಕ್ಕೂ, ಅವರ ಒಟ್ಟಾರೆ ನೀತಿಗಳಿಗೂ ವೈರುಧ್ಯವಿದೆ. ಆದರೆ, ದೇಶದ ರಾಜಕಾರಣ ನೋಡಿದರೆ, 'ಮುಖ್ಯ ಪಕ್ಷಗಳಲ್ಲಿನ ದೊಡ್ಡ ನಾಯಕರಲ್ಲಿ ಪ್ರಜಾಪ್ರಭು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡಬಹುದಾ ಬಹುಶಃ ಇವರೇ ಕೊನೆಯವರು. ಕೆಲವರು ಈಗಿ ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸುತ್ತಾರೆ. ಬಿಜೆಪಿ ಮೇಲು ಎಂಬ ಪರ್ಯಾಯವನ್ನು ಹೊಂದಿ ಅಂಥವರು ಪ್ರಾಮಾಣಿಕರಾಗಿರಲು ಸಾಧ್ಯವಿಲ್ಲ. ಭ್ರ ಕಾರ್ಪೊರೇಟ್‌ಪರ ನೀತಿಗಳು, ಸಾಮಾನ್ಯ ಜನರ ವಿರ ಕ್ರಮಗಳು, ಶೋಷಿತ ಸಮುದಾಯಗಳ ಮೇಲೆ ದ ರೈತ ಸಮುದಾಯದ ನಾಶ ಇವೆಲ್ಲದರಲ್ಲಿ ಬಿಜೆಪಿ ಹತ್ತು ಪಟ್ಟು ಜನವಿರೋಧಿಯಾದುದು.

ಕಾಂಗ್ರೆಸ್ ಸರ್ಕಾರವನ್ನೇ ಟೀಕಿಸಬಾರದು ಮತ ಎಲ್ಲವನ್ನೂ ಸರಿಯಾಗಿಯೇ ಮಾಡುತ್ತಿದೆ ಎನ್ನುವ ಅತಿರೇಕವು ಮತ್ತೆ ಬಿಜೆಪಿಯನ್ನೇ ತರುತ್ತದೆ. ಇಷ್ಟು ದಶಕಗಳ ಕಾಲ ದೇಶವನ್ನು ಆಳಿ ಅಸಮಾನ ಹಿಗ್ಗಿಸುವಲ್ಲಿ ಅದರ ಪಾತ್ರವೇ ಹೆಚ್ಚಿದೆ. ಅದು ಆಯ್ಕೆಯಾಗಿರುವುದೇ ಒಂದು ದುರಂತ. ಸರ್ಕಾರವನ್ನು ನಾವು ಒಪ್ಪುವುದಿಲ್ಲ ಎಂದು ಮತ್ತು ಪರ್ಯಾಯವನ್ನು ಕಟ್ಟುವ ಅಗತ್ಯ ಇದೆ. ಆದರೆ ಸಿದ್ದರಾಮಯ್ಯನವರನ್ನೂ ನಾವು ಒಪ ಎನ್ನುವವರ ಮುಂದೆ ಇರುವ ಆಯ್ಕೆ ಒಂದೇ. ಭಾ ಸಂಗತಿಗಳ ಮೂಲಕ ದೇಶ ಒಡೆಯುವ, ಪ್ರಜಾ ವಿರೋಧಿ ಇಶ್ಯೂಗಳನ್ನೇ ಮುಂದೆ ಮಾಡಿ ವಿಜೃಂಭ ವವರ ಚಿಂತನೆಗಳು ಸಮಾಜದಲ್ಲಿ ಸೋ ಮಾಡುವುದು. ಜನರ ಬದುಕಿಗೆ ಸಂಬಂಧಿಸಿದ ಇ ಮುಂಚೂಣಿಗೆ ಬರುವಂತೆ ಮಾಡುವುದು.

ಈ ಸಾರಿಯ ಚುನಾವಣೆಗೆ ನಾವು ಮಾಡ ತಯಾರಿ ಎಂದರೆ ಇದೇ ಆಗಿದೆ. ಈ ಕಾರ್ಯಪ್ರವೃತ್ತರಾಗೋಣವೇ?

ನನ್ನ ಕೂಸು ಕನ್ಹಯ್ಯ ಮನೆಗೆ ಬಂದಾಗ


ಅಮ್ಮನೊಂದಿಗೆ ಕನ್ಹಯ್ಯನ ಸೆಲ್ಫಿ



• ಗೌರಿ ಲಂಕೇಶ್
editorlankesh@gmail.com

ಸಿಪಿಐ ಪಕ್ಷದ ಯುವ ಸಂಘಟನೆ ಎಐವೈಎಫ್ ಮತ್ತು ವಿದ್ಯಾರ್ಥಿ ಸಂಘಟನೆ ಎಐಎಸ್‌ಎಫ್ ಭಾರತದಾದ್ಯಂತ 'ಲಾಂಗ್ ಮಾರ್ಚ್' ಹಮ್ಮಿಕೊಂಡಿದೆ. ಕಳೆದ ಜುಲೈ 15ರಂದು ಕನ್ಯಾಕುಮಾರಿಯಲ್ಲಿ ಪ್ರಾರಂಭವಾದ ಈ ನಡಿಗೆ ಸೆಪ್ಟೆಂಬರ್ 12ರಂದು ಪಂಜಾಬಿನ ಹುಸೈನಿವಾಲಾದಲ್ಲಿ ಅಂತ್ಯಗೊಳ್ಳಲಿದೆ. 'ಸೇವ್ ಇಂಡಿಯಾ, ಚೇಂಜ್ ಇಂಡಿಯಾ' ಎಂಬ ಘೋಷವಾಕ್ಯದಡಿ ಎಲ್ಲಾ ರಾಜ್ಯಗಳಿಗೆ ಭೇಟಿ ನೀಡುತ್ತಿರುವ ಈ ನಡಿಗೆ ಎನ್‌ಡಿಎ ಸರ್ಕಾರದ ಜನ ವಿರೋಧಿ ನೀತಿಗಳನ್ನು ಪ್ರಜೆಗಳ ಮುಂದಿಡುತ್ತಿದೆ.

ಇವತ್ತು ಸಿಪಿಐ ಪಕ್ಷದ ಯುವತಾರೆ ಜೆಎನ್‌ಯು ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ ಕನ್ಹಯ್ಯ ಕುಮಾರ್. ಸಹಜವಾಗಿಯೇ ಆತ ಈ ನಡಿಗೆಯು ಹಾದುಹೋಗುತ್ತಿರುವ ಮುಖ್ಯ ನಗರಗಳಿಗೆ ಭೇಟಿ ನೀಡಿ ಯುವಜನತೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆ. ಹತ್ತು ದಿನಗಳ ಹಿಂದೆ ಈ ನಡಿಗೆ ಪಕ್ಕದ ಆಂಧ್ರ ಪ್ರದೇಶದ ಅನಂತಪುರಕ್ಕೆ ಭೇಟಿ ಕೊಟ್ಟಾಗ ಅಲ್ಲಿಗೂ ಕನ್ಹಯ್ಯ ಹೋಗಿದ್ದ. ಅಲ್ಲಿಂದ ಆತ ವಾಪಸ್ ದೆಹಲಿಗೆ ಹೋಗಲು ಬೆಂಗಳೂರಿಗೆ ಬರಬೇಕಿತ್ತು.

ಸಿಪಿಐನ ಹಿರಿಯರಾದ ಸಿದ್ದನಗೌಡ ಪಾಟೀಲರು "ಶನಿವಾರ ರಾತ್ರಿ ಕನ್ಹಯ್ಯ ತನ್ನ ಕೆಲವು ಮಿತ್ರರನ್ನು ಭೇಟಿ ಆಗುತ್ತಾನಂತೆ. ಆನಂತರ ಅವನು ಪಕ್ಷದ ಕಚೇರಿಯಲ್ಲೇ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದೇವೆ. ಭಾನುವಾರ ಅವನ ಇತರೆ ಕಾರ್ಯಕ್ರಮಗಳನ್ನು ನೋಡಿ ಅವನಿಗೆ ಯಾವಾಗ ಪುರುಸೊತ್ತು ಆಗುತ್ತೆ ಅಂತ ಹೇಳುತ್ತೇನೆ. ಆಗ ನೀವು ಬಂದು ಅವನನ್ನು ಭೇಟಿ ಆಗಬಹುದು" ಎಂದು ನನಗೆ ತಿಳಿಸಿದರು.

"ಓಕೆ" ಅಂದ ನಾನು ಅಪರೂಪಕ್ಕೆ ಬಿಡುವು ಸಿಕ್ಕಿದ್ದರಿಂದ ಪಕ್ಕದ ಸೈಟಿನಲ್ಲಿ ನಡೆಯುತ್ತಿರುವ ಕಟ್ಟಡ ನಿರ್ಮಾಣ ಕೆಲಸದಿಂದಾಗಿ ನನ್ನ ಮನೆಯಲ್ಲಿ ಶೇಖರಣೆಗೊಂಡಿದ್ದ ಧೂಳು ಕ್ಲೀನ್ ಮಾಡುತ್ತಾ ಕೂತೆ. ಎಲ್ಲಾ ಕರ್ಟನ್‌ಗಳನ್ನು ಬಿಚ್ಚಿ, ಗೆಸ್ಟ್ ಬೆಡ್‌ರೂಮಿನ ಬೆಡ್ ಶೀಟ್‌ಗಳನ್ನೆಲ್ಲ ತೆಗೆದು ವಾಶಿಂಗ್ ಮೆಶಿನ್‌ಗೆ ಹಾಕಿದ್ದೆ. ಕೆಲಸ ಅರ್ಧಂಬರ್ಧ ಆಗಿತ್ತು. ಅಷ್ಟು ಹೊತ್ತಿಗೆ ಫೋನ್ ಮಾಡಿದ ಕನ್ಹಯ್ಯ "ಇನ್ನೆರಡು ಗಂಟೆಗಳಲ್ಲಿ ಬೆಂಗಳೂರು ತಲುಪುತ್ತೇನೆ. ನೀನು ಪಕ್ಷದ ಆಫೀಸಿಗೆ ಬಾ" ಎಂದ. "ಆದರೆ ಸಿದ್ದನಗೌಡರು ಇವತ್ತು ನೀನು ಗೆಳೆಯರನ್ನು ಭೇಟಿ ಆಗುತ್ತಿದ್ದೀಯಾ, ಅಲ್ಲೇ ಆಫೀಸಿನಲ್ಲೇ ಉಳಿದುಕೊಳ್ಳುತ್ತಿದ್ದೀಯಾ ಅಂದಿದ್ದರು" ಎಂದೆ. "ಇಲ್ಲ ಇಲ್ಲ, ಮೊದಲು ನಿನ್ನನ್ನು ಭೇಟಿ ಆಗಬೇಕು. ನೀನು ಬಾ" ಅಂದ. ಹೊರಡುವ ಮುನ್ನ ಮಿತ್ರ ವಿಶ್ವಾಸ್ ಶಿವಪುರ್‌ಗೆ ಫೋನ್ ಮಾಡಿ "ಕನ್ಹಯ್ಯ ಬಂದಿದ್ದಾನೆ. ಅವನನ್ನು ಊಟಕ್ಕೆ ಕರೆದುಕೊಂಡು ಹೋಗೋಣವಾ?" ಎಂದು ಕೇಳಿದೆ. "ನನ್ನ ಟ್ರೀಟ್" ಅಂದ ವಿಶ್ವಾಸ್ ಚಾಂಸೆರಿ ಪೆವಿಲಿಯನ್‌ನಲ್ಲಿ ಟೇಬಲ್ ಬುಕ್ ಮಾಡಿದ. ಶನಿವಾರ ಸಂಜೆಯ ಟ್ರಾಫಿಕ್‌ನಲ್ಲಿ ನನ್ನ ಮನೆಯಿಂದ ಸಿಪಿಐ ಕಚೇರಿ ತಲುಪುವುದಕ್ಕೆ ಎರಡು ಗಂಟೆಗಳೇ ಬೇಕಾದವು. ಅಲ್ಲಿ ನೋಡಿದರೆ ಕನ್ಹಯ್ಯ ತನ್ನ ಬ್ಯಾಗ್ ಹಿಡಿದು "ನನ್ನನ್ನ ನಿನ್ನ ಮನೆಗೆ ಕರೆದುಕೊಂಡು ಹೋಗು. ನಾನು ಅಲ್ಲೇ ಇರುತ್ತೇನೆ" ಎಂದ.

ಮನೆ ಸಂಪೂರ್ಣವಾಗಿ ಕ್ಲೀನ್ ಆಗಿಲ್ಲ, ಕರ್ಟನ್‌ಗಳನ್ನು ತೆಗೆದಿದ್ದರಿಂದ ರೋಡಿನಲ್ಲಿ ಹಾದುಹೋಗುವವರಿಗೆಲ್ಲಾ ಡೈನಿಂಗ್ ರೂಮ್‌ನಲ್ಲಿ ಯಾರ್‍ಯಾರಿದ್ದಾರೆ ಎಂದು ಕಾಣಿಸುತ್ತಿದೆ. ಮೊದಲೇ ಕನ್ಹಯ್ಯನಿಗೆ ಪ್ರಾಣ ಬೆದರಿಕೆ ಇದೆ. ಪೊಲೀಸ್ ರಕ್ಷಣೆಯನ್ನೂ ಕೇಳಿಲ್ಲ. ಇಂತಹದ್ದರಲ್ಲಿ ಅವನನ್ನು ಮನೆಗೆ ಕರೆದುಕೊಂಡು ಹೋಗುವುದು ರಿಸ್ಕ್ ಎಂದು ನಿರ್ಧರಿಸಿ "ಈಗ ಊಟಕ್ಕೆ ಹೋಗೋಣ. ಇವತ್ತು ರಾತ್ರಿ ಇಲ್ಲಿಯೇ ಇರು. ನಾಳೆ ನನ್ನ ಮನೆಗೆ ಬರುವಿಯಂತೆ" ಎಂದೆ.

ಅವತ್ತು ರಾತ್ರಿ ಕನ್ಹಯ್ಯ, ಯಾವಾಗಲೂ ಅವನೊಂದಿಗೆ ಇರುವ ಅವನ ಮಿತ್ರ ಧನಂಜಯ್, ಸಿದ್ದನಗೌಡ ಪಾಟೀಲ್, ವಿಶ್ವಾಸ್, ನಿಧಿ ಮತ್ತು ನಾನು ಊಟಕ್ಕೆ ಹೋದೆವು. ವಾಪಸ್ ಸಿಪಿಐ ಆಫೀಸಿಗೆ ಹೋದಾಗ "ನಾಳೆ ನಿನ್ನ ಕಾರ್ಯಕ್ರಮ ಏನು?" ಎಂದೆ. "ಇವತ್ತು ರಾತ್ರಿಯೇ ನಾನು ದೆಹಲಿಗೆ ಹೋಗಬಹುದಿತ್ತು. ಆದರೆ ನಿನ್ನ ಜೊತೆ ಇರಬೇಕು ಅಂತಾನೆ ಒಂದು ದಿನ ಇಲ್ಲೇ ಉಳಿದುಕೊಂಡೆ. ಬೇರೆ ಯಾರನ್ನೂ ನಾನು ಭೇಟಿ ಆಗಲ್ಲ" ಎಂದ.

"ಇರು, ನಿನ್ನ ಅಣ್ಣನಿಗೆ ಫೋನ್ ಮಾಡ್ತೀನಿ" ಎಂದು ಜಿಗ್ನೇಶ್ ಮೆವಾನಿಗೆ ಫೋನ್ ಮಾಡಿದೆ. ಆದರೆ ಆತ ಫೋನ್ ಎತ್ತಲಿಲ್ಲ. "ನಿನ್ನ ತಮ್ಮ ನನ್ನ ಜೊತೆ ಇದ್ದಾನೆ. ಫೋನ್ ಮಾಡು" ಅಂತ ಮೆಸೇಜ್ ಕಳುಹಿಸಿದೆ. ಹತ್ತು ನಿಮಿಷ ಕಾದರೂ ಜಿಗ್ನೇಶನಿಂದ ಕರೆ ಬರಲಿಲ್ಲವಾದ್ದರಿಂದ ಅಲ್ಲಿಂದ ಹೊರಟೆ. ಇನ್ನೇನು ಕಾರ್ ಸ್ಟಾರ್ಟ್ ಮಾಡಬೇಕು... ಜಿಗ್ನೇಶ್ ಫೋನ್ ಮಾಡಿ "ಕನ್ಹಯ್ಯ ಬಂದಿದಾನೆ ಅಂತ ನಿನಗೆ ಸ್ವರ್ಗಕ್ಕೆ ಹೋದಷ್ಟೇ ಸಂತೋಷ ಆಗಿರಬೇಕು" ಎಂದ. "ಯಾಕೋ ಹಾಗಂತೀಯಾ? ನೀನು ಬಂದರೂ ನನಗೆ ಅಷ್ಟೇ ಸಂತೋಷ ಆಗುತ್ತೆ. ಕನ್ಹಯ್ಯನಿಗೆ ಸುಸ್ತಾಗಿತ್ತು, ಅವನನ್ನು ರೂಮಲ್ಲಿ ಬಿಟ್ಟು ಹೊರಡುತ್ತಿದ್ದೇನೆ. ನಾಳೆ ಇಬ್ಬರೂ ಫೋನ್ ಮಾಡ್ತೀವಿ. ಓಕೆ?" ಅಂದೆ.

ಮಾರನೆ ದಿನ ಕನ್ಹಯ್ಯ ಬರುವಷ್ಟರಲ್ಲಿ ಮನೆ ಕ್ಲೀನ್ ಮಾಡಿದ್ದೆ. ನನ್ನ ಮನೆಯ ಹತ್ತಿರದಲ್ಲೇ ಇರುವ ಸಲೂನ್ ಒಂದಕ್ಕೆ ವಿಶ್ವಾಸ್ ಬಂಡವಾಳ ಹಾಕಿದ್ದಾನೆ. ಅಲ್ಲಿಗೆ ಕನ್ಹಯ್ಯನನ್ನು ಕರೆದುಕೊಂಡು ಹೋಗಿ ಹೇರ್‌ಕಟ್, ಗಡ್ಡ ಟ್ರಿಮ್ ಮಾಡಿಸಿದ್ದಾಯಿತು. ಊಟ ಮಾಡಿದ ನಂತರ ಕನ್ಹಯ್ಯ ಮತ್ತು ಧನಂಜಯ್ ಚಿಕ್ಕ ನಿದ್ದೆಗೆ ಜಾರಿದರು. ನಾನು ಏನನ್ನೋ ಓದುತ್ತಾ ಕೂತೆ.

ಕಳೆದ ತಿಂಗಳು ತನ್ನ ಡಾಕ್ಟರೇಟ್ ಥೀಸಿಸ್‌ನ ಡ್ರಾಫ್ಟ್ ಸಲ್ಲಿಸಿರುವ ಕನ್ಹಯ್ಯ ಈಗ ಕಾಲಿಗೆ ಚಕ್ರ ಕಟ್ಟಿಕೊಂಡಿರುವವನಂತೆ ಊರೂರಿಗೆ ಸುತ್ತಾಡುತ್ತಿದ್ದಾನೆ. ಜೊತೆಗೆ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು ಅದಕ್ಕಾಗಿ ಕಾಯುತ್ತಿದ್ದಾನೆ. ಸಂಜೆ ಟೀ ಕುಡಿಯುತ್ತಾ ಜಿಗ್ನೇಶನಿಗೆ ಫೋನ್ ಮಾಡಿದೆವು. ಅವರಿಬ್ಬರು ಈಗ ಅದೆಷ್ಟು ಸುತ್ತಾಡುತ್ತಿದ್ದಾರೆಂದು ಅರ್ಥಮಾಡಿಕೊಳ್ಳುವುದಕ್ಕೆ ಅವರ ಸಂಭಾಷಣೆ ಕೇಳಿಸಿಕೊಳ್ಳಬೇಕು.

ಕನ್ಹಯ್ಯ: "ಅರೆ ಲಲ್ಲಾ, ಹೇಗಿದ್ದೀಯ? ಎಲ್ಲಿದ್ದೀಯಾ?"

ಜಿಗ್ನೇಶ್: "ಅಹಮದಾಬಾದ್‌ನಲ್ಲಿದ್ದೀನಿ. ಹತ್ತನೆ ತಾರೀಖು ದೆಹಲಿಗೆ ಬರುತ್ತೇನೆ."

ಕನ್ಹಯ್ಯ: "ಆದರೆ ಹತ್ತನೆ ತಾರೀಖು ನಾನು ರಾಜಸ್ತಾನಕ್ಕೆ ಹೋಗುತ್ತಿದ್ದೇನೆ."

ಜಿಗ್ನೇಶ್: "ಅರೆರೆ... ನಾನು ಹನ್ನೊಂದಕ್ಕೆ ಕೇರಳಕ್ಕೆ ಹೋಗುತ್ತಿದ್ದೇನೆ."

ಕನ್ಹಯ್ಯ: "ಓಕೆ, ಸೆಪ್ಟೆಂಬರ್‌ನಲ್ಲಿ ನಾವಿಬ್ಬರೂ ಪಂಜಾಬಿಗೆ ಹೋಗಬೇಕು. ನೆನಪಿಟ್ಟುಕೋ."

ಜಿಗ್ನೇಶ್: "ನೀನು ಯಾವಾಗ ದೆಹಲಿಯಲ್ಲಿ ಇರುತ್ತೀಯಾ ಹೇಳು. ನಾನು ಅಲ್ಲಿಗೆ ಬರುತ್ತೇನೆ."

ಕನ್ಹಯ್ಯ: "ನಿನ್ನನ್ನ ಬಿಹಾರಕ್ಕೂ ಕರೆದುಕೊಂಡು ಹೋಗಬೇಕು ಅಂತಿದ್ದೀನಿ. ಡೇಟ್ ಆಮೇಲೆ ಹೇಳ್ತಿನಿ... ಇದೋ, ಅಮ್ಮನ ಜೊತೆ ಮಾತಾಡು..."

ನನಗೆ ಮತ್ತು ಕನ್ಹಯ್ಯನಿಗೆ ಅಂಕಣಕಾರ ಆಕಾರ್ ಪಟೇಲ್ ಪರಿಚಯವಿದೆ. ರಾತ್ರಿ ಆಕಾರ್ ಮನೆಯಲ್ಲಿ ಊಟ ಮಾಡಿ ಅಲ್ಲಿಂದ ಅವನನ್ನು ವಿಮಾನ ನಿಲ್ದಾಣಕ್ಕೆ ಬಿಡುವುದೆಂದು ನಿರ್ಧರಿಸಿದೆ. ಆಕಾರ್ ಮನೆಯಲ್ಲಿ ರಾಜಕೀಯ, ಜೆಎನ್‌ಯುವಿನ ಆಗುಹೋಗುಗಳು, ಬಿಹಾರದಲ್ಲಿನ ರಾಜಕೀಯ ಸ್ಥಿತ್ಯಂತರ ಇತ್ಯಾದಿಗಳ ಬಗ್ಗೆ ಚರ್ಚೆ ನಡೆಯಿತು. ವಿಮಾನ ನಿಲ್ದಾಣ ತಲುಪಿದಾಗ "ಮತ್ತೆ ಶುಕ್ರವಾರ ಬರುತ್ತೇನೆ. ಆಗ ನಿನ್ನ ಮನೆಯಲ್ಲೇ ಉಳಿದುಕೊಳ್ಳೋದು ನಾನು, ನೆನಪಿಟ್ಟುಕೋ" ಎಂದು ಕನ್ಹಯ್ಯ ಎಚ್ಚರಿಸಿದ!

ಹೇಳಿದಂತೆ ಶುಕ್ರವಾರ ಸಂಜೆ ಮತ್ತೆ ಬೆಂಗಳೂರಿಗೆ ಬಂದ. ಅವನನ್ನು ಸೀದಾ ನನ್ನ ಮನೆಗೆ ಕರೆದುಕೊಂಡು ಹೋದೆ. ಧನಂಜಯ್ ಟೀ ಮಾಡಲಾರಂಭಿಸಿದ. ಮೇಲಿನ ಬಾಗಿಲು ತೋರಿಸಿ "ಅಲ್ಲೇನಿದೆ?" ಅಂತ ಕೇಳಿದ. "ಟೆರೇಸ್. ಅಲ್ಲಿ ಏನೂ ಇಲ್ಲ" ಎಂದು ಉತ್ತರಿಸಿದೆ. "ಬಾಗಿಲು ತೆಗಿ. ಅಲ್ಲೇ ಟೀ ಕುಡಿಯೋಣ" ಅಂದ. ಟೀ ಕುಡಿದ ನಂತರ ಮನೆಯ ಸುತ್ತ ಒಂದು ಸುತ್ತು ಹಾಕಿದ. ಗಾರ್ಡನ್‌ಗೆ ಹೋಗಿ ಎಲ್ಲ ಗಿಡಗಳನ್ನು ನೋಡಿದ. "ನಿನ್ನ ಅಮ್ಮ ಈ ಮನೆಯನ್ನ ಚೆನ್ನಾಗಿ ಕಟ್ಟಿಸಿದ್ದಾರೆ. ಸುಂದರವಾಗಿದೆ. ನನಗೆ ಇಲ್ಲಿ ಆರಾಮ್ ಅನ್ನಿಸುತ್ತೆ" ಎಂದ. "ನೀನು ದೆಹಲಿಗೆ ಯಾವಾಗ ಬರ್ತೀಯಾ?" ಎಂದ. "ಗೊತ್ತಿಲ್ಲ, ಬರೋ ಮುಂಚೆ ಹೇಳ್ತಿನಿ ಬಿಡು" ಅಂದೆ. ಅದಕ್ಕೆ ಅವನು "ಆಗಸ್ಟ್ 14ರ ನಂತರ ನನಗೆ ನಾಲ್ಕು ದಿನ ಬಿಡುವು ಇದೆ. ಹಿಮಾಚಲ ಪ್ರದೇಶದಲ್ಲಿ ನನ್ನ ಫ್ರೆಂಡ್ ಒಬ್ಬರು ಹೋಮ್ ಸ್ಟೇ ಮಾಡಿದ್ದಾರೆ. ಆ ಜಾಗ ತುಂಬಾ ಚೆನ್ನಾಗಿದೆ. ನೀನು ಈಗಲೇ ನಿನ್ನ ಫ್ಲೈಟ್ ಟಿಕೆಟ್ ಬುಕ್ ಮಾಡು. ನಾನು ನಿನ್ನನ್ನ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ" ಎಂದು ಒತ್ತಾಯ ಮಾಡಿದ. "ಅಯ್ಯೋ ಆಗಲ್ಲ ಮಾರಾಯ. ನನಗೆ ಅಕ್ಟೋಬರ್ ತನಕ ತುಂಬಾ ಕೆಲಸಗಳಿವೆ. ನವೆಂಬರ್‌ನಲ್ಲಿ ಸಾಧ್ಯ ಆದರೆ ಬರ್ತೀನಿ. ಅದಕ್ಕೆ ಮೊದಲು ನೀನೇ ಸ್ವಲ್ಪ ಪುರುಸೊತ್ತು ಮಾಡಿಕೊಂಡು ಬಾ. ಕರ್ನಾಟಕದಲ್ಲೇ ಎಲ್ಲಾದರೂ ಹೋಗೋಣ" ಎಂದು ಆಹ್ವಾನಿಸಿದೆ. "ಇಲ್ಲಿ ಯಾವ ಬೀಚ್ ಚೆನ್ನಾಗಿದೆ?" ಎಂದ. "ಗೋಕರ್ಣಕ್ಕೆ ಹೋಗಬಹುದು. ಮಲ್ಪೆಯೂ ಚೆನ್ನಾಗಿದೆ. ಮಲ್ಪೆಗೆ ಹೋದರೆ ಅದಕ್ಕೆ ಹತ್ತಿರದಲ್ಲೇ ನಮ್ಮ ಮಿತ್ರರಾದ ಜಿ.ರಾಜಶೇಖರ್, ಫಣಿರಾಜ್, ಸುರೇಶ್ ಭಟ್ ಬಾಕ್ರಬೈಲ್, ಶಶಿಧರ್ ಹೆಮ್ಮಾಡಿ, ಶ್ರೀನಿವಾಸ್ ಕಾರ್ಕಳ, ಪುನೀತ್ ಅಪ್ಪು ಎಲ್ಲಾ ಇದ್ದಾರೆ. ಅವರಿಗೂ ಸಂತೋಷ ಆಗುತ್ತೆ" ಎಂದೆ.


ಅವತ್ತು ರಾತ್ರಿ ಕನ್ಹಯ್ಯನನ್ನು ಭೇಟಿ ಆಗಲು ಪ್ರದ್ಯುಮ್ನ ಆಲನಹಳ್ಳಿ, ದಯಾನಂದ, ಚಂದನ್ ಗೌಡ ಮತ್ತು ಮೇಘಾ ಬರುವವರಿದ್ದರು. ಅವರು ಬರುವ ಮುನ್ನ ನಾನು ಸಾಲೆಡ್, ಸ್ಯಾಂಡ್‌ವಿಚ್ ಇತ್ಯಾದಿಗಳನ್ನು ತಯಾರಿಸುತ್ತಿದ್ದರಿಂದ ಅಡುಗೆ ಮನೆಯಲ್ಲಿ ನೀರು ತೊಟ್ಟಿಕ್ಕಿತ್ತು. ಕನ್ಹಯ್ಯ ಅಡುಗೆ ಮನೆ ಹೊಕ್ಕಾಗ ಆತ ನೀರು ಕುಡಿಯುತ್ತಿರಬಹುದು ಎಂದುಕೊಂಡೆ. ಆದರೆ ಒಳಗೆ ಹೋಗಿ ನೋಡಿದರೆ ಆತ ನೆಲ ಸಾರಿಸುತ್ತಿದ್ದ.

ಶನಿವಾರ ಬೆಳಗ್ಗೆ ಎರಡು ದಿನಗಳ ವಿದ್ಯಾರ್ಥಿ ಹೋರಾಟಗಳ ರಾಷ್ಟ್ರೀಯ ಸಮಾವೇಶ ಪ್ರಾರಂಭವಾಗುವುದಿತ್ತು. ಆ ಸಮಾವೇಶಕ್ಕೆ ಮುನ್ನ ರೈಲು ನಿಲ್ದಾಣದಿಂದ ಶುರುವಾಗುವ ರ್‍ಯಾಲಿಯನ್ನು ಉದ್ದೇಶಿಸಿ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಮತ್ತು ಕನ್ಹಯ್ಯ ಮಾತನಾಡುವುದಿತ್ತು. ಕಾರ್ಯಕ್ರಮ ಪ್ರಾರಂಭವಾಗುವ ಮುನ್ನ ಕನ್ಹಯ್ಯನನ್ನು ಹಿರಿಯ ಮಾನವ ಹಕ್ಕು ಹೋರಾಟಗಾರ ನಗರಿ ಬಾಬಯ್ಯ ಅವರಿಗೆ ಪರಿಚಯಿಸಿದೆ. ಅವನನ್ನು ಕಂಡು ಬಾಬಯ್ಯ ಎಷ್ಟು ಎಮೋಶನಲ್ ಆದರು ಅಂದರೆ "ನೀನೇ ನಮ್ಮ ಭವಿಷ್ಯ" ಎಂದು ಅವನನ್ನು ಅಪ್ಪಿಕೊಂಡರು. ಮಿತ್ರ ಶಿವಸುಂದರ್ "ನಿನ್ನ ವಿರುದ್ಧ ಇಲ್ಲಿ ಪ್ರತಿಭಟಿಸಲು ಹಲವರು ಸಜ್ಜಾಗಿದ್ದಾರೆ" ಎಂದಾಗ ಕನ್ಹಯ್ಯನಿಗೆ ಆಶ್ಚರ್ಯ. "ಯಾಕೆ?" ಅಂದ. ಅದಕ್ಕೆ ಶಿವಸುಂದರ್ "ಯಾಕೆ ಅಂದ್ರೆ ಇಲ್ಲಿ ಇಷ್ಟೊಂದು ಯುವ ಜನತೆ ಇದ್ದರೂ ಗೌರಿ ನಿನ್ನನ್ನ ಮತ್ತು ಜಿಗ್ನೇಶನನ್ನು ಮಾತ್ರ ತನ್ನ ಮಾನಸ ಪುತ್ರರು ಎನ್ನುತ್ತಾರೆ" ಎಂದಾಗ ಆತ ಜೋರಾಗಿ ನಕ್ಕ. "ಶಿವಸುಂದರ್, ಯಾಕ್ರೀ ನನ್ನ ಇನ್ನೊಬ್ಬ ಪುತ್ರ ಉಮರ್ ಖಾಲಿದ್‌ನನ್ನು ಮರೆಯುತ್ತಿದ್ದೀರಿ" ಎಂದು ನಾನು ತಮಾಷೆ ಮಾಡಿದೆ.

ಕನ್ಹಯ್ಯನ ಭಾಷಣದ ನಂತರ ಅವನನ್ನು ಶಿಕ್ಷಕರ ಭವನಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಹಿರಿಯ ವಿಮರ್ಶಕ ಮರುಳಸಿದ್ದಪ್ಪನವರಿದ್ದರು. ಅವರಿಗೆ ಕನ್ಹಯ್ಯನನ್ನು ಪರಿಚಯಿಸಿದಾಗ ಅವರೂ "ನಮ್ಮ ಕಾಲ ಮುಗಿಯಿತು. ಮುಂದಿನದ್ದು ನಿನ್ನ ಹೆಗಲ ಮೇಲಿದೆ" ಎಂದರು. ಅದಕ್ಕೆ ಕನ್ಹಯ್ಯ "ಸರ್, ನಿಮ್ಮಂತಹವರ ಮಾರ್ಗದರ್ಶನ ನಮ್ಮ ತಲೆಮಾರಿಗೆ ಬೇಕು" ಎಂದು ನಮಸ್ಕರಿಸಿದ. ಆನಂದ್ ತೇಲ್ತುಂಬ್ಡೆ ಮತ್ತು ಅನಿಲ್ ಸದ್ಗೋಪಾಲ್ ಅವರ ಭಾಷಣಗಳು ಮುಗಿದ ನಂತರ ಕನ್ಹಯ್ಯನನ್ನು ಕರೆದುಕೊಂಡು ಹೊರಟೆ. ಬಾಗಿಲ ಹತ್ತಿರ ದೇವನೂರು ಮಹಾದೇವ ಸಿಕ್ಕರು. ಕನ್ಹಯ್ಯನನ್ನು ಅವರಿಗೂ ಪರಿಚಯಿಸಿದೆ. ಆದರೆ ಬಹಳಷ್ಟು ಜನ ಸುತ್ತುವರಿದಿದ್ದರಿಂದ ಅವರಿಬ್ಬರಿಗೂ ಮಾತನಾಡಲು ಸಾಧ್ಯವಾಗಲಿಲ್ಲ. ಎಲ್ಲರೂ ನವಕರ್ನಾಟಕ ಆಫೀಸಿಗೆ ಹೋದೆವು. ಅಲ್ಲಿ ಒಂದಿಷ್ಟು ಹೊತ್ತು ಹರಟುತ್ತಾ ಕೂತೆವು. ಸಂಜೆ ನಾನು ಅಲ್ಲಿಂದ ಹೊರಟಾಗ ನನ್ನನ್ನು ಅಪ್ಪಿಕೊಂಡ ಕನ್ಹಯ್ಯ "ಆದಷ್ಟು ಬೇಗ ಮತ್ತೆ ಬೆಂಗಳೂರಿಗೆ ಬರುತ್ತೇನೆ" ಎಂದು ಮಾತು ಕೊಟ್ಟ.

ಅಂದಹಾಗೆ ಇನ್ನೆರಡು ವಾರಗಳಲ್ಲಿ ಜಿಗ್ನೇಶ್ ಬರುತ್ತಿದ್ದಾನೆ.... ಇಬ್ಬರೂ ಸೇರಿ ನನಗೆ ಮೇಲಿಂದ ಮೇಲೆ 'ಸನ್ ಸ್ಟ್ರೋಕ್' ಕೊಡುತ್ತಿದ್ದಾರೆ...!!! ■


ದೇವನೂರು ಸಿಕ್ಕಾಗ...


ದಯಾನಂದ, ನಾನು, ಪ್ರದ್ಯುಮ್ನ ಮತ್ತು ಕನ್ಹಯ್ಯ



ಡೀಕೆ ಮನೆಯೊಳಗೆ ಬಂಧೂಕುಧಾರಿ ಯೋಧರು





ತಮ್ಮ ಸುರೇಶ್ ಸಿಆರ್‌ಪಿಎಫ್ ಯೋಧರ ಜೊತೆ ಘರ್ಷಣೆ



ಗುಜರಾತ್ ಶಾಸಕರ ಜೊತೆ ಡೀಕೆ

ಗೆದ್ದ ಡೀಕೆ ಎಡವಿದ ಶಾ





ಆಗಸ್ಟ್ 8 ಮಂಗಳವಾರ ಸದಾಶಿವನಗರದ ಡೀಕೆ ಬಂಗಲೆಯಲ್ಲಿ ಏನೋ ಶುಭಕಾರ್ಯವೆಂಬಂತೆ ಸಾಂತ್ವನಕ್ಕೆಂದೇ ಬಂದವರ್‍ಯಾರೂ ಮಾಮೂಲಿನವರಾಗಿರಲಿಲ್ಲ. ಸಿದ್ದಗಂಗೆಯ ಕಿರಿಯ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲನಾಥ ಸ್ವಾಮೀಜಿ ಮತ್ತು ಬೇಲಿಮಠದ ಶಿವರುದ್ರ ಸ್ವಾಮೀಜಿ ಸೇರಿದಂತೆ ಬರೋಬ್ಬರಿ ಅರ್ಧ ಡಜನ್ ಮಠಾಧೀಶರುಗಳು ಬಂದದ್ದು ಆಶೀರ್ವಾದಕ್ಕೆಂದು.

ಎಂಥವರಿಗೂ ಇದು ವಿಚಿತ್ರವೆನಿಸಬಹುದು. ಡೀಕೆ ಕಾಂಗ್ರೆಸ್‌ನ ದೈತ್ಯ ಪ್ರತಿಭೆ. ರಾಜಕೀಯವಾಗಿ ಬಲಾಢ್ಯ ಜನಾಂಗವೊಂದರ ನಾಯಕ ಕೂಡ. ನಡೆದದ್ದು ಆದಾಯ ತೆರಿಗೆ ದಾಳಿ. ಅಂದರೆ ಭ್ರಷ್ಟಾಚಾರದ ಅಕ್ರಮ ಆಸ್ತಿಪಾಸ್ತಿಗಳ ಮೇಲಿನ ದಾಳಿ. ರಾಜಕಾರಣಿಯಿರಲಿ, ಉದ್ಯಮಿಯಾಗಲಿ, ಅಧಿಕಾರಿಯೇ ಇರಲಿ; ಒಮ್ಮೆ ಐಟಿ ದಾಳಿ ನಡೆಯಿತೆಂದರೆ ಆತನನ್ನು ಸಮಾಜ ನೋಡುವುದು ಪಾಪಿಷ್ಠನಂತೆ, ಭ್ರಷ್ಟನಂತೆ ಮತ್ತು ಸಮಾಜಘಾತುಕನಂತೆ!

ಆದರೆ ಡೀಕೆ ವಿಷಯದಲ್ಲಿದು ಅನಿರೀಕ್ಷಿತ ಮತ್ತು ಅಚ್ಚರಿಯೆಂಬಂತಾಗಿದೆ. ಏನೋ ಅಪಘಾತ ನಡೆದಂತೆ, ಅನ್ಯಾಯವೆಂಬಂತೆ ಸಾಂತ್ವನ ಹೇಳಿ ಆಶೀರ್ವದಿಸಲು ಕರ್ನಾಟಕದ ಅಗ್ರಗಣ್ಯರಾದ ಆದಿಚುಂಚನಗಿರಿ ಮತ್ತು ಸಿದ್ದಗಂಗೆಯ ಸ್ವಾಮಿಗಳೇ ಮನೆತನಕ ಪಾದ ಬೆಳೆಸಿದ್ದಾರೆ. ಅದನ್ನು ಬ್ರೇಕಿಂಗ್ ನ್ಯೂಸ್ ಎಂಬಂತೆ ನ್ಯೂಸ್ ಚಾನಲ್ಲುಗಳು ಬಿತ್ತರಿಸುತ್ತವೆ. ಇಲ್ಲಿ ಸಾಂತ್ವನ ಮತ್ತು ಆಶೀರ್ವಾದಕ್ಕೆ ಇರುವ ಕಾರಣಕ್ಕೆ ಹೊಸ ಅರ್ಥ ವಿಲಕ್ಷಣ ವ್ಯಾಖ್ಯಾನವನ್ನೂ ಕಲ್ಪಿಸಲಾಗಿದೆ. ಜನಕ್ಕೆ ಐಟಿ ದಾಳಿಯ ಕಾರಣವಿಲ್ಲಿ ಮುಖ್ಯವೆನಿಸುತ್ತಿಲ್ಲ. ಪ್ರತಿಯೊಬ್ಬರಿಗೂ 'ಅಯ್ಯೋ ಪಾಪ ಡೀಕೆ' ಮೋದಿ-ಅಮಿತ್ ಷಾ ಸೇರಿಕೊಂಡು ಒಕ್ಕಲಿಗರ ನಾಯಕನೊಬ್ಬನ ಮೇಲೆ ಈ ರೀತಿ ದೌರ್ಜನ್ಯವೆಸಗುವುದೇ? ಅಂಥಾ ಜನಾರ್ಧನ ರೆಡ್ಡಿ, ಶ್ರೀರಾಮುಲು, ಸೋಮಶೇಖರ ರೆಡ್ಡಿಯಂಥವರಿಂದ ಜಪ್ತಿ ಮಾಡಿಕೊಂಡಿದ್ದ ಒಂಬೈನೂರು ಕೋಟಿಗೂ ಅಧಿಕ ಮೊತ್ತವನ್ನು ಇದೇ ಐಟಿ ಅಧಿಕಾರಿಗಳು ವ್ಯವಸ್ಥಿತವಾಗಿ ವಾಪಸ್ಸು ಮಾಡುತ್ತಾರೆ. ಅದೇ ಡೀಕೆಯಂಥವರನ್ನು ರಾಜಕೀಯದ ವೈಷಮ್ಯಕ್ಕೆ ಬಿದ್ದು ಜೈಲಿಗೆ ಹಾಕಲು ಯತ್ನಿಸುತ್ತಾರೆ...!

ಮಾಸ್ ಸೈಕಾಲಜಿ

ಹೀಗೆ ಕಳೆದೊಂದು ವಾರದಿಂದ ಇಂಧನ ಸಚಿವ ಡೀಕೆ ಶಿವಕುಮಾರ್, ಅವರ ತಮ್ಮ ಸುರೇಶ್, ಮಾವ ಮೈಸೂರಿನ ತಿಮ್ಮಯ್ಯ, ಎಮ್ಮೆಲ್ಸಿ ರವಿ, ಜ್ಯೋತಿಷಿ ದ್ವಾರಕಾನಾಥ್ ಇತ್ಯಾದಿಗಳ ಮೇಲಾದ ಐಟಿ ದಾಳಿಗೆ ಕರ್ನಾಟಕದ ವಿವಿಧ ದಿಕ್ಕುಗಳಿಂದ ಕೇಳಿಬಂದ ಪ್ರತಿಕ್ರಿಯೆಯಿದು. ಅಂದರೆ ಗಣಿಕಳ್ಳ ಜನಾರ್ದನ ರೆಡ್ಡಿಯನ್ನು ಬಂಧಿಸಿ ಜೈಲಿಗಟ್ಟಿದ್ದಕ್ಕೆ ವ್ಯಕ್ತವಾದ ಸಂತಸ, ಸಮಾಧಾನವಿಲ್ಲಿ ಅನುಕಂಪವಾಗಿ ಬದಲಾಗಿದೆ!

ಇದನ್ನೇ ಮನಶಾಸ್ತ್ರೀಯ ಪರಿಭಾಷೆಯಲ್ಲಿ Mass Psychology ಅನ್ನುವುದು ಅಂದರೆ ಕೆಲವೊಮ್ಮೆ ತಾಂತ್ರಿಕವಾಗಿ ಕಾನೂನಿನ ದೃಷ್ಟಿಯಲ್ಲಿ ಅಕ್ರಮ ಎನಿಸುವುದು ಜನಾಂಗೀಯವಾಗಿ, ರಾಜಕೀಯವಾಗಿ ಬೇರೆಯದೇ ಅರ್ಥ ಪಡೆಯುತ್ತದೆ. ಡೀಕೆ ಮೇಲಿನ ಐಟಿ ರೇಡ್ ರಾಜಕೀಯವಾಗಿ ಬಿಜೆಪಿ ಪಾಲಿಗೆ ದೊಡ್ಡ ಹಿನ್ನಡೆಯಲ್ಲದೆ ಹೋಗಿದ್ದರೆ ಅಮಿತ್ ಶಾ ಏಕಾಏಕಿ ಬೆಂಗಳೂರಿಗೆ ಧಾವಿಸುವ ಅಗತ್ಯವಾದರೂ ಏನಿತ್ತು? ಅದರಲ್ಲೂ ಆದಿಚುಂಚನಗಿರಿ ನಿರ್ಮಲನಾಥ ಸ್ವಾಮೀಜಿಯ ದರ್ಶನಕ್ಕೆ ಮೇಲೆ ಬಿದ್ದು ಮಸ್ಕಾ ಹೊಡೆಯಬೇಕಾದ ಅನಿವಾರ್ಯವಾದರೂ ಏಕೆ ಬರುತ್ತಿತ್ತು?


ಅಂದರೆ ಡೀಕೆ ಮೇಲಿನ ಐಟಿ ದಾಳಿಯೆಂಬುದು ಬಿಜೆಪಿ ಪಾಲಿಗೆ ಸ್ಪಷ್ಟ ರಾಜಕೀಯ ಹಿನ್ನಡೆಯೆಂಬುದನ್ನು ಖುದ್ದು ಅಮಿತ್ ಶಾನೇ ಒಪ್ಪಿಕೊಂಡಂತಾಯ್ತು!

ಬಿಜೆಪಿ ವಿರುದ್ಧ ಸಿಟ್ಟಿಗೆದ್ದ ಒಕ್ಕಲಿಗರನ್ನು ಓಲೈಸಬೇಕೆಂದರೆ ಆ ಮೂಲಕ ಬಿಜೆಪಿಗಾದ ಹಿನ್ನಡೆಯನ್ನು ದುರಸ್ತಿ ಮಾಡಬೇಕೆಂದರೆ ಅದಕ್ಕಿರುವ ಏಕೈಕ ಮಾರ್ಗವೇ ಆದಿಚುಂಚನಗಿರಿ ಮಠಾಧೀಶ ನಿರ್ಮಲನಾಥರನ್ನು ಕಂಡು ಕಾಲಿಗೆ ಬೀಳುವುದು. ಇದಕ್ಕೆಂದೇ ಆಗಸ್ಟ್ 12ರಂದು ಅಮಿತ್ ಶಾ ಬೆಂಗಳೂರಿಗೆ ಬರುತ್ತಿದ್ದಾರೆ ಮತ್ತು ಒಕ್ಕಲಿಗರ ಓಲೈಕೆಯನ್ನು ಮುಚ್ಚಿಕೊಳ್ಳಲೆಂದು ಕಾಟಾಚಾರಕ್ಕಷ್ಟೇ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿಯನ್ನು ಕಾಣಲಿದ್ದಾರೆ. ಅಮಿತ್ ಶಾ ಬೆಂಗಳೂರಿಗೆ ಬರುತ್ತಿರುವುದು ಪೂರ್ವ ನಿರ್ಧಾರಿತ ಕಾರ್ಯಕ್ರಮವೇನಲ್ಲ, ರಾತ್ರೋರಾತ್ರಿ ಏರ್ಪಾಟಾಗಿದ್ದು. ಅಂದರೆ ರಾಜ್ಯ ಬಿಜೆಪಿಯ ನಾಯಕರೇ ಡೀಕೆ ಮೇಲಿನ ದಾಳಿ ನಂತರ ದಕ್ಷಿಣ ಕರ್ನಾಟಕದಲ್ಲಾಗಿರುವ ರಾಜಕೀಯ ಹಿನ್ನಡೆಯನ್ನು ಅಲವತ್ತುಕೊಂಡಿದ್ದಾರೆ.

ಗಣಿ ಡಕ್ಕ ಮಾಫೀ...?

ಬಿಜೆಪಿಗಾಗಲಿ, ಅಮಿತ್ ಶಾಗಾಗಲಿ ಇದು ಅನಿರೀಕ್ಷಿತ ಆಘಾತವೇ. ಈ ಹಿಂದೆ ನಡೆದ ಐಟಿ ದಾಳಿಗಳ ಹಾಗೆಯೇ ಡೀಕೆ ಮೇಲಿನ ದಾಳಿಯನ್ನೂ ಜನ ಭ್ರಷ್ಟಾಚಾರದ ಪ್ರಕರಣವೆಂಬಂತೆ ಬಗೆಯುತ್ತಾರೆಂದೇ ಅಮಿತ್ ಶಾನ ಲೆಕ್ಕಾಚಾರವಾಗಿತ್ತು, ಮೊದಲು ಮುಖ್ಯಮಂತ್ರಿಗಳ ರಾಜಕಿಯ ಕಾರ್ಯದರ್ಶಿ ಎಮ್ಮೆಲ್ಸಿ ಗೋವಿಂದರಾಜು ಮನೆ ಮೇಲೆ ರೇಡಾಯಿತು. ಅದೆಂಥದೋ ಡೈರಿ ಸಿಕ್ಕಿತೆಂದು ಏನೇ ಪುಕಾರೆಬ್ಬಿಸಿದರೂ ಮೂರು ಕಾಸಿನ ಪ್ರಯೋಜನವಾಗಲಿಲ್ಲ. ಆನಂತರ ಲೋಕೋಪಯೋಗಿ ಇಲಾಖಾ ಇಂಜಿನಿಯರ್‌ಗಳಾದ ಚಿಕ್ಕರಾಯಪ್ಪ ಮತ್ತು ಜಯಚಂದ್ರರನ್ನು ಐಟಿಯ ಮೂಲಕವೇ ಬಲಿ ಹಾಕಿದ್ದಾಯ್ತು, ತದನಂತರ ಮಹಿಳಾ ಕಾಂಗ್ರೆಸ್ ನಾಯಕಿ ಲಕ್ಷ್ಮಿ ಹೆಬ್ಬಾಳ್‌ಕರ್. ಆನಂತರ, ಸಚಿವ ರಮೇಶ್ ಜಾರಕಿಹೊಳಿ- ಹೀಗೆ ರಾಜಕೀಯವಾಗಿ ಯಾರನ್ನೆಲ್ಲ ಬಿಜೆಪಿ ಟಾರ್ಗೆಟ್ ಮಾಡಿತ್ತೋ ಅವೆಲ್ಲವೂ ರಾಜಕೀಯವಾಗಿಯೇ ವ್ಯಕ್ತವಾಯಿತು.

ಮತ್ತೊಂದೆಡೆ ಗಣಿ ಡಕಾಯಿತ ಜನಾರ್ದನ ರೆಡ್ಡಿಯನ್ನು ಜೈಲಿನಿಂದ ಹೊರಬೀಳುವಂತೆ ಮಾಡಿದ್ದು ಮತ್ತು ಜಾರಿ ನಿರ್ದೇಶನಾಲಯದಿಂದ ಜಪ್ತಾಗಿದ್ದ 980 ಕೋಟಿ ರೂಪಾಯಿಗಳ ಅಕ್ರಮ ಸಂಪತ್ತನ್ನು ವಾಪಸ್ಸು ಮಾಡಿದ್ದು



ಬಿಜೆಪಿ ಸರ್ಕಾರದ ಐಟಿ-ಇಡಿಗಳ ಸಾಚಾತನ[...] ಅನುಮಾನಿಸುವಂತಾಯಿತು. ಇದೇ ಹ[...] ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ದಾಖ[...] 19 ಎಫ್‌ಐಆರ್ ಗಳನ್ನೂ ಕೋರ್ಟ್ ಮ[...] ರದ್ದುಪಡಿಸಿದ್ದು ಅನುಮಾನ ವನ್ನು ಮತ್ತಷ್ಟು ಹೆ[...] ಇದೆಲ್ಲದರ ನೆತ್ತಿಗೇ ಹೊಡೆದಂತೆ ಗಾಲಿ ರೆಡ್ಡಿ ಐ[...] ಕೋಟಿ ಖರ್ಚು ಮಾಡಿ ತನ್ನ ಮಗಳ ಮದುವೆ ಮಾಡಿ[...] ಐಟಿ ತನ್ನ ಪೌರುಷ ಮರೆಯದೇ ನಿಷ್ಕ್ರಿಯವಾದಾಗ[...] ಬಿಜೆಪಿ ಸರ್ಕಾರದ ಐಟಿ ಕಳ್ಳಾಟದ ಬಗ್ಗೆ ಯಾ[...] ಅನುಮಾನಗಳಿರಲಿಲ್ಲ.

ಅಂದರೆ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು [...] ಸುಣ್ಣವೆಂಬ ಬಿಜೆಪಿಯ ಐಟಿ ಭಯೋತ್ಪಾದ[...] ಅಸಲೀಯತ್ತೇನೆಂಬ ಬಗ್ಗೆ ಯಾರಿಗೂ ಅನುಮಾನಗಳಿ[...] ಇಂಥಾದ್ದರಲ್ಲಿ ಆಗಸ್ಟ್ 2ರ ಡೀಕೆ ವಿರುದ್ಧದ ಐಟಿ ರ[...] ಸಂದರ್ಭ ಮತ್ತು ಕಾರಣಗಳು ಇದೊಂದು ಯಥ[...] ಐಟಿ ದಾಳಿಯಂತಾಗಲಿ ಭ್ರಷ್ಟಾಚಾರದ ವಿರುದ್ಧದ [...] ಹೋರಾಟದಂತಾಗಲಿ ಅನ್ನಿಸಿಕೊಳ್ಳಲು ಸಾಧ್ಯವೇ ಇ[...]


ಎಕೆ 47 ಬಂಧೂಕುಧಾರಿ ಯೋಧರನ್ನು ಬ[...] ಒಬ್ಬ ಕ್ಯಾಬಿನೆಟ್ ಮಂತ್ರಿಯನ್ನು ಯಃಕಶ್ಚಿತ್ ಕ್ರಿಮಿನ[...] ಎಳೆದೊಯ್ದಂತೆ ಕರೆದೊಯ್ದಿದ್ದು, ಸದಾಶಿವನಗರದ [...] ಮನೆಯ ಬಾಲ್ಕನಿಯಿಂದ ಆತನ ಪತ್ನಿ ಮತ್ತು ವ[...] ಭಯಭೀತರಾಗಿ ಮನೆಗೆ ನುಗ್ಗಿದ ಬಂಧೂಕ[...] ಯೋಧರನ್ನು ಕಂಡು ಥರಗುಟ್ಟಿದ್ದು, ಮನೆಯ ಗೇಟಿನ[...] ನಿಲ್ಲಬೇಕಿದ್ದ ಬಂಧೂಕುಧಾರಿಗಳನ್ನು ಮನೆಯೊಳಕ್ಕೆ ನು[...] ಮತ್ತು ಓರ್ವ ಸಂಸದನಾಗಿ ತಮ್ಮ ಸೂರಿಯ[...] ಮನೆಯೊಳಕ್ಕೆ ಬರದೇ ಸಿಆರ್‌ಪಿಎಫ್ ಯೋ[...] ಅಡ್ಡಗಟ್ಟಿದ್ದು ಇತ್ಯಾದಿಗಳೆಲ್ಲವೂ ತಾಂತ್ರಿಕವಾಗಿ [...] ಸಮಂಜಸವೆನಿಸಿದರೂ ರಾಜಕಿಯವಾಗಿ ಬೇರೆ[...] ಸಂದೇಶಗಳನ್ನು ಹೊರಡಿಸುತ್ತದೆ. ದಾಳಿಗೆ ಮೋದಿ ಶಾ[...] ಬಳಸಿಕೊಂಡ ಸಂದರ್ಭವೇ ಅದು ರಾಜಕಿಯವಾಗಿ ಎ[...] ಮೊದಲ ಸೂಚನೆಯಾಗಿತ್ತು.

ಥರಗುಟ್ಟಿದ ಪತ್ನಿ, ಮಕ್ಕಳು

ಗುಜರಾತ್‌ನಲ್ಲಿ ಕಾಂಗ್ರೆಸ್ ಶಾಸಕರ ಕುದುರೆ ಖರಿ[...] ಬಿಜೆಪಿ ಕೈಹಾಕಿತ್ತೆಂಬುದು ಆ ಹೊತ್ತಿಗಾಗಲೇ ದೇಶ[...] ಸುದ್ದಿಯಾಗಿಬಿಟ್ಟಿತ್ತು. ಬಿಜೆಪಿಯ ಧನಬಲ [...] ತೋಳ್ಬಲದ ಮುಂದೆ ಕಾಂಗ್ರೆಸ್ ನಾಯಕ ಅ[...] ಪಟೇಲರನ್ನು ರಾಜ್ಯಸಭೆಗೆ ಗೆಲ್ಲಿಸಲೇಬೇಕಾದ ಸವಾ[...] ತನ್ನ ಹೆಗಲಿಗೆ ಹಾಕಿಕೊಂಡಿದ್ದೇ ಡೀಕೆ ಎಂಬ[...] ರಹಸ್ಯವಾಗುಳಿದಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ [...] ರಾಜಕಿಯದ ಮುತ್ಸದ್ದಿಯೊಬ್ಬ ಮಾಡದ ಯಡ[...] ಅಮಿತ್ ಶಾ ಕೈಯಿಟ್ಟ. ಬಿಡದಿಯ ಈಗಲ್[...] ರೆಸಾರ್ಟಿಗೆ ಸಿಆರ್‌ಪಿಎಫ್ ಬಂದೂಕುಧಾರಿ ಯೋ[...] ಸಮೇತ ಐಟಿ ತಂಡ ದಾಳಿಯಿಟ್ಟಿದ್ದು ಮೋ[...] ಜೋಡಿಯ ಮೂರ್ಖತನವೆನಿಸಿದ್ದು ಅಲ್ಲಿದ್ದ ಗುಜರಾ[...] ಶಾಸಕರ ಕಾರಣಕ್ಕೇ ಎಂಬುದನ್ನು ರಾಜಕಿ[...] ಗೂಂಡಾಗಿರಿಗಿಳಿದ ಅಮಿತ್ ಶಾಗೆ ಅರ್ಥವಾಗುವಂತಿ[...]

ಈಗಲ್‌ಟನ್ ರೆಸಾರ್ಟಿನಲ್ಲಿ ಗುಜರಾತ್ ಕಾ[...] ಶಾಸಕರು ರಾಜಕಿಯ ಆಶ್ರಯ ಪಡೆದದ್ದೇ ಐಟಿ ದಾ[...] ಬಗ್ಗೆ ಬೇರೆಯದೇ ಪೂರ್ವಾಗ್ರಹವೊಂದನ್ನು ಹುಟ್ಟಿ ಹಾ[...] ಸಾಮಾನ್ಯವಾಗಿ ಯಾವುದೇ ಐಟಿ ದಾಳಿಯಿದ್ದರೂ ಸ್ಥ[...] ಪೊಲೀಸರ ರಕ್ಷಣೆ ಪಡೆಯಬೇಕೆಂಬ ಕಾಮನ್‌ಸೆನ್[...]

ಅಮಿತ್ ಶಾನ ಐಟಿ ಭಯೋತ್ಪಾದನೆ ಮತ್ತು ಬಲಿಯಾದ ಲಾಲೂ, ಶಶಿಕಲಾ, ಮಾಯಾವತಿ...!



ಲಾಲೂ | ಮಾಯಾವತಿ | ಶಶಿಕಲಾ | ಮಮತಾ ಬ್ಯಾನರ್ಜಿ | ಪನ್ನೀರ್ ಸೆಲ್ವಂ

ಆದಾಯ ತೆರಿಗೆ, ಜಾರಿ ನಿರ್ದೇಶನಾಲಯ ಮತ್ತು ಸಿಬಿಐನಂಥ ಸಂವಿಧಾನಿಕ ಸಂಸ್ಥೆಗಳನ್ನು ಬಳಸಿಕೊಂಡು ತನ್ನ ರಾಜಕೀಯ ಎದುರಾಳಿಗಳನ್ನು ಬಗ್ಗುಬಡಿಯುತ್ತಲೇ ಬಂದ ಬಿಜೆಪಿ ವಿರುದ್ಧ ಮೊದಲು ದನಿಯೆತ್ತಿದ್ದು ಮಾಯಾವತಿ. ಆ ನಂತರ ಮಮತಾ ಬ್ಯಾನರ್ಜಿಯೂ ಬೀದಿಗಿಳಿದರು.

ಅದೇ ಹೊತ್ತಿಗೆ ಜಯಲಲಿತಾ ತೀರಿಕೊಂಡರೆ ಇದೇ ಇಡಿ ಅಧಿಕಾರಿಗಳನ್ನು ಬಿಟ್ಟು ಶಶಿಕಲಾ ವಿರುದ್ಧ ಪನ್ನೀರ್‌ಸೆಲ್ವಂನನ್ನು ಎತ್ತಿಕಟ್ಟಲಾಯ್ತು, ತನ್ನ ಕೋಟಿಗಟ್ಟಲೆ ಆಸ್ತಿ ಎಲ್ಲಿ ಮಣ್ಣು ಪಾಲಾಗುತ್ತೋ ಎಂದು ಭೀತಿಗೆ ಬಿದ್ದ ಪನ್ನೀರ್‌ಸೆಲ್ವಂ ಅಣ್ಣಾ ಡಿಎಂಕೆಯನ್ನು ಒಡೆದ. ಇದರ ಮತ್ತೊಂದು ಆಯಾಮವೆಂಬಂತೆ ಶಶಿಕಲಾಳನ್ನು ಜೈಲುಪಾಲು ಮಾಡಲಾಯ್ತು, ಬಿಹಾರದಲ್ಲೂ ಲಾಲೂ ಪ್ರಸಾದ್ ಯಾದವ್‌ರನ್ನು ರಾಜಕೀಯವಾಗಿ ಮುಗಿಸಲು ಬಿಜೆಪಿ ಬಳಸಿದ್ದು ಜಾರಿ ನಿರ್ದೇಶನಾಲಯವನ್ನೇ.

ಮೋದಿ-ಅಮಿತ್ ಶಾ ಜೋಡಿಯ ಐಟಿ ಭಯೋತ್ಪಾದನೆಯೆಂಬುದು ರಾಷ್ಟ್ರವ್ಯಾಪಿ ಟೀಕೆ-ಪ್ರತಿಭಟನೆಗೀಡಾದಂತೆ ಗುಜರಾತ್ ಶಾಸಕರ ಬೆನ್ನತ್ತಿ ಡೀಕೆ ಮೇಲೆ ನಡೆಸಿದ ದೌರ್ಜನ್ಯವೂ ಟೀಕೆಗೀಡಾಗಿದೆ.

ಮೂರು ತಿಂಗಳ ಹಿಂದೆ ಗುರು ಎಸ್.ಎಂ. ಕೃಷ್ಣ ಬಿಜೆಪಿ ಸೇರಿಕೊಂಡಾಗಲೇ ಇದು ನಿಚ್ಚಳವಾಯ್ತು. ರಾಜ್ಯ ಕಾಂಗ್ರೆಸ್ ಅಧ್ಯಕ್ಷತೆಗೆ ಡೀಕೆಯೇ ಅನಿವಾರ್ಯವೆಂಬಂತಾದಾಗಲೂ ಮೇಡಂ ಸೋನಿಯಾ ಕೂರಿಸಿಕೊಂಡು ಮಗುವಿನಂತೆ ಪಾಠ ಮಾಡಿದ್ದರು.

ನೀವು ಕೆಪಿಸಿಸಿಗೆ ಅಧ್ಯಕ್ಷರಾದ ಮರುಗಳಿಗೆಯಲ್ಲೇ ನಿಮ್ಮ ಮೇಲೆ ಐಟಿ ದಾಳಿಯಾಗುವುದು ಶತಸ್ಸಿದ್ಧ ಅಂತಲೂ ಎಚ್ಚರಿಸಿದರು. ಮುಖ್ಯಮಂತ್ರಿ ಸಿದ್ದುವೇ 6 ತಿಂಗಳಿಂದ ಐಟಿ ರೇಡಾಗುತ್ತದೆ ಯಾವುದಕ್ಕೂ ಹುಷಾರಾಗಿರುವಂತೆ ಡೀಕೆಯನ್ನು ಎಚ್ಚರಿಸಿದ್ದರು. ಇದೆಲ್ಲವನ್ನೂ ಲೆಕ್ಕ ಹಾಕಿಯೇ ಡೀಕೆ ತನ್ನ ಐಟಿ ಲೆಕ್ಕಪತ್ರಗಳನ್ನು ಸರಿ ಮಾಡಿಟ್ಟುಕೊಂಡು ಯಾವುದೋ ಕಾಲವಾಗಿತ್ತು, ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ ಐಟಿ ದಾಳಿಯ ಬಿಜೆಪಿ ಕಾರಸ್ಥಾನದ ಪಾಡು.

ನಿಜವಾದ ಗಂಡು ಅಂದ್ರೆ ಡಿ.ಕೆ. ಶಿವ್‌ಕುಮಾರ ಕಂಡ್ಳ!



ಶಿವಕುಮಾರನ ಬಗ್ಗೆ ಒಂದಿಷ್ಟು ಚರ್ಚೆಯಾದ ನಂತರ "ಗಂಡು ಅಂದ್ರೆ ಶಿವುಕುಮಾರ ಕಣಯ್ಯ" ಎಂದು ಸೀರ ಮೆಚ್ಚುಗೆಯ ಮಾತನಾಡಿ ಬೀಡಿ ಹಚ್ಚಿದ. ಆಗ ಉಗ್ರಿ,

"ಯಾವ ತರದಲ್ಲಂಗಂತಿ ನೀನು?" ಎಂದ.

"ನೋಡ್ರಪ್ಪ, ದ್ಯಾವೇಗೌಡ ಮತ್ತವನ ಮಕ್ಕಳ ಎದುರಸೋರು ನಮ್ಮ ಜನಾಂಗದಲ್ಲೇ ಯಾರೂ ಇರಲಿಲ್ಲ. ಅಂತದ್ರಲ್ಲಿ ಇವುನು ಎದುರಿಸಿ ನಿಂತವುನೆ. ಗೌಡನ ಮಕ್ಕಳು ಎಲ್ಲಿ ಏನೇ ತುರಾ ತಿರುವಿದ್ರು ಶಿವುಕುಮಾರನ ಮುಂದೆ ಏನೂ ನ್ಯಡಿಯದಿಲ್ಲ. ಅದಕಂಗಂದೆ" ಎಂದ.

"ಅವುನ ಮನೆತಕ್ಕೋದ್ರೆ ಯಾರ್ನು ಬರಿಕೈಲಿ ಕಳಸದಿಲವಂತೆ ಕಂಡ್ಳ" ಎಂದಳು ಜುಮ್ಮಿ.

"ಅದೇನೋ ನಿಜ ಬುಡು. ಬಾಡಿನೆಸುರು ಮಾಡಿದೋರ ಮನೆತಕ್ಕೆ ಬಾಡು ಬಕ್ಕರ್ಯಲ್ಲ ಹೋಗಿ ಸುಳದಾಡತರೆ ನೋಡು, ಅಂಗೆ ಅವುನ ಮನೆ ಗೇಟಿಂದ ಕಾಸು ಕೇಳೋರ್ಯಲ್ಲ ಅಲ್ಯಾಡ್ತರೆ. ಅದ ನೋಡಿ ಈಚೆಗೆ ಬಂದು ಕೇಳಿದ್ರೆ ಕಿಡ್ನಿ ಬದ್ಲಾಸೋರು, ಅರಟು ಆಪಳೇಶನ್ ಮಾಡಿಸಿಗಳರು, ಅಪ್ಪನ ತಿಥಿ ಮಾಡೋರು, ಅವ್ವನ ತಿಥಿ ಮಾಡೋರ್ಯಲ್ಲ ದುಡ್ಡು ಕೇಳ್ತರೆ. ಯಾರ್ನು ಬರಿಗೈಲಿ ಕಳಸದಿಲ್ಲ. ದಿವುಸ ಲಕ್ಷಾಂತ್ರಪಾಯಿ ದಾನ ಮಾಡ್ತರೆ ಕಣಮಾವ. ಅಣ್ಣ ತಮ್ಮ ಇಬ್ರು ಅಷ್ಟೆಯ" ಎಂದ ಉಗ್ರಿ.

"ನಾವೊಂದು ಸತಿ ಹೋಗಿಬರನ" ಎಂದ ಸೀರ.

"ನೀನೋಗಿ ಏನು ಕೇಳ್ತಿಯೋ?"

"ರಗತು ಪುಷ್ಕಿ ಕಡಿಮ್ಯಾಗ್ಯದಂತೆ. ಒಂದೆರಡು ಬಾಟ್ಲಿ ರಗತ ಬುಡಿಸಿಗಳನ ಅಂತ."

"ನೀನು ಅಲ್ಲಿಗೋಗಿ ಬರೊ ದುಡ್ಡಲ್ಲಿ ಮಾಂಸ ಮಡ್ಡಿ ತಗಂಡು ತಿಂದ್ರೆ ರಗತ ಕೂಡಿಕತ್ತದೆ. ಅದು ಬುಟ್ಟು ಯಾರ್‍ಯಾರದೊ ರಗತ ತುಂಬಿಕಂಡು ಮೈ ಯಾಕೆ ಕೆಡಿಸಿಗ್ತಿ" ಎಂದ ಕಾಳಮಾವ.

"ಸೀರ ಮಾವನ ರಗತಕೆ ಹೊಂದಾಣಿಕೆ ಆಗೋ ರಗತ ಕೊಡ್ತರೆ ಕಣಮಾವ. ಅಂಗೆ ಯಾರ್‍ಯಾರದೊ ರಗತ ತಗಂಡು ತುಂಬಿ ಕಳಸಕ್ಕೆ ಅದೇನು ಶರಾಪಿನ ಚೀಲವೆ."

"ಅಂಗಲ್ಲ ಕಂಡ್ಳ ನಾನೇಳಿದ್ದು. ಯಾವ್ಯಾವ್ರೊ ಲೇವುಡಿ ಕೆಲಸ ಮಾಡವ್ರು, ಕಳತನ ಮಾಡವ್ರು, ಸಿನುಮ ನೋಡವ್ಯಲ್ಲ ರಗತ ಮಾರಿ ಬುಡವಂತೆ. ಅಂತ ರಗತ ಇವುನು ತುಂಬಿಕಂಡು ಬಂದ್ರೆ ಕತಿಯೇನು ಅಂತ."

"ಥೂ ಅದಂಗಲ್ಲ ಕಣಮಾವ. ಸೀರಮಾವನ ರಗತ ಯಾರಲ್ಲಿದೆ, ಅಂಥೋರ ರಗತನೆ ತಗದು ಸ್ಟಾಕು ಮಾಡಿರುತರೆ, ಅಂತದು ಮಾತ್ರ ಕೊಡ್ತರೆ. ಬ್ಲಡ್ಡು ಗ್ರೂಪೊಂದಾದ್ರೆ ಮಾತ್ರ ತಗಬವುದು. ಇಲ್ಲ ಅಂದ್ರೆ ಸೀರಮಾವನ ಮನೆ ಮುಂದೆ ಬೆಂಕಿ ಹಾಕ್ತಯಿರದೆಯೆ" ಎಂದು ಉಗ್ರಿ ನಕ್ಕ.

"ಶಿವಕುಮಾರನ ದುಡ್ಡೂ ಬ್ಯಾಡ, ಆ ರಗತನೂ ಬ್ಯಾಡ ಬುಡ್ಳ" ಎಂದ ಸೀರ.

"ಯಾವುದಾರ ದ್ವಡ್ಡ ಕಾಯ್ಲಾದ್ರೆ ಹೋಗನ ಬುಡು. ಕ್ಯಾನ್ಸರು, ಕಿಡ್ನಿ ಆಪರೇಶನ್ನು ಅಂದ್ರೆ ಲಕ್ಷಾಂತ್ರಪಾಯಿ ಕೊಡ್ತನೆ."

"ಅಟೊಂತರ ದುಡ್ಡ ಎಲ್ಲಿ ದುಡುದುನ್ಲ?" ಎಂದಳು ಜುಮ್ಮಿ.

"ಇದೇನೆ ಹಿಂಗಂತಿ ಅಟೊಂತರ ದುಡ್ಡ ಯಾರಾರ ದುಡಿಯಕ್ಕಾದತೆ. ಸರಕಾರದ ಖಜಾನೆ ದುಡ್ಡು ಚಾನಲ್‌ಗಳ ಮುಖಾಂತರ ಇವ್ರುರ ಖಾತೆಗೆ ಬಂದು ತುಂಬಿಕತ್ತದೆ, ಅಷ್ಟೆಯ."

"ಅದ್ಯಾವಾಗ ತುಂಬಿಕಂಡಿತ್ತೂ?"

"ಯಸ್ಸೆಂ ಕಿಸ್ನ ಮುಖ್ಯಮಂತ್ರಿಯಾಗಿದ್ದಾಗ ಕಣಕ್ಕ" ಎಂದುಕೊಂಡು ವಾಟಿಸ್ದೆ ಬಂದ.

"ಶಿವಕುಮಾರ ಗೊತ್ತ ನಿಂಗೆ?"

"ನಾನು ಅವುನು ಕ್ಲೋಸ್ ಫ್ರೆಂಡಾಗಿದ್ವೊ ಕಣಕ್ಕ."

"ಅದ್ಯಾವಾಗ?"

"ಬಂಗಾರಪ್ಪನ ಕಾಲ್ದಲ್ಲಿ ಕಣಕ್ಕ. ಅವುನು ನನ್ನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಾಯಿತ್ತಿಯಾ ಅಂದ. ನಾನೇ ಬ್ಯಾಡ ಅಂದೆ."

"ಅದ್ಯಾಕ್ ಬ್ಯಾಡ ಅಂದೆ?"

"ಯಾಕೆ ಅಂದ್ರೆ ಫೈನಾನ್ಸ್ ಪ್ರಾಬ್ಲಮ್ಮು. ಈ ಕಾಂಗ್ರೆಸ್ಸಿನ ಬ್ಯಾಂಡಿ ಕೊಟ್ಟವುರಲ್ಲ ಇವುರಿಗೆ ಅವುರಿವುರ ಜೋಬು ತೋಡದೇ ಕ್ಯಲಸ. ಹೋಟ್ಯಗೋದಿಯಾ ತಿಂಡಿ ತಿಂದು, ಕಾಫಿ ಕುಡದೋರ್ಯಲ್ಲ ನನ್ನ ಕಡಿಕೆ ಕೈತೋರಿ ಹೋಯ್ತರೆ. ಬಸ್ಸಿಗೋದಿಯಾ, ಕಂಡಕ್ಟರು ಬಂದೇಟಗೆ ನನ್ನ ಕಡಿಕೆ ಕೈತೋರ್ತರೆ. ಫುಟ್‌ಪಾತಲ್ಲಿ ಫ್ರೂಟ್ಸ್ ತಿನ್ನನ ಅಂತ ಹೋದ್ರೆ ಅಲ್ಲಿಗೂ ಬತ್ತರೆ. ಬಾರ್‌ಗೋದರಂತೂ ಮುಗದೇ ಹೋಯ್ತು. ನಾನು ಕುಡಿಯೊ ಮೂರು ಸಿಕ್ಸ್‌ಟಿಗೆ ಸಾವುರುಪಾಯಿ ಬಿಲ್ಲು ನನ್ನ ಟೇಬಲ್ಲಿಗೆ ಬತ್ತದೆ. ಯಾಕೆ ಅಂದ್ರೆ, ಬ್ಯಾರೆ ಟೇಬಲ್ ಬಿಲ್ಲು ನನ್ನ ಟೇಬಲ್ಲಿಗೆ ಬಂದು ಟೋಟ್ಲಾಗಿರ್ತದೆ. ಇದು ಬ್ಲಾಕ್ ಕಾಂಗ್ರೆಸ್ ಪದವಿ ಪಜೀತಿ."

"ಅದನ್ಯಲ್ಲ ಅನುಭವಿಸಿರೋನಂಗೇಳ್ತಿಯಲ್ಲ."

"ಅತ್ರದಿಂದ ನೋಡಿದೆ ಕಣಕ್ಕ. ಕಾಂಗ್ರೆಸ್ ಜವಾಬ್ದಾರಿ ತಗಂಡೋನ ಜೋಬು ಹುಲ್ಲಮದೆ ಆಗಿರಬೇಕು. ಅಂಗಾದ್ರು ಮಾತ್ರ ಜವಾಬ್ದಾರಿ ನಿಭಾಯಿಸಬವುದು. ಆ ಶಕ್ತಿ ಇರದು ಸದ್ದಿಕೆ ಡಿ.ಕೆ. ಶಿವಕುಮಾರನಿಗೆ ಮಾತ್ರ. ಅದ್ಕೆ ಗುಜರಾತಿ ಕಾಂಗ್ರೆಸ್ ಎಮ್ಮೆಲ್ಲೆ ಹಿಂಡ ಪಡಕಂಡು ಬಂದು, ಶಿವಕುಮಾರನ ದೊಡ್ಡಿಲಿ ಇಟಗಂಡಿದ್ದು ಕಳಿಸಿದ್ದು. ಆ ದಾಸತ್ತು ಇರದು ಶಿವಕುಮಾರನಿಗೆ ಮಾತ್ರ."


"ಸಿದ್ದರಾಮಯ್ಯ ಅಂಗೆ ಮಾಡಕ್ಯಾಗದಿಲವೆ."

"ಸಿದ್ದರಾಮಯ್ಯ ತಿಂಡಿ ತಿಂದು, ಕಾಫಿ ಕುಡದ ಬಿಲ್ಲು ಕೊಟ್ಟಿದ್ದ ಯಾರೂ ನೋಡಿಲ್ಲ. ಅವುರಿವುರದೋಗ್ಲಿ, ಸ್ವತಃ ಅವುನ ಬಿಲ್ಲನೆ ಕೊಡದಿಲ್ಲ. ಅವುನೊಂಥರ ಯಲ್ಲ ಸಿದ್ಧವಾಗಿರೊ ಜಾಗದಲ್ಲಿ ಬಂದು ಗದ್ದಗೆ ಊರತನೆ. ಅವುನ್ನು ಶಿವಕುಮಾರನಂಥೋರೆ ನಿಭಾಯಿಸಬೇಕು ಕಣಕ್ಕ."

"ಇವತ್ತಿನ ದಿವಸದಲ್ಲಿ ಅವುನುಬುಟ್ರೆ ಕಾಂಗ್ರೆಸಲ್ಲಿ ವಜಕಟ್ಟಾಗಿರೊ ಜನ ಯಾರಿದ್ದರ್ಲ?" ಎಂದ ಕಾಳಮಾವ.

"ಅದೇನೊ ನಿಜ ದೊಡಪ್ಪ, ಆದ್ರೂವೆ ಡಿ.ಕೆ. ಶಿವಕುಮಾರ ಪಾರ್ಟಿ ಫೈನಾನ್ಸ್ ಪ್ರಾಬ್ಲಂ ನೋಡಿಕಳದ್ರಲಿ ಸ್ಟ್ರಾಂಗಾಗ್ಯವುನೆ. ಅಂಗೆ ನೋಡಿದ್ರೆ, ಯಸ್ಸೆಂ ಕೃಷ್ಣನ ಕಾಲ್ದಲ್ಲಿ ದುಡಕಂಡಿದ್ದ ಈಗ ಖರ್ಚು ಮಾಡ್ತ ಅವುನೆ. ಅದ್ಕೆ ಬಿಜೆಪಿಗಳ ಕಣ್ಣು ಶಿವಕುಮಾರನ ಮ್ಯಾಲೆ ಬಿದ್ದಿರದು."

"ಇಂತದೊಂದು ಅಪಾಯ ನೋಡೆ ಕಣೊ ಕೃಷ್ಣ ಬಿಜೆಪಿಗೋಡಿದ್ದು. ಇಲ್ಲ ಅಂದ್ರೆ ಅವುನಳಿಯನ ಚೀಲ ಹರಿತಿದ್ರು ಈ ಬಿಜೆಪಿಗಳು" ಎಂದ ಉಗ್ರಿ.



ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ನಿಜ ಕಣೊ ಉಗ್ರಿ. ಯಸ್ಸೆಂ ಕೃಷ್ಣ ಹೋಗಿ ಶಾ ಭೇಟಿ ಮಾಡ್ತನೆ ಅಂದ್ರೆ, ಅವುನು ಬಂದೋಗು ಅಂದಿರತನೆ. ಆಗ ಶಾ ಕಿಸ್ನನ ಅಳಿಯನ ಆಸ್ತಿ ಅಳದು ತೋರಿರತನೆ ಅಷ್ಟೆ. ಈ ಕಿಸ್ನ ಹೆದ್ರಿಕಂಡು ಹೋಗಿ ಬಿಜೆಪಿ ಸೇರಿದ. ಆದ್ರೆ ಡಿಕೆಶಿ ಹೋಗಲಿಲ್ಲ. ಯಾಕೆ ಅಂದ್ರೆ ಕಾಂಗ್ರೆಸ್ಸಲವುನು ಕಮ್ಯುನಿಟಿ ಲೀಡ್ರು. ಮುಂದೆ ಮುಖ್ಯಮಂತ್ರಿ ಆಗೋನು. ಅದೇ ಬಿಜೆಪಿಗೋದ್ರೆ ಗದ್ದಗೌಡನಂಗೆ ಕಾಣೊ ಅಶೋಕನ ಹಿಂದೆ ನಿಂತಿರಬೇಕಾಗಿತ್ತು."

"ಆಗೊಂದು ಸತಿ ಮಾರಾಷ್ಟ್ರದ ಎಮ್ಮೆಲ್ಲೆ ಬಂದಿದ್ರಲ್ಲಾ, ಆವುರ ನಿಭಾಯಿಸಿದೋನು ಶಿವಕುಮಾರನೆಯ. ಈಗ್ಲು ಗುಜರಾತಿ ಯಮ್ಮೆಲ್ಲೆ ಹಿಡುದಿಟ್ಟಗಂಡು ತಗಂಡೋಗಿ ಓಟಾಕ್ಸಿ ಆಮದ್‌ಪಟೇಲ ಗೆಲ್ಲಂಗೆ ಮಾಡಿ ಕಾಂಗ್ರೆಸ್ ಲೀಡ್ರು ಅನ್ನಿಸಿಗಂಡವುನೆ. ಆದ್ರಿಂದ ಈ ಶಿವಕುಮಾರ ಕರ್ನಾಟಕದ ಶಾ ಇದ್ದಂಗೆ" ಎಂದ ಉಗ್ರಿ.

"ಶಾ ಅಂದ್ರೆ ಅವುನ್ಯಾರ್ಲ?" ಎಂದ ಸೀರ.

"ಅಮಿತ್ ಶಾ ಅಂತ ಕಣೊ. ದೇಶದಲ್ಲಿ ಬಿಜೆಪಿ ಬ್ಯಳಸಬೇಕು ಅಂತ ಮಾಡಬಾರದ್ನೆ ಮಾಡ್ತ ಅವುನೆ. ಅವುನೊಂಥರ ಮಾರವಾಡಿ ಇದ್ದಂಗೆ. ಮಾರವಾಡಿಗಳು ಊರು ಮದ್ದಿಕೆ ಬಂದು ಸೇರಿಕಂಡು ಆವರಿಸಿಗತ್ತರೆ ನೋಡು. ಅದೇ ತರ ಮಾಡ್ತ ಅವುನೆ. ಅವುನಿಗೆ ಶೆಡ್ಡು ವಡಿಯಕ್ಕೆ ಶಿವಕುಮಾರನೇ ಸರಿ."

"ಯಾವ ಶಾಟನೂ ಶಿವಕುಮಾರನ್ನ ಅಳ್ಳಾಡಸಕ್ಯಾಗದಿಲ್ಲ ಬುಡ್ಳ" ಎಂದ ಸೀರ.

"ಕ್ಯಟ್ಟ ಮಾತಾಡದ ಬುಡ್ಡೆಯಿಲ್ಲ ಕಣ ಮಾವ ನೀನು."

"ಮಿಸ್ಟರ್ ಉಗ್ರಿ, ಯಾವುದಪ್ಪ ಕ್ಯಟ್ಟ ಮಾತು? ಶೋಭ ಕರೆಂದ್ಲಾಜೆಗೆ ಹೋಲಿಸಿದ್ರೆ ನಮ್ಮ ಚಗಪ್ಪನೆ ಪರವಾಗಿಲ್ಲ ಗೊತ್ತೆ."

"ಅವುಳೆಲ್ಲಿ ಕಾಣ್ತಾಯಿಲಪಲ್ಲಾ?"

"ಲೋಕಸಭೆ ನ್ಯಡೀತಾ ಅದೆ. ಅದ ಮುಗಿಸಿಕಂಡು ಬಂದು ಸತ್ತೋರ, ಕ್ಯಟ್ಟೋರ ಪಟ್ಟಿ ತಯಾರಿಸಿಗಂಡು ಇವುರನ್ಯಲ್ಲ ಸಾಬರೆ ವಡದಾಕಿದ್ರು ಅಂತ ಕೂಗ್ತ ತಿರುಗ್ತಳೆ."

"ಅವುಳಿಗ್ಯಾರು ಹೇಳೋರು ಕೇಳೋರು ಇಲವೆ?" ಎಂದ ಕಾಳಮಾವ.

"ಅವುರೆ ದೊಡಪ್ಪ ಬೇಕಾದೋಟು ಜನವುರೆ. ಅವುರ್ಯಲ್ಲ ಅಂಗೇ ಮಾತಾಡು ಅಂತ ಹೇಳಿಕೊಡೊ ಜನ. ಅವುಳೇನು ಮಾಡ್ತಳೇ."

"ಸರಿ ಬುಡು, ಹಾಳಾಗೋಗ್ಲಿ!!!" ●


ದಾಳಿಗೆ ಬಂದವರು ಕಳಕೊಂಡಿದ್ದರು. ಕೇಂದ್ರ ಮೀಸಲು ಪಡೆಯ ಯೋಧರು ಎಕೆ-47 ಬಂದೂಕು ಹಿಡಿದು ಬಿಡದಿ ರೆಸಾರ್ಟಿಗೆ ನುಗ್ಗಿದ್ದು ದಾಳಿಯ ಉದ್ದೇಶ ಕೇವಲ ಕಾನೂನಿಗಷ್ಟೇ ಸೀಮಿತವಾಗಿರದೇ ಭೀತಿ ಹುಟ್ಟಿಹಾಕುವುದು ಮತ್ತು ದೌರ್ಜನ್ಯವೆಸಗುವುದಾಗಿತ್ತೆಂಬುದಕ್ಕೆ ಡೀಕೆಯನ್ನು ಯಃಕಶ್ಚಿತ್ ಕ್ರಿಮಿನಲ್ ಎಂಬಂತೆ ಕಾರಿಗೆ ಹತ್ತಿಸಿಕೊಂಡು ಐಟಿ ಅಧಿಕಾರಿಗಳು ಕರೆದೊಯ್ದಿದ್ದು ಅದೊಂದು ಬಂಧನವೆಂಬಂತೆ ಚಿತ್ರಿಸಿಬಿಟ್ಟಿತು.

ಹಾಗೆ ನೋಡಿದರೆ ಸಿಆರ್‌ಪಿಎಫ್‌ನ ಬಂಧೂಕುಧಾರಿ ಯೋಧರ ಅಗತ್ಯವಿದ್ದದ್ದು ಡೀಕೆ ಬೆಂಬಲಿಗರೇನಾದರೂ ನೂರಾರು ಸಂಖ್ಯೆಯಲ್ಲಿ ಸೇರಿ ಐಟಿ ತಂಡದ ಮೇಲೆ ದಾಳಿ ನಡೆಸುವ ಪರಿಸ್ಥಿತಿಯಿದ್ದಾಗ ಮಾತ್ರವೆ. ಸದಾಶಿವನಗರದ ಬಂಗಲೆಯ ಗೇಟಿನ ಹೊರಗೆ ಬಂಧೂಕುಧಾರಿ ಯೋಧರನ್ನು ನಿಲ್ಲಿಸಬಹುದಿತ್ತು, ಆಗ ಅದಕ್ಕೊಂದು ಅರ್ಥವೂ ಇರುತ್ತಿತ್ತು. ಆದರೆ ಐಟಿ ಅಧಿಕಾರಿಗಳಿಗೆ ವಿವೇಕವೆಲ್ಲಿಂದ ಬರಬೇಕು. ನೇರವಾಗಿ ಡೀಕೆಯ ಮನೆಯೊಳಕ್ಕೇ ಬಂಧೂಕುಧಾರಿಗಳನ್ನು ಬಿಟ್ಟುಕೊಂಡರು. ಹೀಗೆ ಮನೆಯೊಳಕ್ಕೆ ಬಂದ ಬಂಧೂಕುಧಾರಿ ಯೋಧರನ್ನು ಆತಂಕದಿಂದ ಬಾಲ್ಕನಿಯಲ್ಲಿ ನಿಂತು ಭಯಭೀತರಾಗಿದ್ದ ಡೀಕೆ ಪತ್ನಿ ಮತ್ತು ಮಕ್ಕಳ ಫೋಟೋ ಅನ್ನು ಅದ್ಯಾವ ಫೋಟೋಗ್ರಾಫರ್ ಕ್ಲಿಕ್ಕಿಸಿಕೊಟ್ಟನೊ, ಮಾರನೇ ದಿನದ ಪತ್ರಿಕೆಗಳಲ್ಲಿ ಪ್ರಕಟವಾದ ಈ ಫೋಟೋ ಬೇರೆಯದೇ ಚರ್ಚೆಗೆ ಕಾರಣವಾಯಿತು. ಕೇವಲ ಬಾಲ್ಕನಿಯಲ್ಲಿ ನಿಂತು ನೋಡುತ್ತಿದ್ದ ಪತ್ನಿ ಮಕ್ಕಳಷ್ಟೇ ಅಲ್ಲ, ಕೆಳಗೆ ಮನೆಬಾಗಿಲಲ್ಲೇ ನಿಂತಿದ್ದ ಬಂಧೂಕುಧಾರಿ ಯೋಧರ ಫೋಟೋಗಳೂ ಇದೇ ಚಿತ್ರದ ಸಮೇತ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅಂದರೆ ಬಂಧೂಕುಧಾರಿ ಗಳನ್ನು ಕಂಡು ಡೀಕೆ ಪತ್ನಿ ಮತ್ತು ಮಕ್ಕಳು ನಡುಗುವಂತಾಗಿತ್ತು.

ಆದಿಚುಂಚನಗಿರಿ

ಆಗಸ್ಟ್ ಮೂರರ ಹೊತ್ತಿಗೆ ಸಾಮಾಜಿಕವಾಗಿ ಈ ಫೋಟೋಗಳು ಹುಟ್ಟಿಹಾಕಿದ ಆತಂಕ ಬೇರೆಯದೇ ಚರ್ಚೆಗೆ ಕಾರಣವಾದವು. ಗುಜರಾತ್ ಶಾಸಕರಿಗೆ ಆಶ್ರಯ ಕೊಟ್ಟ ಕಾರಣಕ್ಕೇ ಜಿದ್ದಿಗೆ ಬಿದ್ದು ಮೋದಿ ಸರ್ಕಾರ ಡೀಕೆ ಮೇಲೆ ಐಟಿ ದೌರ್ಜನ್ಯಕ್ಕಿಳಿದಿದೆ ಎಂಬಂತೆ ಸರ್ವವ್ಯಾಪಿ ಅಭಿಪ್ರಾಯ ರೂಪುಗೊಂಡಿತ್ತು. ಇದೇ ಹೊತ್ತಿಗೆ ಡೀಕೆ ತಮ್ಮ ಸುರೇಶ್ ಸದಾಶಿವನಗರದ ಬಂಗಲೆಯ ಗೇಟಿನೆದುರು ತನ್ನನ್ನು ಒಳಕ್ಕೆ ಬಿಡದ ಸಿಆರ್‌ಪಿಎಫ್ ಯೋಧರ ಜೊತೆ ಘರ್ಷಣೆಗಿಳಿದ ಸುದ್ದಿಯೂ ಮರುದಿನ ಫೋಟೋ ಸಮೇತ ಪ್ರಕಟಗೊಂಡಿತ್ತು. ಡೀಕೆಯನ್ನು ಬಂಧಿಸುತ್ತಾರಂತೆ, ಜೈಲಿಗೆ ಹಾಕುತ್ತಾರಂತೆ ಎಂಬ ಸುದ್ದಿಗಳೂ ಹಾರಾಡಿದವು. ಆಗಸ್ಟ್ 4ರ ಸಂಜೆಯ ಹೊತ್ತಿಗೆ ಫೇಸ್‌ಬುಕ್ ಮತ್ತು ವಾಟ್ಸಪ್‌ಗಳಲ್ಲಿ ಅಮಿತ್ ಶಾನ ಐಟಿ ಭಯೋತ್ಪಾದನೆಯ ವಿರುದ್ಧ ಆಕ್ರೋಶಗಳು ಹರಿದಾಡಿದವು. 'ಲಿಂಗಾಯತರನ್ನು ಕಳಕೊಂಡಾಯ್ತು ಈಗ ಒಕ್ಕಲಿಗರೂ ತಿರುಗಿಬಿದ್ದರು', ಪ್ರಜಾಪ್ರಭುತ್ವದ ಮೇಲಿನ ಬಿಜೆಪಿ ಗೂಂಡಾಗಿರಿ, ಡೀಕೆ ಮೇಲಿನ ದೌರ್ಜನ್ಯ ಕೆಂಪೇಗೌಡರಿಗೆ ಬಗೆದ ದ್ರೋಹ.... ಇತ್ಯಾದಿ ಶೀರ್ಷಿಕೆಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಇಟ್ಯಾಡಿದ ಇಂಥ ಪೋಸ್ಟುಗಳೇ ಪರೋಕ್ಷವಾಗಿ ಅಮಿತ್ ಶಾ ರಾಜಕೀಯವಾಗಿ ಎಡವಿದ್ದರ ಲಕ್ಷಣವೆನಿಸಿತ್ತು.

ಆಗಸ್ಟ್ 5ರ ಬೆಳಗ್ಗೆ ರೇಡು ಮುಗಿದು ಡೀಕೆಯನ್ನು ಮುಕ್ತಗೊಳಿಸಲಾಯಿತಾದರೂ ಆ ಹೊತ್ತಿಗೆ ಸರಿಯಾಗಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬೆಟ್ಟೇಗೌಡ,



ಒಕ್ಕಲಿಗರ ಸಂಘದ ಬೆಟ್ಟೇಗೌಡ   ಪೂಜಾರಿ ಪಾಳ್ಯ ಕೃಷ್ಣಮೂರ್ತಿ   ನಿರ್ಮಲನಾಥ ಸ್ವಾಮೀಜಿ

ನಿರ್ದೇಶಕರಾದ ಪೂಜಾರಿ ಪಾಳ್ಯ ಕೃಷ್ಣಮೂರ್ತಿ ಮತ್ತು ಜತ್ತೇನಹಳ್ಳಿ ರಾಮಚಂದ್ರ ಮುಂತಾದವರೆಲ್ಲ ಬಹಿರಂಗವಾಗಿ ದಾಳಿ ವಿರುದ್ಧ ಕೂಗಾಡಿಬಿಟ್ಟರು. ಒಕ್ಕಲಿಗರ ಸಂಘವೇ ದಾಳಿ ವಿರುದ್ಧ ಪ್ರತಿಭಟಿಸಿದ್ದು ಸಾಮಾಜಿಕವಾಗಿ ಬೇರೆಯದೇ ಸನ್ನಿಯೊಂದಕ್ಕೆ ಕಾರಣವಾಯಿತು. ಅದು ಒಕ್ಕಲಿಗರ ಜಾತಿಪ್ರಜ್ಞೆ!

ಇನ್ನೇನು ಡೀಕೆಯನ್ನು ಬಂಧಿಸುತ್ತಾರೆಂಬ ವದಂತಿ ಸರ್ವವ್ಯಾಪಿಯಾದಾಗಲೇ ಆದಿಚುಂಚನಗಿರಿ ಸ್ವಾಮಿ ನಿರ್ಮಲನಾಥರು ಬಿಜೆಪಿ ನಾಯಕ ಅನಂತ್‌ಕುಮಾರ್‌ಗೆ ಫೋನ್ ಮಾಡಿ ಭೂತ ಬಿಡಿಸಿದರೆಂದೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರ ಬಳಿ ಡೀಕೆ ಮೇಲೆ ನಡೆದ ಐಟಿ ದೌರ್ಜನ್ಯದ ವಿರುದ್ಧ ಅಸಂತುಷ್ಟಿ ವ್ಯಕ್ತಪಡಿಸಿದರೆಂದೂ ಮತ್ತೊಂದು ವದಂತಿ ಹಬ್ಬಿತ್ತು. ಇಂಥ ಊಹಾಪೋಹಗಳ ಸತ್ಯಾಸತ್ಯತೆಯೇನೇ ಇದ್ದರೂ ಸಾಮಾನ್ಯ ಒಕ್ಕಲಿಗರಿಗಿದು ನಂಬಲೇಬೇಕಾಗಿತ್ತು. ಆಗಸ್ಟ್ 4ರ ರಾತ್ರಿಯ ಈ ಬೆಳವಣಿಗೆಗಳ ಹಿಂದೆಯೇ ಮರುದಿನ ಬೆಳಗ್ಗೆ ಡೀಕೆಯನ್ನು ಬಿಡುಗಡೆ ಮಾಡಲಾಯ್ತು. ಆದರೆ ಐಟಿ ದಾಳಿ ಮುಗಿದಾಕ್ಷಣವೇ ಡೀಕೆ ವರ್ತಿಸಿದ ರೀತಿ ಮತ್ತು ಆ ಮೂಲಕ ಹೊರಡಿಸಿದ ಸಂದೇಶಗಳಂತೂ ಅಕ್ಷರಶಃ ಬಿಜೆಪಿ ಪಾಲಿಗೆ ವಿಪತ್ತಾಗಿ ಪರಿಣಮಿಸಿತು.


"ನಾನೇನೂ ಕಿವಿಗೆ ಹೂವಾ ಮುಡಕೊಂಡು ಬೆಂಗಳೂರಿಗೆ ಬಂದವನಲ್ಲ. ಮೊದಲು ಇಷ್ಟ ದೇವರ ದರ್ಶನ ಮಾಡ್ತೀನಿ. ಪಂಚನಾಮೆ ಕೈಗೆ ಸಿಕ್ಕ ಮೇಲೆ ಮಾತಾಡ್ತೀನಿ..."


ಕೊಂಚವೂ ಧೈರ್ಯಗೆಡದಂತೆ ಅದೇ ಗತ್ತು ಗೈರತ್ತಿನಲ್ಲಿ ಡೀಕೆ ಮೀಡಿಯಾಗಳನ್ನು ಎದುರಿಸಿದ ರೀತಿಯೇ ವಿಲಕ್ಷಣವಾಗಿತ್ತು. ನೇರವಾಗಿ ಕಬ್ಬಾಳಮ್ಮನ ದೇವಸ್ಥಾನಕ್ಕೆ ಹೋಗುತ್ತಾರೆಂಬ ಸುದ್ದಿ ಹಬ್ಬಿದ್ದು, ಆ ನಂತರ ಬಿಡದಿ ರೆಸಾರ್ಟಿನಲ್ಲಿ ಕಾಣಿಸಿಕೊಂಡು ಗುಜರಾತ್ ಶಾಸಕರನ್ನೆಲ್ಲ ವಿಧಾನಸೌಧದ ವೀಕ್ಷಣೆಗೆ ಕರೆತಂದದ್ದು, ಮರುಗಳಿಗೆಯಲ್ಲಿ ರಾಜ್ಯಪಾಲ ವಜುಭಾಯಿ ವಾಲಾರೆದುರು ಗುಜರಾತ್‌ನ ಅಷ್ಟೂ ಶಾಸಕರನ್ನು ಕರೆದೊಯ್ದು ಪೆರೇಡ್ ನಡೆಸಿದ್ದು ಡೀಕೆಯ ಎದೆಗಾರಿಕೆಗೆ ಸಾಕ್ಷಿಯಂತಿತ್ತು. ಮೋದಿಯ ಆಪ್ತ ಬಂಟ ವಜುಭಾಯಿವಾಲಾರೆದುರೇ ಗುಜರಾತ್‌ನ ಕಾಂಗ್ರೆಸ್ ಶಾಸಕರ ಪೆರೇಡು ನಡೆಸಿದ್ದು ಮೋದಿಯ ಗುಹೆಗೇ ನುಗ್ಗಿ ಘರ್ಜಿಸಿದಂತಿತ್ತು. ಯಾವತ್ತು ಅಹ್ಮದ್ ಪಟೇಲರನ್ನು ಸೋಲಿಸುವುದು ಸಾಧ್ಯವಿಲ್ಲವೆಂಬುದು ಅಮಿತ್ ಶಾಗೆ ಮನದಟ್ಟಾಯಿತೋ, ತಾನು ಡೀಕೆ ಮೇಲೆ ಮಾಡಿಸಿದ ಐಟಿ ದೌರ್ಜನ್ಯ ರಾಜಕೀಯವಾಗಿ ಬಿಜೆಪಿಗೇ ಆಪತ್ತೆಂಬುದು ಸ್ಪಷ್ಟವಾಯಿತೋ ಶಾನ ಡ್ಯಾಮೇಜ್ ಕಂಟ್ರೋಲ್ ಕಾರ್ಯಾಚರಣೆ ಶುರುವಾಯಿತು.

ಅಂದರೆ ಆದಿಚುಂಚನಗಿರಿ ಮಠಾಧೀಶರನ್ನೇ ಮಸ್ಕಾ ಹೊಡೆಯುವುದು. ಅಮಿತ್ ಶಾ ಆದಿಚುಂಚನಗಿರಿಗೆ ಬರುವುದಾಗಲಿ, ನಿರ್ಮಲನಾಥರ ಒಲೈಕೆಯಾಗಲಿ ಬಿಜೆಪಿಗೆ ಹೋದ ಮಾನವನ್ನು ಮತ್ತೆ ಗಳಿಸಿಕೊಡುತ್ತವೆ ಎಂಬುದು ಮೂರ್ಖತನವಷ್ಟೆ. ಅದು ಕೊಂದ ಪಾಪಕ್ಕೆ ತಿಂದು ಪರಿಹಾರವೆಂಬಂತೆ ಕಾಣಿಸುತ್ತದೆ. ಐಟಿ ದಾಳಿಯೊಂದನ್ನು ರಾಜಕೀಯ ಅಸ್ತ್ರವಾಗಿ ಪ್ರಯೋಗಿಸಿದರೆ ಅದೇ ಹೇಗೆ ತಿರುಗುಬಾಣವಾಗುತ್ತದೆ ಎಂಬುದನ್ನು ಮೋದಿ-ಶಾ ಜೋಡಿ ಅರ್ಥ ಮಾಡಿಕೊಂಡಿರಲೇಬೇಕು. ಇದೇ ವೇಳೆ ಡೀಕೆಯ ಮುಖದಲ್ಲಿ ಇಣುಕುವ ಹೀರೋ ಕಳೆಯನ್ನೂ ಗಮನಿಸಬೇಕು.

■ ದಾ. ಸೋಮನಾಥ್

ಕೊಡಗು: ವಿಶ್ವನಾಥ್‌ಗೆ ಶಾಕ್ ಕೊಟ್ಟ ಜೆಡಿಎಸ್ ಗದ್ದಲ







ಕೊಡಗು ಜೆಡಿಎಸ್‌ನಲ್ಲಿ ಒಣಪ್ರತಿಷ್ಠೆಯ ಕಾಯಿಲೆ ಉಲ್ಬಣಿಸಲು ಶುರುವಾಗಿದೆ. ಇತ್ತ ಜೆಡಿಎಸ್ ನಾಯಕರು ಶತಾಯಗತಾಯ ಮುಂದಿನ ಸರ್ಕಾರ ರಚನೆಯಲ್ಲಿ ಕಿಂಗ್‌ಮೇಕರ್ ಆಗಬೇಕೆನ್ನುವ ಹಂಬಲದಲ್ಲಿದ್ದರೆ ಅತ್ತ ಕೊಡಗಿನಲ್ಲಿ ನಾಯಕರ ನಡುವಿನ ಜಂಗೀಕುಸ್ತಿ ಕಾರ್ಯಕರ್ತರನ್ನು ತಬ್ಬಿಬ್ಬು ಮಾಡಿದೆ. ಹೇಳಿಕೇಳಿ ಕೊಡಗಿನಲ್ಲಿ ಬಿಜೆಪಿಯ ಹಿಡಿತ ಜೋರು. ಕಾಂಗ್ರೆಸ್‌ನಂತಹ ಕಾಂಗ್ರೆಸ್ಸೇ ಅಲ್ಲಿ ಬರ್ಕತ್ತಾಗಲು ಹೆಣಗಾಡುತ್ತಿದೆ. ಅಂತದ್ದರಲ್ಲಿ ಜೆಡಿಎಸ್‌ಗೆ ಮಡಿಕೇರಿಯಲ್ಲಿ ಸಣ್ಣದೊಂದು ಅವಕಾಶವಿದೆ. ಆದ್ರೆ ಸ್ಥಳೀಯ ನಾಯಕರು ಕಂ ಮಾಜಿ ಮಂತ್ರಿಗಳಾದ ಬಿ.ಎ.ಜೀವಿಜಯ ಹಾಗೂ ಎಂ.ಸಿ.ನಾಣಯ್ಯ ನಡುವಿನ ಪ್ರತಿಷ್ಠೆಯ ಕದನ ಅದನ್ನು ಹಾಳು ಮಾಡಲು ಮುಂದಾಗಿರೋದು ಜೆಡಿಎಸ್‌ಗೆ ತಲೆನೋವಾಗಿದೆ.

ಜೀವಿಜಯ, ನಾಣಯ್ಯ ನಡುವೆ ಹಾವುಮುಂಗಸಿಯ ಸಂಬಂಧ ಇರೋದು ಹೊಸ ಸಂಗತಿಯೇನೂ ಅಲ್ಲ. ಒಬ್ಬರ ಮುಖ ಕಂಡರೆ ಮತ್ತೊಬ್ಬರಿಗೆ ಆಗದಷ್ಟು ಅಗಾಧ ದುಶ್ಮನಿ. ಆದರೆ ಮುಂದಿನ ಎಲೆಕ್ಷನ್‌ನಲ್ಲಿ ಮಡಿಕೇರಿಯಲ್ಲಿ ಗೆಲ್ಲಬೇಕಾದರೆ ಈ ಇಬ್ಬರೂ ನಾಯಕರು ಒಂದಾಗಬೇಕಾದ್ದು ಜೆಡಿಎಸ್‌ಗಿರುವ ಅನಿವಾರ್ಯತೆ. ಅದನ್ನು ಮನಗಂಡೇ ಸೆಕೆಂಡ್‌ಲೈನ್ ಲೀಡರ್‌ಗಳು ಮತ್ತು ಕಾರ್ಯಕರ್ತರು ಈ ಎರಡು ಧ್ರುವಗಳನ್ನು ಒಟ್ಟುಗೂಡಿಸಲು ಅನೇಕ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಅವ್ಯಾವುವೂ ಫಲ ಕೊಟ್ಟಿಲ್ಲ. ಸಂಧಾನಕ್ಕೆ ತಾನು ಸಿದ್ಧ ಅಂತ ಹೇಳಿರುವ ನಾಣಯ್ಯ ಅಮೆರಿಕಾಕ್ಕೆ ಹೋಗಿ ಕೂತಿದ್ದರೆ, ಏನೇ ಆದರೂ ನಾನು ನಾಣಯ್ಯನ ಜೊತೆ ವೇದಿಕೆ ಹಂಚಿಕೊಳ್ಳಲ್ಲ ಅಂತ ಜೀವಿಜಯ ಹಠ ಹಿಡಿದಿದ್ದಾರೆ.

ಎಲೆಕ್ಷನ್ ಸನಿಹಕ್ಕೆ ಬಂದಂತೆ ಇದು ಸುಧಾರಿಸಬಹುದೆನ್ನುವ ನಿರೀಕ್ಷೆ ಕಾರ್ಯಕರ್ತರಿಗೆ ಇತ್ತಾದರು ಯಾಕೋ ಅದು ಹುಸಿಯಾಗುವ ಸಂಭವವೇ ಹೆಚ್ಚು. ಮೊನ್ನೆ ಒಂದಷ್ಟು ಎಚ್.ವಿಶ್ವನಾಥ್ ಬೆಂಬಲಿಗರು ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರ್ಪಡೆಗೊಂಡ ಮಡಿಕೇರಿ ಕಾರ್ಯಕ್ರಮ ಅದನ್ನು ಪುಷ್ಟೀಕರಿಸಿದೆ. ವಿಶ್ವನಾಥ್ ಯಾವಾಗ ಸಿದ್ದರಾಮಯ್ಯನ ವಿರುದ್ಧ ಬಂಡೆದ್ದು ಜೆಡಿಎಸ್ ಸೇರಿದರೋ ಆಗಿನಿಂದ ಕೊಡಗಿನಲ್ಲಿ ಜೆಡಿಎಸ್‌ಗೆ ಭರವಸೆ ಚಿಗುರಿತ್ತು. ಯಾಕೆಂದ್ರೆ ಮೈಸೂರು-ಕೊಡಗು ಸಂಸದರಾಗಿದ್ದ ಅವಧಿಯಿಂದಲೂ ವಿಶ್ವನಾಥ್‌ಗೆ ಅಲ್ಲಿ ಬೆಂಬಲಿಗರಿದ್ದಾರೆ. ಜಿಲ್ಲಾ ಕಾಂಗ್ರೆಸ್ ನಾಯಕತ್ವವನ್ನು ಸಂಪೂರ್ಣ ತನ್ನ ಮುಷ್ಠಿಯಲ್ಲಿಟ್ಟುಕೊಂಡು ಮೆರೆದಾಡುತ್ತಿರುವ ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯನ ದರ್ಪಕ್ಕೆ ಬೇಸತ್ತ ಒಂದಷ್ಟು ಕಾಂಗ್ರೆಸ್ ಅತೃಪ್ತ ನಗರಸಭಾ ಸದಸ್ಯರು, ಕೆಲವು ಗ್ರಾಮ ಪಂಚಾಯತಿಯ ಸದಸ್ಯರುಗಳು ಮೊನ್ನೆ ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನೂ ಆಗಿರುವ ನಗರಸಭಾ ಸದಸ್ಯ ಕಂ ಚೇಂಬರ್ ಆಫ್ ಕಾಮರ್ಸ್ ಬ್ಯಾಂಕಿನ ಅಧ್ಯಕ್ಷ ಕೆ.ಎಂ.ಬಿ. ಗಣೇಶ್ ನೇತೃತ್ವದಲ್ಲಿ ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರಿಕೊಂಡರು. ಅದಕ್ಕೊಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅವರನ್ನು ಪಕ್ಷಕ್ಕೆ ಆಹ್ವಾನಿಸಲು ಖುದ್ದು ವಿಶ್ವನಾಥ್‌ರೇ ಹಾಜರಿದ್ದರು.

ಸಹಜವಾಗಿಯೇ ಜೀವಿಜಯ ಕೂಡಾ ಅದರಲ್ಲಿ ಭಾಗವಹಿಸುವುದಿತ್ತು. ಕಾರ್ಯಕ್ರಮ ಶುರುವಾಗುವುದಕ್ಕಿಂತ ಮುನ್ನ ಈ ನಾಯಕರೆಲ್ಲ ಸುದರ್ಶನ ಅತಿಥಿಗೃಹದಲ್ಲಿ ಜಮಾಯಿಸಿದ್ದರು. ಫಂಕ್ಷನ್ ನಡೆಯುತ್ತಿದ್ದ ಸ್ಥಳದಲ್ಲಿ ಕಾರ್ಯಕರ್ತರು ಒಂದಷ್ಟು ಬ್ಯಾನರ್‌ಗಳನ್ನು ಕಟ್ಟಿದ್ದರು. ಆ ಬ್ಯಾನರ್‌ಗಳಲ್ಲಿ ಜೆಡಿಎಸ್‌ನ ರಾಜ್ಯ ಮತ್ತು ಸ್ಥಳೀಯ ನಾಯಕರುಗಳ ಫೋಟೊ ಸಹಜವಾಗಿಯೇ ರಾರಾಜಿಸುತ್ತಿದ್ದವು. ದೂರದ ಅಮೆರಿಕದಲ್ಲಿದ್ದ ಕಾರಣಕ್ಕೆ, ಅವತ್ತಿನ ಕಾರ್ಯಕ್ರಮದಲ್ಲಿ ಗೈರು ಆಗಲಿದ್ದ ನಾಣಯ್ಯನ ಫೋಟೊ ಕೂಡಾ ಇತ್ತು. ನಾಣಯ್ಯ ಮತ್ತು ಜೀವಿಜಯ ನಡುವಿನ ಎಣ್ಣೆಸೀಗೇಕಾಯಿ ಸಂಬಂಧ ತಿಳಿದಿದ್ದ ಒಂದಷ್ಟು ಬಗಲ್-ಕಾ ದುಶ್ಮನ್‌ಗಳು ಆ ಸುದ್ದಿಯನ್ನು ಜೀವಿಜಯರ ಕಿವಿಗೆ ಹಾಕಿದ್ದರು. ಅಷ್ಟಕ್ಕೇ





ಕೆಂಡಮಂಡಲವಾದ ಜೀವಿಜಯ, ನಾಣಯ್ಯ ಫೋ ಇರುವ ಬ್ಯಾನರ್‌ಗಳನ್ನು ತೆರವು ಮಾಡುವವರೆಗೆ ತಾನ ಕಾಲಿಡಲ್ಲ ಎಂದು ಹಠ ಹಿಡಿದು ಕೂತರು.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಹೊ ವಂತಹ ಜಿಲ್ಲಾ ಪಂಚಾಯತಿಯ ಮಾಜಿ ಅ ವಿ.ಎಂ.ವಿಜಯರು ಸಮಾಧಾನ ಮಾಡಲು ಯತ್ನಿಸಿದ ಜೀವಿಜಯಾ ಮೊಂಡಾಟ ಜೋರಾಗುತ್ತಲೇ ಹೋ ಕೊನೆಗೆ ಸಿಟ್ಟಿಗೆದ್ದ ವಿಜಯ್ 'ವಿಧಾನಸಭಾ ಚುನಾವಣೆ ಸ್ಪರ್ಧಿಸುವುದು ನೀವು, ಬೇಕಿದ್ದರೆ ಬನ್ನಿ, ಇಲ್ಲದಿದ್ದರೆ ನೀವು ಬಾರದಿದ್ದರೆ ಸಭೆಯನ್ನೇ ರದ್ದು ಮಾಡುತ್ತ ಎಂದು ತಿರುಗಿ ಬಿದ್ದರೂ ಜೀವಿಜಯ ಜಗ್ಗಲಿಲ್ಲ. ಇದಿ ಹೈಡ್ರಾಮಾ ವಿಶ್ವನಾಥ್‌ರ ಕಣ್ಣೆದುರೇ ನಡೆಯಿ ದೇವೇಗೌಡರ ಪಕ್ಷವನ್ನು ಕಟ್ಟುವ ಹುಮ್ಮಸ್ಸಿನಲ್ಲಿ ಬಂ ಅವರಿಗೆ ಜೀವಿಜಯರ ವರ್ತನೆ ಕಂಡು ಶಾಕ್ ಆಗಿರಲ ಸಾಕು. ಕೊನೆಗೆ ಅವರೇ ಅಖಾಡಕ್ಕಿಳಿದು 'ನಾಯಕ ನೀವೆಲ್ಲ ಹೀಗೆ ಹಠ ಮಾಡುವುದಾದರೆ, ನಾನು ಕಾರ್ಯಕ್ರಮದಲ್ಲೇ ಭಾಗವಹಿಸಲ್ಲ' ಅಂತ ಹೊರ ನಿಂತಾಗಲೇ ಜೀವಿಜಯರು ಮೆತ್ತಗಾಗಿ ಕಾರ್ಯಕ್ರ ವೇದಿಕೆಯತ್ತ ಹೆಜ್ಜೆ ಹಾಕಿದ್ದು.

ಬಿಜೆಪಿಯ ಕಪಿಮುಷ್ಠಿಯ ನಡುವೆಯ ಜೀವಿಜಯರಿಗೆ ಮಡಿಕೇರಿ ಮೇಲೆ ಸಾಕಷ್ಟು ಹಿಡಿತವ 1983ರಲ್ಲಿ ಅಂದಿನ ಮುಖ್ಯಮಂತ್ರಿ ಆರ್. ಗುಂಡೂರಾ ರನ್ನು ಸೋಮವಾರಪೇಟೆ ಕ್ಷೇತ್ರದಲ್ಲಿ ಸೋಲಿಸಿ ಪ್ರಥ ಬಾರಿಗೆ ಜನತಾ ಪಕ್ಷದಿಂದ ವಿಧಾನಸಭೆ ಪ್ರವೇಶಿ ಜೀವಿಜಯಾಗೆ ಅದೇ ಕಾರಣಕ್ಕೆ ರಾಮಕೃಷ್ಣ ಹೆ ಸರ್ಕಾರದಲ್ಲಿ ಮಂತ್ರಿಗಿರಿಯೂ ಒಲಿದುಬಂದಿ

ಮೈಸೂರು: ಪಾಪ, ಶ್ರೀನಿವಾಸ್ ಪ್ರಸಾದ್‌ರಿಗೆ ಹೀಗಾಗಬಾರದಿತ್ತು

'**ನಾ**ನು ಪಕ್ಷ ಬದಲಾಯಿಸುತ್ತಿದ್ದೇನೆಯೇ ಹೊರತು ನನ್ನ ವ್ಯಕ್ತಿತ್ವವನ್ನಲ್ಲ'.

ಸಿದ್ದು ಮೇಲಿನ ಸಿಟ್ಟಿಗೆ ಕಾಂಗ್ರೆಸ್ ಬಿಟ್ಟು ಕೋಮುವಾದಿ ಬಿಜೆಪಿ ಕೈಹಿಡಿಯುವ ಸಂದರ್ಭದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಹೇಳಿದ್ದ ಮಾತಿದು. ಆದರೆ ಈಗ ಅವರ ವರ್ತನೆಗಳನ್ನು ತೂಗಿ ನೋಡಿದರೆ ಪಕ್ಷವಷ್ಟೆ ಅಲ್ಲ, ಅವರ ವ್ಯಕ್ತಿತ್ವವೂ ಬದಲಾಗಿರೋದು ಗಮನಕ್ಕೆ ಬರುತ್ತೆ. ಯಾವ ಮೋದಿಯನ್ನು ದಲಿತ-ಅಲ್ಪಸಂಖ್ಯಾತ ವಿರೋಧಿ ಎಂದು ಆಪಾದಿಸಲಾಗುತ್ತಿದೆಯೋ ಅದೇ ಮೋದಿ ಇವತ್ತು ಸೋ-ಕಾಲ್ಡ್ ದಲಿತ ನಾಯಕ ಶ್ರೀನಿವಾಸ್ ಪ್ರಸಾದ್‌ರ ಮಾನಸಗುರು! ಹಿರಿಯರನ್ನು ಗೌರವಿಸೋದನ್ನು ಮೋದಿಯಿಂದ ಕಲೀಬೇಕು, ಅಧಿಕಾರ ವಹಿಸಿಕೊಂಡ ಕೆಲ ದಿನಗಳಲ್ಲೆ ಇಡಿ ಜಗತ್ತು ತನ್ನತ್ತ ತಿರುಗಿ ನೋಡುವಂತೆ ಮಾಡಿದ ಮೋದಿ ಈಸ್ ಗ್ರೇಟ್... ಹೀಗೆ ದಿನನಿತ್ಯ ಮೋದಿಯನ್ನು ಫೇಸ್‌ಬುಕ್‌ನಲ್ಲಿ ಹೀನಾಮಾನ ಹೊಗಳೋದೆ ಪರಾಜಿತ ಪ್ರಸಾದ್‌ರ ಏಕಮಾತ್ರ ಉದ್ಯೋಗ. ದುರಂತವೆಂದರೆ ಶ್ರೀನಿವಾಸ್ ಪ್ರಸಾದ್‌ರ ಸುತ್ತಲೂ ದಲಿತರ ಮೇಲಿನ ಜಾತಿ ದೌರ್ಜನ್ಯಗಳು ಮೊದಲಿಗಿಂತ ಹೆಚ್ಚಾಗಿದ್ದರೂ ಅದರ ಬಗ್ಗೆ ತುಟಿಪಿಟಿಕ್ ಎನ್ನದ ಅವರು ಮೋದಿ ಭಜನೆಯನ್ನು ಮಾತ್ರ ಮಿಸ್ ಮಾಡುತ್ತಿಲ್ಲ.

ಒಂದು ತಿಂಗಳಿಂದ ನಂಜನಗೂಡು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕೋಮು ಸಂಘರ್ಷಗಳು ಶುರುವಾಗಿವೆ. ಇದಕ್ಕೆ ಕಾರಣಗಳೇನು? ಅದಕ್ಕೆ ಪರಿಹಾರಗಳೇನು? ಎಂದು ಯೋಚಿಸಬೇಕಾಗಿದ್ದ ಶ್ರೀನಿವಾಸ ಪ್ರಸಾದ್ ತನ್ನ ಹಿಂಬಾಲಕರ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಅದರ ಲಾಭ ಪಡೆಯಲು ಮುಂದಾಗಿರೋದು ದುರಂತ. ನಂಜನಗೂಡು ತಾಲ್ಲೂಕಿನ ಹೆಮ್ಮರಗಾಲದಲ್ಲಿ ದಲಿತರ ಕೇರಿಯ ಮುಂಭಾಗದ ಬೋರ್ಡ್‌ನಲ್ಲಿದ್ದ ಅಂಬೇಡ್ಕರ್ ಭಾವಚಿತ್ರಕ್ಕೆ ಅದ್ಯಾರೊ ಕಿಡಿಗೇಡಿಗಳು ಸಗಣಿ ಎರಚಿದ್ದಾರೆ. ಆ ಊರಿನ ಉಪ್ಪಾರ ಸಮುದಾಯದವರೇ ಹೀಗೆ ಮಾಡಿದ್ದಾರೆ ಎಂದು ಆರೋಪಿಸಿರುವ ದಲಿತ ಯುವಕರು ಆ ಸಮುದಾಯದವರ ಮೇಲೆ ಹೋದ ಬಂದಕಡೆ ಹಲ್ಲೆ ಮಾಡಿದ್ದರು. ಜಗಳ ತಾರಕಕ್ಕೇರಿ ಊರಿನಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಈ ಸುದ್ದಿ ಪಕ್ಕದ ಬದನವಾಳು ಗ್ರಾಮದಲ್ಲೂ ಉದ್ವಿಗ್ನತೆ ಉಂಟುಮಾಡಿತ್ತು. ಇದಿಷ್ಟೇ ಅಲ್ಲ, ನಂಜನಗೂಡು ತಾಲ್ಲೂಕಿಗೆ ಸೇರಿದ ದೇವನೂರು, ಕಳಲೆ, ಹಗಿನವಾಳು, ಹೊಳಗೆರೆ, ಸಿಂಗಾರಿಪುರ, ಸಿಂಧುವಳ್ಳಿ, ರಾಜೂರು, ನವಿಲೂರು, ನಂದಗುಂದ, ಮುದ್ದಹಳ್ಳಿ, ನಗರ್ಲೆ, ಹೊಳಗೆರೆ ಮುಂತಾದ ಊರುಗಳಲ್ಲಿ ಜಾತಿ ದೌರ್ಜನ್ಯದ 25ಕ್ಕೂ ಹೆಚ್ಚು ಪ್ರಕರಣಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ.

ತಾನೊಬ್ಬ ದಲಿತ ನಾಯಕ ಎಂದೇಳಿಕೊಳ್ಳುವ ಶ್ರೀನಿವಾಸ್ ಪ್ರಸಾದ್ ಇಂತಹ ಅಸಹಿಷ್ಣುತೆಗೆ ಮದ್ದು ಅರೆಯುವುದನ್ನು ಬಿಟ್ಟು ಸೋಶಿಯಲ್ ನೆಟ್‌ವರ್ಕ್ ಮೂಲಕ ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಮುಂದಾಗಿದ್ದಾರೆ. ಶ್ರೀನಿವಾಸ ಪ್ರಸಾದ್‌ರು ಸೋತ ನಂತರ ಈ ತರದ ದೌರ್ಜನ್ಯಗಳು ಹೆಚ್ಚಾಗಿವೆ, ಸ್ವಾಭಿಮಾನಿ ಶ್ರೀನಿವಾಸ್ ಇಲ್ಲದ ನಂಜನಗೂಡಿನಲ್ಲಿ ದಲಿತ ಭದ್ರತೆಯೇ ಇಲ್ಲವಾಗಿದೆ, ದಲಿತರು ಹೆದರಿಕೊಂಡು ಜೀ ಸಾಗಿಸುತ್ತಿದ್ದಾರೆ, ಶ್ರೀನಿವಾಸ ಪ್ರಸಾದ್ ಉಪಚುನಾವಣೆ ಗೆದ್ದಿದ್ದರೆ ಹೀಗಾಗುತ್ತಿರಲಿಲ್ಲ, ಅವರ ವಿರುದ್ಧ ಗೆದ್ದ ದಲಿತರ ಪರವಾಗಿ ನಿಲ್ಲಲು ಶಕ್ತಿ ಇಲ್ಲದವರು ಎಂ ಫೇಸ್‌ಬುಕ್-ವ್ಯಾಟ್ಸಪ್ ಸಂದೇಶಗಳು ನಂಜನಗೂ ಮೊಬೈಲ್‌ಗಳ ತುಂಬಾ ಹರಿದಾಡಲು ಶುರುಮಾ ಒಂದು ಕಾಲಕ್ಕೆ ಧೀಮಂತ ರಾಜಕಾರಣಿ ಎನಿಸಿಕೊಂ ಶ್ರೀನಿವಾಸ್ ಪ್ರಸಾದ್‌ರು ನೈತಿಕವಾಗಿ ಈ ಮ ಕುಸಿದುಹೋಗುತ್ತಾರೆಂದು ಯಾರೂ ನಿರೀಕ್ಷಿಸಿರಲಿಲ್ಲ

ಅನಾರೋಗ್ಯದ ಕಾರಣದಿಂದ ಸರಿಯಾಗಿ ಕೆ ಮಾಡಲಾಗದ ಅವರ ಅಸಹಾಯಕತೆಯ ಕಾರ ಮಂತ್ರಿಗಿರಿಯಿಂದ ತೆಗೆದದ್ದೇ ಸ್ವಾಭಿಮಾನದ ಸಮರ ಘೋಷಿಸಿದ್ದ ಪ್ರಸಾದ್‌ರು ಇವತ್ತು ದಲಿತರ ಸ್ವಾಭಿಮಾನ ತಮ್ಮ ಪೊಲಿಟಿಕಲ್ ಎನ್‌ಕ್ಯಾಶ್‌ಗೆ ನಿಂತಿದ್ದಾರೆ. ನೋಡಿದರೆ, ಅವರ ಕಂದಾಯ ಖಾತೆಯನ್ನು ಹೆಗಲಿಗೇರಿಸಿಕೊ ಅವರಿಗಿಂತಲೂ ವಯೋವೃದ್ಧರಾದ ಕಾಗೋಡು ತಿ ಉತ್ಸಾಹದಿಂದ ಓಡಾಡಿ ಕೆಲಸ ಮಾಡುತ್ತಿದ್ದಾರೆ. ದಿಢೀರ್ ಸ ಬಗೆಹರಿಸಿದ್ದಿರಬಹುದು, ಭೂಮಿ-ಹಕ್ಕು ವಸತಿ ಮಂ ಹೋರಾಟವನ್ನು ನಿಭಾಯಿಸುತ್ತಿರುವುದು ಇರಬಹು ಬಗರ್‌ಹುಕುಂ ಮಂಜೂರಾತಿಗೆ ಬಿಸಿ ಮುಟ್ಟಿಸುತ್ತಿರಬಹು ಇರುವವನೇ ಮನೆಯೊಡೆಯ ಕಾಯ್ದೆ ಜಾರಿಗೆ ತುದದ್ದಿರಬಹು ಕಾಗೋಡು ತಿಮ್ಮಪ್ಪ ಖಾತೆಯನ್ನು ಸಮರ್ಥ ನಿಭಾಯಿಸುತ್ತಿದ್ದಾರೆ.

ಖಾತೆಯ ಮಾತು ಒತ್ತಟ್ಟಿಗಿರಲಿ, ಹಲವು ದಶಕಗ ದಲಿತರ ರಕ್ಷಕ ಎಂಬ ಇಮೇಜು ನೇತುಹಾಕಿಕೊಂ ಪ್ರಸಾದ್‌ರು ದಲಿತರ ಮೇಲಿನ ದೌರ್ಜನ್ಯಗಳ



...ಹಾಗೆನೋಡಿದರೆ ಜೀವಿಜಯರ ಆ ಗೆಲುವಿನಲ್ಲಿ ಪ್ರಧಾನ ಪಾತ್ರವಹಿಸಿದ್ದು ಪಿ.ಲಂಕೇಶರು, ಎ.ಕೆ.ಸುಬ್ಬಯ್ಯ ಮತ್ತು ಆ ಕಾಲಘಟ್ಟದ ರೈತಹೋರಾಟ. ಗುಂಡೂರಾಯರ ದರ್ಪಿಷ್ಟ ಸರ್ಕಾರದ ವಿರುದ್ಧ ಲಂಕೇಶರು ತಮ್ಮ ಪತ್ರಿಕೆಯಲ್ಲಿ ಮೊನಚು ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಾ ಜನಾಭಿಪ್ರಾಯ ರೂಪಿಸಿದ್ದು, ಆಗಿನ ಬಿಜೆಪಿ ಅಧ್ಯಕ್ಷರಾಗಿದ್ದ ಎ.ಕೆ. ಸುಬ್ಬಯ್ಯನವರು ಕಾಂಗ್ರೆಸ್‌ನ ಗುಂಡೂರಾಯರನ್ನು ಸೋಲಿಸಬೇಕೆಂಬ ಏಕೈಕ ಕಾರಣಕ್ಕೆ ಜೀವಿಜಯ ವಿರುದ್ಧ ಉದ್ದೇಶಪೂರ್ವಕವಾಗಿ ತನ್ನ ಅಭ್ಯರ್ಥಿಯನ್ನು ಹಾಕದೇ ಇದ್ದುದು ಜೀವಿಜಯ ಗೆಲುವಿನಲ್ಲಿ ನಿರ್ಣಾಯಕವೆನಿಸಿದ್ದವು.

ಆದರೆ ಹಾಗೆ ಗೆದ್ದ ಜೀವಿಜಯರು ತಮ್ಮ ಒಣಪ್ರತಿಷ್ಠೆ ಯಿಂದಲೇ ಕಾರ್ಯಕರ್ತರನ್ನು ದೂರ ಮಾಡಿಕೊಳ್ಳುತ್ತಾ ಬಂದರು. ಈ ಮೊದಲು ಅವರಿಗೆ ಜಾತ್ಯತೀತ ವ್ಯಕ್ತಿ ಎಂಬ ಇಮೇಜು ಇತ್ತಾದರೂ ಕೆಲ ಸಮಯದ ಹಿಂದೆ ತನ್ನ ಮನೆಯ ಸನಿಹವೇ ಇದ್ದ ಮಸೀದಿಯೊಂದರಲ್ಲಿ ಕಿಡಿಗೇಡಿಗಳು ಕುರಾನ್ ಸುಟ್ಟುಹಾಕಿ, ವಿವಾದವಾದರೂ ಅತ್ತ ತಲೆಹಾಕದೆ ಅಲ್ಪಸಂಖ್ಯಾತರ ವಿಶ್ವಾಸವನ್ನೂ ಕಳೆದುಕೊಂಡರು. ಕಳೆದ ಎಲೆಕ್ಷನ್‌ನಲ್ಲಿ ಗೆದ್ದೇ ಬಿಟ್ಟೆನೆಂಬ ಭ್ರಮೆಯಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ವಿ.ಪಿ.ಶಶಿಧರ್ ಸೇರಿದಂತೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನೂ ದೂರ ಮಾಡಿಕೊಂಡದ್ದು ಅವರ ಸೋಲಿಗೆ ಕಾರಣವಾಗಿತ್ತು. ಸೋಮವಾರಪೇಟೆ ಮಟ್ಟಿಗೆ ತಾನೊಬ್ಬ ಪ್ರಶ್ನಾತೀತ ನಾಯಕ ಎಂಬ ಭಾವನೆ ಜೀವಿಜಯರವರಿಗೆ ಬಂದಿದ್ದು, ಅದೇ ಅವರನ್ನು ನುಂಗುತ್ತಿದೆ.

ಕೊಡಗಿನಲ್ಲಿ ಈ ಹಿಂದೆ ಇದ್ದ ಮೂರು ಸ್ಥಾನಗಳ ಸಂಖ್ಯೆ ಈಗ ಎರಡಕ್ಕೆ ಇಳಿದಿದೆ. ಸೋಮವಾರಪೇಟೆಯು ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೇ ಸೇರಿಕೊಂಡಿದೆ. ಸೋಮವಾರ ಪೇಟೆಯಲ್ಲಿ ಜೀವಿಜಯರಿಗೆ ಸ್ವಲ್ಪ ಪ್ರಮಾಣ ಖಚಿತವಿದೆಯಾದರೂ ಮಡಿಕೇರಿಯಲ್ಲಿ ಅಂತಹ ಖಚಿತವಿಲ್ಲ. ಆದರೆ ನಾಣಯ್ಯನಿಗೆ ಜಾತಿಯ ಕಾರಣಕ್ಕಾದರೂ ಮಡಿಕೇರಿಯಲ್ಲಿ ಒಂದಷ್ಟು ಮತಗಳು ಹರಿದುಬರಬಲ್ಲವು. ಸೋಮವಾರಪೇಟೆಯ ತಮ್ಮ ಮತಗಳೊಟ್ಟಿಗೆ ಮಡಿಕೇರಿಯ ನಾಣಯ್ಯನ ಜಾತಿಮತಗಳನ್ನೂ ತೆಕ್ಕೆಗೆ ಹಾಕಿಕೊಳ್ಳಲು ಪ್ಲಾನ್ ಹಾಕಬೇಕಿದ್ದ ಜೀವಿಜಯರು ಅದೇ ನಾಣಯ್ಯನನ್ನು ವಿರೋಧಿಸುತ್ತಾ ರಾಜಕಾರಣ ಮಾಡಲು ಹೊರಟಿರೋದು ಜೆಡಿಎಸ್‌ನ ಗೆಲುವನ್ನು ದೂರ ಮಾಡುವ ಆತಂಕವಿದೆ. ಜೀವಿಜಯರ ರಾಜಕೀಯ ಏಳುಬೀಳುಗಳನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ, ಅವರಿಗೆ ಗೆಲುವಿಗಿಂತ ಚುನಾವಣೆಯಲ್ಲಿ ಸ್ಪರ್ಧಿಸುವುದು ಮುಖ್ಯವಾಗಿರೋದು ಅರ್ಥವಾಗುತ್ತದೆ. ಇದರ ಹಿಂದಿರುವ ರಹಸ್ಯ ಕೊಡಗಿನಲ್ಲಿ ಬಹಿರಂಗ ಚರ್ಚೆಯಲ್ಲಿರುವ ವಿಚಾರ. ಹಾಗಾಗಿ ಅವರಿಂದ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ಇದು ಜೆಡಿಎಸ್‌ಗೆ ದುಬಾರಿಯಾಗಲಿದೆ.


■ ಬಿ.ಎನ್. ಮನುಶೆಣೈ

...ವಿರೋಧಿಸಲು ಹಿಂಜರಿಯುತ್ತಿರುವುದೇಕೆ? ದಲಿತರ ಪರ ಮಾತನಾಡಿದರೆ ಮೋದಿ ಪಕ್ಷದ ನಾಯಕರ, ಮೇಲ್ವರ್ಗದವರ, ಹಿಂದೂತ್ವವಾದಿಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎಂದು ಸುಮ್ಮನಿದ್ದಾರೆಯೆ? ಅಥವಾ ತನ್ನನ್ನು ಸೋಲಿಸಿದವರ ಉಸಾಬರಿ ತನಗೇಕೆ; ಗೆದ್ದಿರುವ ಕಳಲೆ ಕೇಶವನೇ ನೋಡಿಕೊಳ್ಳಲಿ ಅಂತ ಸುಮ್ಮನಿದ್ದಾರಾ?

ಈಗ ಅವರ ಕ್ರಿಯಾಶೀಲತೆಯೆಲ್ಲ ಬಿಜೆಪಿಯ ಕಾರ್ಯಕಾರಿಣಿ ಸಭೆಗಳು, ಮೋದಿಯ ಹೊಗಳಿಕೆ, ಕಾಂಗ್ರೆಸ್ ತೆಗಳಿಕೆಗಳಲ್ಲೇ ಖರ್ಚಾಗುತ್ತಿವೆ. ಅದನ್ನು ಅರಿಯದ ಕೆಲ ದಲಿತ ಹುಡುಗರು ನಮ್ಮ ಸ್ವಾಭಿಮಾನಿ ಚಕ್ರವರ್ತಿ ಶ್ರೀನಿವಾಸ ಪ್ರಸಾದ್ ಇಲ್ಲದ, ಅವರ ದನಿ ಇಲ್ಲದ ಕಾರಣಕ್ಕೆ ನಂಜನಗೂಡು ತಾಲ್ಲೂಕಿನಲ್ಲಿ ಈ ರೀತಿಯ ದೌರ್ಜನ್ಯ ನಡೆಯುತ್ತಿದೆ ಎಂದು ಪೋಸ್ಟ್ ಮಾಡುತ್ತಿದ್ದಾರೆ. ಪ್ರಸಾದ್ ಥೇಟ್ ಹಿಂದೂತ್ವವಾದಿಗಳಂತೆ ಬದಲಾಗಿದ್ದಾರೆ, ಸ್ವಾಭಿಮಾನದಿಂದ ಕಳಚಿಕೊಂಡಿದ್ದಾರೆ. ಶ್ರೀನಿವಾಸ್ ಪ್ರಸಾದ್ ಈಗ ಅದೆಷ್ಟು ಅರಳುಮರಳು ಕೇಸರಿಯಾಗಿದ್ದಾರೆ ಎನ್ನೋದಕ್ಕೆ, ಚಾಮರಾಜನಗರದ ಬುದ್ದಿಸ್ಟ್ ಮಾಂಕ್ ಚಾರಿಟಬಲ್ ಟ್ರಸ್ಟ್ ಸೊಸೈಟಿಗೆ 25 ಎಕರೆ ಭೂಮಿ 10 ಕೋಟಿ ರೂ. ಬಿಡುಗಡೆ ಮಾಡಿರುವ ಸಿದ್ದರಾಮಯ್ಯರನ್ನು ಟೀಕಿಸುತ್ತಿರುವುದೇ ಸಾಕ್ಷಿ. ಯಾಕೆಂದರೆ ಸಿದ್ದರಾಮಯ್ಯ 2015ರ ಜನವರಿ 5ರಂದೇ ನಳಂದ ವಿಶ್ವವಿದ್ಯಾನಿಲಯಕ್ಕೆ 25 ಎಕರೆ ಭೂಮಿ 10 ಕೋಟಿ ರೂ. ಘೋಷಿಸಿದ್ದರು. ಆಗ ಕಂದಾಯ ಮಂತ್ರಿಯಾಗಿದ್ದ ಇದೇ ಶ್ರೀನಿವಾಸ ಪ್ರಸಾದ್, ಸಿದ್ದರಾಮಯ್ಯರನ್ನು ಹಾಡಿಹೊಗಳಿದ್ದರು. ಆದರೆ ಇವತ್ತು ಬಿಜೆಪಿಗರಿಗೆ ತನ್ನ ನಿಷ್ಠೆ ಪ್ರಾಮಾಣಿಕತೆಯನ್ನು ಸಾಬೀತು ಮಾಡಿ ತೋರಿಸುವ ಸಲುವಾಗಿ ಅದನ್ನು ವಿರೋಧಿಸಿ ನಗೆಪಾಟಲಿಗೆ ಗುರಿಯಾಗಿದ್ದಾರೆ. ಪಾಪ, ಶ್ರೀನಿವಾಸ್ ಪ್ರಸಾದ್‌ರಿಗೆ ಹೀಗಾಗಬಾರದಿತ್ತು...

■ ಶರ

ಮಳವಳ್ಳಿ: ಮಾಜಿ ಶಾಸಕ ಕ್ಯಾತೆ ಅನ್ನದಾನಿಯ ಐಲಾಟ



ಮುಂಬರುವ 2018ರ ವಿಧಾನಸಭೆ ಚುನಾವಣೆ ಯಲ್ಲಿ ಶಾಸಕನಾಗಿ ಅಧಿಕಾರ ಹಿಡಿಯುವ ನಿಟ್ಟಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ಪಡಿಸುತ್ತಿರುವ ಮಾಜಿ ಶಾಸಕ ಅನ್ನದಾನಿಯ ಐಲಾಟಗಳನ್ನು ಕಂಡು ಮಳವಳ್ಳಿಯ ಜನತೆ ಶಾಪ ಹಾಕುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಕ್ಷೇತ್ರಕ್ಕೆ ತಂದಿರುವ ಸಾವಿರಾರು ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳನ್ನು ಕಂಡು ಬೆದರಿರುವ ಅನ್ನದಾನಿ ಅವುಗಳಿಗೆ ಅಡ್ಡಿಪಡಿಸಲು ಹೋಗಿ ಸಾಧ್ಯವಾಗದೆ ಕೈಕೈ ಹಿಸುಕಿಕೊಳ್ಳುತ್ತಿದ್ದಾನೆ.


ಅನ್ನದಾನಿಯ ಐಲಾಟ

ಮಳವಳ್ಳಿ ಕ್ಷೇತ್ರಕ್ಕೆ ಮತ್ತೆ ಎಂಎಲ್‌ಎ ಆಗುವ ಕನಸು ಕಾಣುತ್ತಿರುವ ಅನ್ನದಾನಿ ಅದಕ್ಕಾಗಿ ಜೆಡಿಎಸ್ ಪಕ್ಷ ಹಾಗೂ ಕಾರ್ಯಕರ್ತರನ್ನು ಸಂಘಟನೆ ಮಾಡಿ ಜನರ ಮನಸ್ಸನ್ನು ಗೆಲ್ಲಬೇಕು. ಆದರೆ ಆ ಮಾರ್ಗವನ್ನು ಹಿಡಿಯದೆ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸಿ ಅಡ್ಡದಾರಿಯಲ್ಲಿ ಶಾಸಕನಾಗಲು ಹೊರಟಿರುವುದನ್ನು ಮಳವಳ್ಳಿಯ ಜನತೆ ಸುತರಾಂ ಒಪ್ಪುತ್ತಿಲ್ಲ. ಆಗಸ್ಟ್ 6ರಂದು ಭಾನುವಾರ ಮಳವಳ್ಳಿ ತಾಲ್ಲೂಕಿನ ಕಿರುಗಾವಲು ಪಟ್ಟಣದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಕಾಮಗಾರಿಯ ಭೂಮಿ ಪೂಜೆ ತಪ್ಪಿಸಲು ಅನ್ನದಾನಿ ಭಾರೀ ಹರಸಾಹಸ ಪಟ್ಟ. ಆದರೆ ಕಿರುಗಾವಲಿನ ದಲಿತ ಮುಖಂಡರು ಅನ್ನದಾನಿಯ ವಿರುದ್ಧ ತಿರುಗಿನಿಂತು ಶಾಸಕ ನರೇಂದ್ರಸ್ವಾಮಿ ನೇತೃತ್ವದಲ್ಲಿ ಅಂಬೇಡ್ಕರ್ ಭವನ ಕಾಮಗಾರಿಯ ಶಂಕುಸ್ಥಾಪನೆಯನ್ನು ಒಗ್ಗಟ್ಟಾಗಿ ನಿಂತು ನೆರವೇರಿಸಿಕೊಂಡರು. ಸ್ವತಃ ದಲಿತ ವರ್ಗಕ್ಕೆ ಸೇರಿದವನಾಗಿದ್ದು, ಅಂಬೇಡ್ಕರ್ ಭವನ ಕಾಮಗಾರಿ ತಡೆಯಲು ಹೊರಟ ಅನ್ನದಾನಿಯ ದಲಿತ ವಿರೋಧಿತನ ಕಂಡು ಜನರೇ ಛೀಮಾರಿ ಹಾಕಿದ್ದಾರೆ.

ಕಿರುಗಾವಲಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣವಾಗ ಬೇಕೆಂದು 3-4 ದಶಕಗಳ ಹಿಂದಿನಿಂದಲೂ ದಲಿತ ಮುಖಂಡರ ಆಸೆಯಾಗಿತ್ತು. 1989ರಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಕೆ.ಎಂ.ಪುಟ್ಟು ಜನಾನುರಾಗಿ ರಾಜಕಾರಣಿ ಎಂದೇ ಹೆಸರಾದರು. ದಲಿತ ಮುಖಂಡರ ಒತ್ತಾಸೆಗೆ ದನಿಗೂಡಿಸಿದ ಕೆ.ಎಂ.ಪುಟ್ಟು ಅಂಬೇಡ್ಕರ್ ಭವನ ಕಟ್ಟಲು ಮುಂದಾಗಿದ್ದರು. ಆದರೆ ಅವರ ಪ್ರಯತ್ನ ಕೈಗೂಡಲು ಪಟ್ಟಭದ್ರ ಹಿತಾಸಕ್ತಿಗಳು ಕೊನೆಗೂ ಬಿಡಲೇ ಇಲ್ಲ. ಪಿ.ಎಂ.ನರೇಂದ್ರಸ್ವಾಮಿ ಶಾಸಕರಾಗಿ ಆಯ್ಕೆಯಾದ ನಂತರ ಅವರನ್ನು ಭೇಟಿಮಾಡಿದ ಕಿರುಗಾವಲಿನ ಜನರು ಅಂಬೇಡ್ಕರ್ ಭವನ ಕಟ್ಟಿಸಬೇಕೆಂದು ಒತ್ತಾಯ ಮಾಡಿದ್ದರು. ಆದರೆ ಕಿರುಗಾವಲಿನಲ್ಲಿ ಅಂಬೇಡ್ಕರ್ ಭವನಕ್ಕೆ ಬೇಕಾಗಿದ್ದ ಜಾಗ ಆರೋಗ್ಯ ಇಲಾಖೆಯ ಸುಪರ್ದಿಯಲ್ಲಿತ್ತು. ನರೇಂದ್ರಸ್ವಾಮಿ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ನಡೆಸಿ ಆರೋಗ್ಯ ಇಲಾಖೆಯ ಸುಪರ್ದಿಯಲ್ಲಿದ್ದ 10 ಗುಂಟೆ ಜಾಗವನ್ನು ಸಮಾಜ ಕಲ್ಯಾಣ ಇಲಾಖೆಯ ಸುಪರ್ದಿಗೆ ವಹಿಸುವಂತೆ ಮಾಡುವಲ್ಲಿ ಯಶಸ್ವಿಯಾದರು.

ಅಂಬೇಡ್ಕರ್ ಭವನ ನಿರ್ಮಾಣವಾದರೆ ನರೇಂದ್ರಸ್ವಾಮಿ ಗೆ ಕ್ರೆಡಿಟ್ ಹೋಗುತ್ತದೆ ಎಂದು ತಿಳಿದ ಅನ್ನದಾನಿ ಈ ಜಾಗದ ಮೂಲ ವಾರಸುದಾರರ ಕುಟುಂಬದ ವ್ಯಕ್ತಿಯೊಬ್ಬನ ಕೈಯಲ್ಲಿ ಈ ಜಾಗ ನಮ್ಮ ಪೂರ್ವಿಕರಿಗೆ ಸೇರಿದ್ದು ಎಂದು ಶಂಕುಸ್ಥಾಪನೆಗೆ ಒಂದೆರಡು ದಿನವಿರುವಾಗ ಕಿರುಗಾವಲು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದ. ಆದರೆ ಪೊಲೀಸರು ದಾಖಲಾತಿಗಳನ್ನು ನೋಡಿ ಕಾನೂನುಪ್ರಕಾರ ಈ ಜಾಗ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ್ದು ಎಂದು ಹೇಳಿ ಅನ್ನದಾನಿಯ ಚೇಲಾನಿಗೆ ಬುದ್ಧಿವಾದ ಹೇಳಿ ಕಳುಹಿಸಿದರು. ಹೀಗೆ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಇದ್ದ ಅಡ್ಡಿ-ಆತಂಕಗಳನ್ನೆಲ್ಲ ಬಗೆಹರಿಸಿದ ನರೇಂದ್ರಸ್ವಾಮಿ 3 ದಶಕಗಳಿಂದ ಕಿರುಗಾವಲಿನಲ್ಲಿ ನನೆಗುದಿಗೆ ಬಿದ್ದಿದ್ದ ಅಂಬೇಡ್ಕರ್ ಭವನಕ್ಕೆ 2017ರ ಆಗಸ್ಟ್ 6ರಂದು ಅಡಿಗಲ್ಲು ಹಾಕಲು ದಿನಾಂಕ ಫಿಕ್ಸ್ ಮಾಡೇಬಿಟ್ಟರು. ಕಿರುಗಾವಲು ಪಟ್ಟಣದ ಹೃದಯ ಭಾಗದಲ್ಲಿ ಅಂಬೇಡ್ಕರ್ ಭವನ ಆಗದಂತೆ ಪಟ್ಟಭದ್ರರು ತಡೆ ಹಿಡಿದಿದ್ದ ಜಾಗದಲ್ಲೇ ಶಂಕುಸ್ಥಾಪನೆ ನೆರವೇರಿಸಿ ದಲಿತ ಮುಖಂಡರ ಆಸೆಯನ್ನು ಈಡೇರಿಸಿದರು. ಶಂಕುಸ್ಥಾಪನೆ ಸಂದರ್ಭದಲ್ಲಿ ಉಪಸ್ಥಿತರಿದ್ದ ಮಾಜಿ ಶಾಸಕ ದಿವಂಗತ ಕೆ.ಎಂ.ಪುಟ್ಟುರ ಮಗಳಾದ ಜಿ.ಪಂ. ಸದಸ್ಯೆ ಸುಜಾತಪುಟ್ಟು ಹಾಗೂ ಮಗ ನರೇಂದ್ರ ಅಂಬೇಡ್ಕರ್ ಭವನ ಕಾಮಗಾರಿ ತಡೆಯಲು ಹೊರಟ ಅನ್ನದಾನಿ ಮಾಡಿದ ಕುತಂತ್ರಕ್ಕೆ ಬಹಿರಂಗ ಸಭೆಯಲ್ಲೇ ಛೀಮಾರಿ ಹಾಕಿದರು.

ಹಾಗೆಯೇ ಮಳವಳ್ಳಿ ಪಟ್ಟಣದಲ್ಲಿದ್ದ ಕೆರೆಯ ಸುತ್ತ 5 ಕೋಟಿ ರೂ. ವೆಚ್ಚದಲ್ಲಿ ದಂಡು ನಿರ್ಮಾಣ, ಹೈಲ್ಯಾಂಡ್, ವಾಕಿಂಗ್ ಟ್ರಾಕ್, ಸೋಲಾರ್ ಲೈಟ್, ಉದ್ಯಾನವನ ನಿರ್ಮಾಣ ಕಾಮಗಾರಿಗೆ ಅನ್ನದಾನಿ ಕೊಟ್ಟ ಕಾಟ ಅಷ್ಟಿಷ್ಟಲ್ಲ. ಶಾಸಕ ನರೇಂದ್ರಸ್ವಾಮಿ ಕೆರೆ ಅಭಿವೃದ್ಧಿಯ ನೆಪದಲ್ಲಿ ಇದ್ದಬದ್ದ ನೀರನ್ನೆಲ್ಲಾ ತೆಗೆಸಿದ್ದಾರೆ, ಈ ಕೆರೆಯನ್ನೇ ನಂಬಿದ್ದ ಮೀನುಗಾರರು ಮೀನು ಹಿಡಿಯದೆ ಜೀವನ ನಡೆಸುವುದೇ ಕಷ್ಟವಾಗಿದೆ, ಕೆರೆಯ ಹೂಳೆತ್ತದೆ ದುಡ್ಡು ಹೊಡೆಯಲು ನಿಂತಿದ್ದಾರೆ ಎಂದೆಲ್ಲಾ ಕೆಲವು ಮಾಧ್ಯಮ ಮಿತ್ರರಿಗೆ ಹಣ ಕೊಟ್ಟು ಸುದ್ದಿ ಮಾಡಿಸಿದ. ಆದರೆ ವಾಸ್ತವ ಸಂಗತಿಯೇ ಬೇರೆ ಇತ್ತು. ಕಳೆದ 3 ವರ್ಷಗಳಿಂದ ಸತತ ಬರದ ಹಿನ್ನೆಲೆಯಲ್ಲಿ ಕನ್ನಂಬಾಡಿ ಅಣೆಕಟ್ಟೆಯಿಂದ ನೀರನ್ನೇ ಬಿಟ್ಟಿಲ್ಲ. ಕೆಆರ್‌ಎಸ್‌ನಿಂದ ನೀರು ಬಿಟ್ಟರೂ ಮದ್ದೂರು, ಮಳವಳ್ಳಿ ಭಾಗಗಳಿಗೆ ತಲುಪುವುದೇ ಕಷ್ಟವಿರುವಾಗ ಮಳವಳ್ಳಿ ಕೆರೆ ತುಂಬುವ ಮಾತೇ ಇಲ್ಲ. ಪ್ರತಿ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಳವಳ್ಳಿ ಭಾಗಕ್ಕೆ ನೀರು ಹರಿಸಿ ಎಂದು ನರೇಂದ್ರಸ್ವಾಮಿ ಕೇಳಿದರೂ ನೀರನ್ನೇ ಹರಿಸಿಲ್ಲ. ಮದ್ದೂರು ತಾಲ್ಲೂಕಿನ ಸೂಳೆಕೆರೆ ಅತ್ಯಂತ ದೊಡ್ಡ ಕೆರೆ. ಸುಮಾರು 700 ಎಕರೆಗೂ ಹೆಚ್ಚಿರುವ ಸೂಳೆಕೆರೆಯೇ ನೀರಿಲ್ಲದೆ ಸಂಪೂರ್ಣ ಬತ್ತಿರುವಾಗ ಕೆರೆಯ ನೀರನ್ನು ಖಾಲಿ ಮಾಡಿದ್ದಾರೆ ಎನ್ನುವ ಅನ್ನದಾನಿಯ ಕ್ಯಾತೆ ಮಾತಿಗೆ ಮಳವಳ್ಳಿಯ ಜನತೆ ಕ್ಯಾರೇ ಎನ್ನಲಿಲ್ಲ. ಹೇಗಾದರೂ ಮಾಡಿ ಕೆರೆಯ ಕಾಮಗಾರಿ ನಿಲ್ಲಿಸಲು ಅನ್ನದಾನಿ ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ.



ಇನ್ನು ಮಳವಳ್ಳಿ ಪಟ್ಟಣದ ಶಾಂತಿ ಕಾಲೇಜಿನ ಮುಂಭಾಗವಿರುವ 33 ಎಕರೆ ಜಮೀನನ್ನು ಬಡವರಿಗೆ ನಿವೇಶನ ನೀಡುವ ಸಲುವಾಗಿ ಪುರಸಭೆ ಖರೀದಿಸಿತ್ತು. ಬಿ.ಸೋಮಶೇಖರ್ ಶಾಸಕತ್ವದ ಅವಧಿಯಲ್ಲೇ ಈ ಜಮೀನು ಪುರಸಭೆ ವ್ಯಾಪ್ತಿಗೆ ಬಂದರೂ ಜಮೀನು ಕೊಟ್ಟ ಕೆಲವರು ನಮಗೂ ನಿವೇಶನ ನೀಡಬೇಕೆಂದು ಕೋರ್ಟ್‌ಗೆ ಹೋಗಿದ್ದರಿಂದ ಬಡವರಿಗೆ ನಿವೇಶನ ದೊರಕಲೇ ಇಲ್ಲ. ಆದರೆ ನರೇಂದ್ರಸ್ವಾಮಿ ಶಾಸಕರಾಗಿ ಬಂದ ಮೇಲು ಪುರಸಭೆ ತೆಕ್ಕೆಯಲ್ಲಿದ್ದ 33 ಎಕರೆ ಜಮೀನನ್ನು ಆಶ್ರಯ ಸಮಿತಿಗೆ ವರ್ಗಾವಣೆ ಮಾಡಿಕೊಂಡು 1500 ನಿವೇಶನಗಳನ್ನಾಗಿ ಬಡವರಿಗೆ ಹಂಚಲು ಹೊರಟರು. ಬಡಜನರಿಗೆ ಸೈಟುಗಳನ್ನು ಹಂಚಿದರೆ ಅದರ ಪ್ರತಿಫಲ ನರೇಂದ್ರಸ್ವಾಮಿಗೆ ಸಿಕ್ಕು ಮತ್ತಷ್ಟು ಬಲಿಷ್ಠನಾಗುತ್ತಾರೆಂದು ದುರಾಲೋಚನೆ ಮಾಡಿದ ಅನ್ನದಾನಿ ಜಮೀನು ಕೊಟ್ಟವರ ಮಕ್ಕಳ ಕೈಯಲ್ಲಿ ಮತ್ತೆ ಕೇಸು ಹಾಕಿಸಿ ಅವರ ಬೆನ್ನಿಗೆ ನಿಂತು ಅಡ್ಡಿಪಡಿಸಿದ. ಕೊನೆಗೂ ಹಲವು ವರ್ಷಗಳ ಕಾನೂನು ಸಮರದಲ್ಲಿ ಅನ್ನದಾನಿ ಸೋತಿದ್ದು ಸೈಟು ಹಂಚಿಕೆ ಪ್ರಕ್ರಿಯೆ ನಡೆಯುತ್ತಿದೆ.

ಮಳವಳ್ಳಿ ಪಟ್ಟಣದಲ್ಲಿ 20 ಕೋಟಿ ವೆಚ್ಚದಲ್ಲಿ ನ್ಯಾಯಾಲಯ ಸಂಕೀರ್ಣ ಕಾಮಗಾರಿ ಪ್ರಾರಂಭವಾಗಬೇಕಿತ್ತು. ಈ ಜಾಗದ ವಿಚಾರದಲ್ಲಿ ಕುಂಬಾರ ಜನಾಂಗದ ಕೆಲವರು ನ್ಯಾಯಾಲಯಕ್ಕೆ ಹೋದರು. ಅವರ ಬೆಂಬಲಕ್ಕೆ ನಿಂತ ಕ್ಯಾತೆ ಅನ್ನದಾನಿ ಅಲ್ಲೂ ಕೈಯಾಡಿಸುತ್ತಿದ್ದಾನೆ..

ಅಲ್ಲದೆ ಭೀಮಾ ಜಲಾಶಯದಿಂದ ಹಲಗೂರು ವ್ಯಾಪ್ತಿಯ 26 ಕೆರೆಗಳಿಗೆ ನೀರು ತುಂಬಿಸುವ 10.50 ಕೋಟಿ ರೂ. ವೆಚ್ಚದ ಯೋಜನೆಗೂ ಅನ್ನದಾನಿ ಅಡ್ಡಿಪಡಿಸಿದ್ದನ್ನು ಅಲ್ಲಿಯ ಜನರೇ ಖಂಡಿಸಿದ್ದಾರೆ. ಮಳವಳ್ಳಿ ವಿಧಾನಸಭಾ ಕ್ಷೇತ್ರದ ಹಲಗೂರು ವ್ಯಾಪ್ತಿಯಲ್ಲಿ ಒಕ್ಕಲಿಗರದ್ದೇ ಪಾರುಪತ್ಯ. ಇದುವರೆಗೂ ದೇವೇಗೌಡ ಮತ್ತು ಕುಮಾರಸ್ವಾಮಿ ಕಾರಣಕ್ಕೆ ಬಹುತೇಕ ಒಕ್ಕಲಿಗರು ಜೆಡಿಎಸ್ ಪಕ್ಷದ ಜೊತೆ ಗುರುತಿಸಿಕೊಂಡಿದ್ದಾರೆ. ಇಂತಹ ಒಕ್ಕಲಿಗ ಪಾಳೇಪಟ್ಟಿನ ಹಲಗೂರು ವ್ಯಾಪ್ತಿಯ 26 ಕೆರೆಗಳಿಗೆ ಭೀಮಾ ಜಲಾಶಯದಿಂದ ನೀರು ತುಂಬಿಸಿದರೆ ತನ್ನ ಒಕ್ಕಲಿಗ ಓಟ್‌ಬ್ಯಾಂಕ್ ಛಿದ್ರವಾಗುತ್ತದೆ ಎಂದು ಹೆದರಿದ ಅನ್ನದಾನಿ ಪೈಪ್‌ಲೈನ್ ಕಾಮಗಾರಿ ನಡೆಯುವುದಕ್ಕೆ ನಾನಾ ರೀತಿಯ ಕಾಟ ಕೊಟ್ಟಿದ್ದ. ಕೆಂಪಯ್ಯನದೊಡ್ಡಿ ದೇವೀರಳ್ಳಿ ಮೊದಲಾದ ಗ್ರಾಮಗಳಲ್ಲಿ ಜೆಡಿಎಸ್ ಕಾರ್ಯಕರ್ತರನ್ನು ಎತ್ತಿಕಟ್ಟಿ ಪೈಪ್‌ಲೈನ್ ಹೋಗುವ ಜಮೀನಿನ ಮಾಲೀಕರಿಂದ ವಿರೋಧ ವ್ಯಕ್ತವಾಗುವಂತೆ ನೋಡಿಕೊಂಡ. ನರೇಂದ್ರಸ್ವಾಮಿ ಈ ಭಾಗದ ಜನರಿಗೆ ನೀರಿನ ಬಗ್ಗೆ ಅರಿವು ಮೂಡಿಸಿ, ಅವರ ಮನವೊಲಿಸಿ ಕಾಮಗಾರಿ ನಡೆಯುವಂತೆ ನೋಡಿಕೊಂಡರು. ಈಗ ಕಾಮಗಾರಿ ಮುಗಿದು 6-7 ಕೆರೆಗಳಲ್ಲಿ ನೀರು ತುಂಬಿರುವುದರಿಂದ ಈ ಭಾಗದ ಜನರ ಮೊಗದಲ್ಲಿ ಸಂತಸ ಮೂಡಿಸಿದೆ.

ಕ್ಯಾತೆ ಅನ್ನದಾನಿಯ ಬಿಟ್ಟು ಹೋದ್ರು


2004ರ ಚುನಾವಣೆಯಲ್ಲಿ ದೇವೇಗೌಡ-ಕುಮಾರ ಸ್ವಾಮಿ ಯ ನಾಮಬಲದ ಕಾರಣದಿಂದ ಗೆದ್ದ ಅನ್ನದಾನಿ 40 ತಿಂಗಳು ಅಧಿಕಾರ ನಡೆಸಿದರೂ ಇಂದು ಜೆಡಿಎಸ್ ಕಾರ್ಯಕರ್ತರ ವಿಶ್ವಾಸ ಕಳೆದುಕೊಂಡಿದ್ದಾನೆ. ದೇವೇಗೌಡ ಹಾಗೂ ಕುಮಾರಸ್ವಾಮಿ ಮೇಲಿನ ಜಾತಿ ಕಾರಣದಿಂದ ಅನ್ನದಾನಿಗೆ ಓಟು ಬೀಳುತ್ತವೆಯೇ ಹೊರತು ಈತನ್ನು ನೋಡಿ ಮತ ಹಾಕುವವವರ ಸಂಖ್ಯೆ ತೀರ ಕಡಿಮೆ. ಒಂದು ಅವಧಿಗೆ ಶಾಸಕನಾಗಿದ್ದ ಅನ್ನದಾನಿ ಬಾರ್, ಪೆಟ್ರೋಲ್‌ಬಂಕ್ ಎಲ್ಲವನ್ನೂ ಹೊಂದಿದ್ದಾನೆ. ಆದರೆ ಈತನನ್ನು ನಂಬಿದ ಕಾರ್ಯಕರ್ತರಿಗೆ ಹಣ, ಅಧಿಕಾರ ಹೊಂದಲು ಮಾತ್ರ ಬಿಟ್ಟಿಲ್ಲ. ಈ ಕಾರಣಕ್ಕೆ ಅಂದು ಜೆಡಿಎಸ್‌ನಲ್ಲಿದ್ದ ಹಲವರು ಕಾಂಗ್ರೆಸ್‌ಗೆ ಹೋಗಿ ಅಧಿಕಾರ ಕಂಡಿದ್ದಾರೆ. ಕುರುಬ ಜನಾಂಗದ ಪ್ರಭಾವಿ ಮುಖಂಡ ಚನ್ನಪಿಳ್ಳೆ ಕೊಪ್ಪಲು ಸಿದ್ದೇಗೌಡ ನರೇಂದ್ರಸ್ವಾಮಿ ಜೊತೆ ಸೇರಿ ಮನ್‌ಮುಲ್ ನಿರ್ದೇಶಕರಾಗಿ ಅಧಿಕಾರ ಅನುಭವಿಸುತ್ತಿದ್ದಾರೆ. ಹಲಗೂರು ಜಿ.ಪಂ. ಸದಸ್ಯ ಚಂದ್ರಕುಮಾರ್ ಹಾಗೂ ತಳಗವಾದಿ ಜಿ.ಪಂ. ಸದಸ್ಯ ಹನುಮಂತು ಈ ಹಿಂದೆ ಅನ್ನದಾನಿಯ ಜೊತೆ ಇದ್ದವರು. ಈಗ ನರೇಂದ್ರಸ್ವಾಮಿ ಬಣ ಸೇರಿ ಜಿ.ಪಂ. ಸದಸ್ಯರಾಗಿದ್ದಾರೆ. ಸಾಹಳ್ಳಿ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯ ಚೊಟ್ಟನಹಳ್ಳಿ ಸತೀಶ್ ನರೇಂದ್ರಸ್ವಾಮಿಗೆ ಜೈ ಅಂದಿದ್ದಾರೆ. ಒಕ್ಕಲಿಗ ಮುಖಂಡರಾದ ವಡ್ಡರಹಳ್ಳಿ ವೀರಭದ್ರ, ಹುಸ್ಕೂರು ಗ್ರಾ.ಪಂ. ಅಧ್ಯಕ್ಷ ಹುಲ್ಲೇಗಾಲ ಶಿವಮಾದೇಗೌಡ, ಹಲಗೂರು ನಾಗೇಶ್, ಗಡ್ಡದ ಬಸವರಾಜು ಅನ್ನದಾನಿ ಬಿಟ್ಟು ನರೇಂದ್ರಸ್ವಾಮಿ ಹಿಂದಿದ್ದಾರೆ. ಮುಸ್ಲಿಂ ಮುಖಂಡರಾದ ಬೆಳಕವಾಡಿ ಹರ್ಷದ್, ಮಳವಳ್ಳಿ ಪುರಸಭೆ ಅಧ್ಯಕ್ಷ ರಿಯಾಜಿನ್, ಹಲಗೂರಿನ ಪಿಳ್ಳೆ ಮೊದಲಾದವರು ನರೇಂದ್ರಸ್ವಾಮಿ ಪಾಳಯದಲ್ಲಿ ಗುರುತಿಸಿಕೊಂಡಿರುವುದು ಅನ್ನದಾನಿಯ ಕೋಪ ನೆತ್ತಿಗೇರುವಂತೆ ಮಾಡಿದೆ. ಪುರಸಭೆ, ತಾ.ಪಂ, ಗ್ರಾ.ಪಂ., ಜಿ.ಪಂ., ಪಿಎಲ್‌ಡಿ ಬ್ಯಾಂಕ್, ಸಹಕಾರಿ ಸಂಘಗಳಲೆಲ್ಲ ಕಾಂಗ್ರೆಸ್ ಮುಖಂಡರು ಆರಿಸಿ ಬಂದಿದ್ದಾರೆ. 39 ಗ್ರಾಮ ಪಂಚಾಯತಿಗಳ ಪೈಕಿ ಸುಮಾರು 30ರಲ್ಲಿ ಕಾಂಗ್ರೆಸ್ ಆಡಳಿತವಿದೆ. 7 ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ 6ರಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದು ಬಂದಿದ್ದಾರೆ. ಇಂತಹ ಪರಿಸ್ಥಿತಿಯಿರುವ ಮಳವಳ್ಳಿಯಲ್ಲಿ ಅನ್ನದಾನಿಗೆ ದೇವೇಗೌಡ ಹಾಗೂ ಕುಮಾರಸ್ವಾಮಿಯವರ ನಾಮಬಲವೇ ಗಟ್ಟಿ. ಇವರನ್ನೇ ನೆಚ್ಚಿಕೊಂಡಿರುವ ಅನ್ನದಾನಿ ಸಮಾಜ ಸೇವೆ ಮೂಲಕ ಜನರ ಮನಸ್ಸನ್ನು ಗೆಲ್ಲುವ ಬದಲಿಗೆ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಗಾಲು ಹಾಕುತ್ತಾ ಜನರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿದ್ದಾನೆ. ಹೀಗೆಯೇ ಮುಂದುವರಿದರೆ ಮತ್ತೊಮ್ಮೆ ಅನ್ನದಾನಿಗೆ ಮಳವಳ್ಳಿಯ ಜನತೆ ಹಾರ ಕಳಿಸುವ ದಿನಗಳು ಬಹಳ ಹತ್ತಿರದಲ್ಲಿವೆ ಎಂಬುದು ನೆನಪಿನಲ್ಲಿದ್ದರೆ ಒಳ್ಳೆಯದು.

■ ವರದಿಗಾರ


ಅಂಬೇಡ್ಕರ್ ಭವನಕ್ಕೆ ಶಂಕುಸ್ಥಾಪನೆ



ಆಳ್ವಾಸ್ ಬಿಗ್‌ಬಜಾರಲ್ಲಿ ಕಾವ್ಯಳ ಕೊಂದು ಹಾಕಲಾಯ್ತಾ?!



ಮೂಡಬಿದರೆಯ 'ಆಳ್ವಾಸ್' ಶಿಕ್ಷಣೋದ್ಯಮ ಸಂತೆಯ ಬಗ್ಗೆ ರಾಜ್ಯಾದ್ಯಂತ ಇದ್ದ ಹುಚ್ಚು ಆಕರ್ಷಣೆ ಜರ್‍ರನೆ ಇಳಿವಂಥ ಬರ್ಬರ ಆಘಾತವೊಂದು ನಡೆದುಹೋಗಿದೆ! ಯಾವ್ಯಾವುದೋ ಭ್ರಮೆಗೆ ಬಿದ್ದು ತಮ್ಮ ಮಕ್ಕಳನ್ನು ಸದ್ರಿ ಸಂಸ್ಥೆಯಲ್ಲಿ ವ್ಯಾಸಂಗಕ್ಕೆಂದು ಸೇರಿಸಿರುವ ಸುಮಾರು ಇಪ್ಪತ್ತಾರು ಸಾವಿರ ವಿದ್ಯಾರ್ಥಿಗಳ ಹೆತ್ತವರೀಗ ಬೆಚ್ಚಿಬಿದ್ದಿದ್ದಾರೆ!! ಕರುಳ ಕುಡಿಗಳ ಜೀವಕ್ಕೆ ಭದ್ರತೆಯೇ ಇಲ್ಲವೆಂಬ ಆತಂಕ ಪಾಲಕರ ನಿದ್ದೆಗೆಡಿಸುತ್ತಿದೆ. ಇಂಥದೊಂದು ಭಯಕ್ಕೆ ಕಾರಣವಾಗಿರುವುದು ಕಾವ್ಯ ಪೂಜಾರಿ ಎಂಬ ಆಳ್ವಾಸ್‌ನ ಹತ್ತನೇ ತರಗತಿಯ ಮುಗ್ಧ ಹುಡುಗಿಯ ಸಂಶಯಾಸ್ಪದ ಸಾವು. ಆ ದುರಂತ ದಿನಗಳೆದಂತೆ ನಿಗೂಢ ಕತೆಯಾಗುತ್ತಿರುವುದು ಆಳ್ವಾಸ್‌ನ ದೊರೆಯ ವಿಶ್ವಾಸಾರ್ಹತೆಯನ್ನೇ ಅನುಮಾನಕ್ಕೆ ಈಡು ಮಾಡಿದೆ!!



ಆಳ್ವಾಸ್ ಕ್ಯಾಂಪಸ್-ಮೂಡಬಿದರೆ

ಮೋನಾಳ್ವ ಪರಿಚಯ

ಸಾಮಾನ್ಯ ಆಯುರ್ವೇದಿಕ್ ವೈದ್ಯನಾಗಿದ್ದ ಡಾ. ಮಿಜಾರುಗುತ್ತು ಮೋಹನ್ ಆಳ್ವ ಹಲವಾರು ತರಹೇವಾರಿ ಶೈಕ್ಷಣಿಕ ಕೋರ್ಸುಗಳ 'ಆಳ್ವಾಸ್' ಎಂಬ ಟ್ರೇಡ್ ಮಾರ್ಕ್‌ನ ಬೃಹತ್ ವಿದ್ಯಾಸಂಸ್ಥೆ ಕಟ್ಟಿ ನಿಲ್ಲಿಸಿರುವ ಪರಿಗೆ ಎಂಥವರೂ ಹುಬ್ಬೇರಿಸಲೇಬೇಕು. ಇಲ್ಲಿಯ ಪಿಯುಸಿ ಕೋರ್ಸಿಗೆ ರಾಜ್ಯದ ಮೂಲೆಮೂಲೆಯಿಂದ ವಿದ್ಯಾರ್ಥಿಗಳು ಬರುತ್ತಾರೆ. ಒಂದನೇ ತರಗತಿಯಿಂದ ವೃತ್ತಿಪರ ಕೋರ್ಸಿನ ತರಗತಿಯಲ್ಲಿ ದೇಶದ ಬೇರೆ-ಬೇರೆ ರಾಜ್ಯದ ಶಿಕ್ಷಣಾರ್ಥಿಗಳಿದ್ದಾರೆ. ಆಳ್ವಾಸ್‌ನ ಧಾರಣಾಶಕ್ತಿಯು ಮಿತಿಮೀರಿ ಆಸ್ಫೋಟಕ ಸ್ಥಿತಿಗೆ ತಲುಪಿದೆ! ಇಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಶಿಸ್ತು-ಶಿಕ್ಷಣ-ಉದ್ಯೋಗದ ನೆಪದಲ್ಲಿ ರಾಜಾರೋಷವಾಗೇ ನಡೆದು ಹೋಗುತ್ತಿದೆ. ಒತ್ತಡದಲ್ಲಿ ದಿನಗಳೆವ ವಿದ್ಯಾರ್ಥಿಗಳ ಪಾಡು ಹೇಳತೀರದು.

ದುರಂತ ಎಂದರೆ, ಈ ಅಸಹನೀಯ ಬದುಕೇ ವಿದ್ಯಾರ್ಥಿಗೆ ಪ್ರತಿಷ್ಠಿತ ಉದ್ಯೋಗ ಗಿಟ್ಟಿಸಿಕೊಳ್ಳಲು ಅನಿವಾರ್ಯ ಶಿಕ್ಷಣ ಎಂಬಂಥ ಭ್ರಮೆ ಮೋಹನ್ ಆಳ್ವ ಯಶಸ್ವಿಯಾಗಿ ಮಕ್ಕಳು ಹೆತ್ತವರಲ್ಲಿ ಮೂಡಿಸುತ್ತಿದ್ದಾರೆ. ಆಳ್ವಾಸ್‌ನ ಥಳುಕಿಗೆ ಬಲಿ ಬೀಳುತ್ತಿರುವ ಪಾಲಕರು ಮೂಡಬಿದರೆಯ ಆಳ್ವಾಸ್ ಹಗ್ಗ ತಾವಾಗೇ ಕುತ್ತಿಗೆಗೆ ಬಿಗಿದುಕೊಳ್ಳುತ್ತಿದ್ದಾರೆ. ಶಿಕ್ಷಣ-ಸಾಹಿತ್ಯ-ಸಂಸ್ಕೃತಿಯ ಹರಿಕಾರ ತಾನೆಂದು ಪೋಸು ಕೊಡುತ್ತ ಶಿಕ್ಷಣ ಸಾಮ್ರಾಜ್ಯ ವಿಸ್ತರಣೆಗೆ ಆಳ್ವಾಜೀ ಮಾಡುತ್ತಿರುವ ಅವಾಂತರ-ಅಧಿಕಪ್ರಸಂಗ ಈಗ ಅನಾಹುತಕಾರಿ ಹಂತ ತಲುಪಿಬಿಟ್ಟಿದೆ! ಕಾಲು ಲಕ್ಷದ ಗಡಿಗೆ ಹತ್ತಿರತ್ತಿರ ವಿದ್ಯಾರ್ಥಿ ಸಂಖ್ಯೆ ತಲುಪಿದರೂ ಆಳ್ವರ ಹುಸಿ ಕೀರ್ತಿ-ಒಣ ಖ್ಯಾತಿಯ ತೆವಲು ನಿಂತಿಲ್ಲ. ವಿದ್ಯಾರ್ಥಿಗಳು ಹೆಚ್ಚು-ಹೆಚ್ಚಾದಂತೆ ಬಿಸ್ನೆಸ್ ಭರಾಟೆಯೂ ಜೋರಲ್ಲವಾ? ಇದೇ ಆಳ್ವರ ಶಿಕ್ಷಣ ಪೋಷಣೆಯ ಒಳಗುಟ್ಟು!!

ಮೋನಾಳ್ವ ಮಾಡುವ ವಿರಾಸತ್-ನುಡಿ ಸಿರಿಯಂಥ ಸಾಹಿತ್ಯೋತ್ಸವಗಳು ಶಿಕ್ಷಣ ದಂಧೆಯ ಪ್ರಚಾರತಂತ್ರಗಳೆಂಬ ತರ್ಕವೂ ಇದೆ. ಆರೆಂಟು ಅತೀ ಕೆಳವರ್ಗದ ಸಮುದಾಯದ ಒಂದಿಷ್ಟು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಕೊಡುವ ಈತ ದೇಣಿಗೆ ಸೀಟು ಬರುವ ದಾರಿ ಖಚಿತ ಮಾಡಿಕೊಳ್ಳುತ್ತಾರೆ. ಇಫ್ತಾರ್ ಕೂಟ, ಕ್ರಿಸ್‌ಮಸ್, ದೀಪಾವಳಿ ಕಾಲೇಜ್ ಕ್ಯಾಂಪಸ್ಸಿನಲ್ಲಿ ಆಚರಿಸುವ ಈ ಚೆಡ್ಡಿ ಚತುರ ಇದೆಲ್ಲ ಆಳ್ವಾಸ್ ಜಾಹಿರಾತು ಕಾರ್ಯಾಚರಣೆ ಭಾಗವೆಂಬಂತೆ ನಡೆಸಿಕೊಂಡು ಹೋಗುತ್ತಿದ್ದಾನೆ. ಸಂಸ್ಕೃತಿ-ಸಾಹಿತ್ಯ ಕಾರ್ಯಕ್ರಮದ ಮುಖವಾಡದಲ್ಲಿ ಹತ್ತಾರು ಬಸ್‌ನಲ್ಲಿ ಆಳ್ವಾಸ್‌ನ ವಿದ್ಯಾರ್ಥಿಗಳನ್ನು ದೂರದ ರಾಯಚೂರು, ಬೀದರ್, ಕಲಬುರ್ಗಿ, ಕೊಪ್ಪಳವೇ ಮುಂತಾದೆಡೆ ಕರೆದೊಯ್ದು ಶಿಕ್ಷಣ ವ್ಯವಹಾರ ಮಾರ್ಕೆಟ್ ಮೋನಾಳ್ವ ಮಾಡುತ್ತಿದ್ದಾರೆ. ಹೀಗೆ ಪಾಲಕರಿಂದ ದೂರವಿರುವ ವಿದ್ಯಾರ್ಥಿಗಳನ್ನು ತನ್ನ ದಂಧೆಗೆ ಬಳಸಿಕೊಳ್ಳುವುದು ನೈತಿಕವಾಗಷ್ಟೇ ಅಲ್ಲ ಕಾನೂನಾತ್ಮಕವಾಗೂ ಅಪರಾಧವೇ!!

ತಳ ಸಮುದಾಯದವರಿಗೆ ಉನ್ನತ ಶಿಕ್ಷಣ ದೊರೆಯಬೇಕೆಂದು ಜಾಗಟೆ ಬಾರಿಸುವ ಮೋನಾಳ್ವ ಲಕ್ಷ-ಲಕ್ಷದ ಲೆಕ್ಕದಲ್ಲೇ ಫೀಸು ಎಣಿಸುತ್ತಾರೆ. ಪಿಯುಸಿ ಆಳ್ವಾಸ್‌ನಲ್ಲಿ ಕಲಿತರೆ ಮಗುವಿನ ಭವಿಷ್ಯ ಉಜ್ವಲ ಎಂಬ ಬ್ರ್ಯಾಂಡ್ ನೇಮ್ ಸ್ಥಾಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಈ ಸ್ವಯಂಘೋಷಿತ ಶಿಕ್ಷಣ ತಜ್ಞನ ಧಗ-ದಗಲುಬಾಜಿ ಸಾಮಾನ್ಯರಿಗೆ ಸುಲಭಕ್ಕೆ ಅರ್ಥವಾಗದಷ್ಟು ನಾಜೂಕಾಗಿದೆ. ಹತ್ತನೇ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ- ಅಂದರೆ ಸುಮಾರು ಶೇಕಡಾ 90ರ ಮೇಲೆ- ಅಂಕ ತೆಗೆದವರಿಗಷ್ಟೇ ಆಳ್ವಾಸಲ್ಲಿ ಪ್ರವೇಶ ಪಿಯುಸಿಗೆ. ಹೀಗೆ ಜಾಣ ವಿದ್ಯಾರ್ಥಿಗಳಿಂದ ಪಿಯುಸಿಯಲ್ಲಿ ಭರ್ಜರಿ ಫಲಿತಾಂಶ ಪಡೆಯುವ ಸ್ಕೆಚ್ ಇದು. ಇದರಲ್ಲಿ ಏನು ಹೆಚ್ಚುಗಾರಿಕೆ? ದಡ್ಡರನ್ನು ಪಿಯುಸಿಗೆ ಸೇರಿಸಿಕೊಂಡು ಅವರು ಉನ್ನತ ಶಿಕ್ಷಣ ಪಡೆವಂತೆ ತಯಾರು ಮಾಡುವ ಯೋಗ್ಯತೆ-ಸಾಮರ್ಥ್ಯವೇಕೆ ಮೋನಾಳ್ವರಿಂದ ಪ್ರದರ್ಶಿಸಲಾಗುತ್ತಿಲ್ಲ?! ದುಡ್ಡು ಮಾಡುವ ಶಿಕ್ಷಣೋದ್ಯಮಿಯಿಂದ ಇಂಥ ಬದ್ಧತೆ, ಸವಾಲು ಎದುರಿಸಲು ಸಾಧ್ಯವಾಗದು ಬಿಡಿ!

ಇದಿಷ್ಟು ಮೋನಾಳ್ವರ ಪಾತ್ರ ಪರಿಚಯವಾಗದೇ ಕಳೆದ ತಿಂಗಳ ಇಪ್ಪತ್ತನೇ ತಾರೀಖಿನಂದು ಆಳ್ವಾಸ್‌ನ ಹುಡುಗಿಯರ ಹಾಸ್ಟೆಲ್‌ನಲ್ಲಿ ನೇಣು ಬಿಗಿದುಕೊಂಡು ಸತ್ತಳೆಂದು ಗುಲ್ಲಾಗಿರುವ ಪಾಪದ ಹುಡುಗಿ ಕಾವ್ಯ ಪೂಜಾರಿಯ ಸಾವಿನ ಕತೆ ಅರ್ಥವಾಗುವುದಿಲ್ಲ. ಆಳ್ವಾಸಲ್ಲಿ ಸರಾಸರಿ ವರ್ಷಕ್ಕೊಂದು 'ಆತ್ಮ-ಹತ್ಯೆ' ಮಾಮೂಲು. ಪೊಲೀಸರೇ ಮಾಹಿತಿ ಹಕ್ಕಿನಡಿ ಕೊಟ್ಟ ಅಂಕಿ-ಅಂಶದಂತೆ 2008ರಿಂದ ಮೊನ್ನೆ ನಡೆದ ಕಾವ್ಯಳ ಸಾವಿನತನಕ ಆಳ್ವಾಸ್ ಕ್ಯಾಂಪಸ್‌ನಲ್ಲಿ ಒಂಭತ್ತು ಆತ್ಮಹತ್ಯೆ, ಎರಡು ಅಸಹಜ ಸಾವು ಸಂಭವಿಸಿದೆ. ಇದರಲ್ಲಿ ಹುಡುಗಿಯರೇ ಹೆಚ್ಚು. ಕಾವ್ಯ ಒಬ್ಬಳು ಬಿಟ್ಟರೆ ಉಳಿದವರು ದೂರದೂರಿನವರು. ಹೀಗಾಗಿ ಈ ಸಾವುಗಳ ಹಕೀಕತ್ತು ಸುದ್ದಿಯಾಗದೇ ಹೆಣದೊಂದಿಗೇ ಸಮಾಧಿ ಆಗಿಹೋಗಿದೆ. ಕಾವ್ಯ ಮೂಡಬಿದರೆಯಿಂದ ಕೂಗಳತೆ ದೂರದಲ್ಲಿರುವ ಕಟೀಲು ಎಂಬ ಏರಿಯಾದವಳು. ಹೀಗಾಗಿ ದಕ್ಷಿಣ ಕನ್ನಡ-ಉಡುಪಿ ಎಂಬ ಅವಳಿ ಜಿಲ್ಲೆಯಲ್ಲಿ ಡಾನ್ಸ್ ಮಾಸ್ಟರ್ ಮೋನಾಳ್ವನ ವಿರುದ್ಧ ಹೋರಾಟ, ಆರೋಪಗಳು ಭುಗಿಲೆದ್ದಿದೆ. ಅಲ್ಲಿಗೆ ಸದಾ ಝಗಮಗಿಸುವ ವೇದಿಕೆಯಲ್ಲಿ ಪೇಟ ಕಟ್ಟಿಕೊಂಡು ಮಿಂಚುತ್ತ ಯಾರ್‍ಯಾರಿಗೋ ಬೋಗಸ್ ಪ್ರಶಸ್ತಿ ವಿತರಿಸುತ್ತ ತಾನೂ ಬಿರುದು-ಬಾವಲಿ ಪಡೆಯುತ್ತಿದ್ದ ಮೋನಾಳ್ವನ ಮತ್ತೊಂದು ಮುಖವೀಗ ಹೊರ ಜಗತ್ತಿಗೆ ಗೋಚರಿಸಿಬಿಟ್ಟಂತಾಗಿದೆ!

ಆತ್ಮಹತ್ಯೆ ಅಂತೆ?

ಮೂಡಬಿದರೆಗೆ ಹತ್ತಿರವೇ ಇರುವ ಕಟೀಲಿನ ದೇವರಗುಡ್ಡದ ಬಿಲ್ಲವರ ಮನೆ ಮಗಳು ಕಾವ್ಯ ನಿಜಕ್ಕೂ ಮೌನ ಕಾವ್ಯದಂತಿದ್ದ ಹುಡುಗಿ. ಮಾತು ಕಡಿಮೆ. ಅಂತರ್ಮುಖಿಯಾಗಿದ್ದ ಕಾವ್ಯ ಬಾಲ್ ಬ್ಯಾಡ್‌ಮಿಂಟನ್ ಅಂಕಣದಲ್ಲಿ ತೀರಾ ಚುರುಕು ಆಟಗಾರ್ತಿಯಾಗಿದ್ದಳು. ಹಲವು ಪ್ರಶಸ್ತಿ ಪಡೆದುಕೊಂಡಿದ್ದ ಈ ಹದಿನಾಲ್ಕು ವರ್ಷ ಒಂದು ತಿಂಗಳ ಬಾಲೆ "ಸ್ಟಾರ್ ಆಫ್ ಇಂಡಿಯಾ" ಪದಕವೂ ಗೆದ್ದುಕೊಂಡಿದ್ದಳು. ಈಕೆಯ ಪ್ರತಿಭೆ ಕಂಡು ಆಳ್ವಾಸ್ ದೊರೆ ಮೋನಾಳ್ವನ ಅತ್ಯಾಪ್ತ ಕ್ರೀಡಾಕೋಚ್ ಪ್ರವೀಣ್ ಪೂಜಾರಿ ತಲೆದೂಗಿದ್ದ. ಕಟೀಲು ಹೈಸ್ಕೂಲ್‌ನ ಕ್ರೀಡಾ ತರಬೇತುದಾರ ಸಂತೋಷ್ ಮೂಲಕ ಬಲೆ ಬೀಸಿದ ಪ್ರವೀಣ್ ಪೂಜಾರಿ ಧಣಿಯ ಆಳ್ವಾಸ್‌ನ ವಿದ್ಯಾರ್ಥಿನಿಯಾಗಿ ಕಾವ್ಯ ಪ್ರವೇಶ ಪಡೆವಂತೆ ಸಕಲ ಹಿಕ್ಮತ್ತೂ ಮಾಡಿದ. ಸುಮಾರು ಒಂದು ತಿಂಗಳು ಕಟೀಲಿನಲ್ಲಿ ಹತ್ತನೇ ತರಗತಿ ಕಲಿತ ಕಾವ್ಯ ಆಳ್ವಾಸ್‌ಗೆ ಬಂದು ಸರಿಯಾಗಿ ಒಂದು ತಿಂಗಳೂ ಕಳೆದಿರಲಿಲ್ಲ, ತನ್ನ ಶಿಕ್ಷಣ ಮಸಾಹತಿನ ಕೀರ್ತಿಗಾಗಿ ಪ್ರತಿಭಾವಂತರನ್ನು ಹಿಡಿದು ತರುವುದು ಮೋನಾಳ್ವನ ಖಯಾಲಿಯಲ್ಲಿ ಒಂದು.

ಕಾವ್ಯ ಆಟದಲ್ಲಿ ಜಾಣೆಯಾದರೂ ಅಕಡೆಮಿಕ್ ಅಭ್ಯಾಸದಲ್ಲಿ ಸೆಕೆಂಡ್ ಕ್ಲಾಸಿಗೆ ಕೊರತೆಯಿಲ್ಲದ ಸಾಧಾರಣ ವಿದ್ಯಾರ್ಥಿನಿಯಾಗಿದ್ದಳು. ಆಕೆಯ ತಾಯಿ ಬೇಬಿ ಪೂಜಾರಿ ಮಂಗಳೂರಿನ ಕೆಎಂಸಿಯಲ್ಲಿ ನರ್ಸ್ ಆಗಿದ್ದರು. ತಂದೆ ಪೇಂಟರ್. ಆಳ್ವಾಸ್‌ನವರೇ ಆಸಕ್ತಿ ವಹಿಸಿ, ಉಚಿತ ಶಿಕ್ಷ[…] ಭರವಸೆ, ಬಾಲ್‌ಬ್ಯಾಡ್ಮಿಂಟನ್ ತರಬೇತಿಯ […] ತೋರಿಸಿದ್ದರಿಂದ ಕಟೀಲು ಹೈಸ್ಕೂಲು ತಪ್ಪಿಸಿ ಆ[…] ಕಾವ್ಯಳನ್ನು ಆಕೆಯ ತಾಯ್ತಂದೆ ಸೇರಿಸಿದ್ದರು. ಆಕೆ ತಾ[…] ತಂದೆ ಜತೆ ಆಗಾಗ ಫೋನಲ್ಲಿ ಮಾತಾಡುತ್ತಿರುತ್ತಿದ್[…] ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಆಳ್ವಾಸ್ ಆ[…] ಘೋಷಿಸಿದ ದಿನದ ಹಿಂದಿನ ರಾತ್ರಿ ಕೂಡ ನಗು-ನ[…] ತಾಯಿ ಜತೆ ಫೋನಲ್ಲಿ ಹರಟಿದ್ದಳು.

20.7.2017 ಕಾವ್ಯಳ ಬದುಕಿನ ಕೊನೆಯ ದ[…] ಆಕೆ ತನ್ನ ಸಾವಿನ ರಹಸ್ಯ ತನ್ನೊಂದಿಗೆ ತೆಗೆದುಕೊಂ[…] ಹೋಗಿದ್ದಾಳೆ. ಹಾಗಾಗಿ ಆಳ್ವಾಸ್ ದೊರೆಯ ಒಡ್ಡೋ[…] ಕೊಡುವ ವಿಶ್ಲೇಷಣೆ-ವಿವರಣೆ ಬಿಟ್ಟರೆ ಬೇರೇ[…] ಸಿಗದಾಗಿದೆ. ಆದರೆ ಪೊಲೀಸರು ಆಳ್ವಾಸ್ ಶಿ[…] ಸಾಮ್ರಾಜ್ಯದ ಮರ್ಜಿಗೆ ಬೀಳದೆ ಖಾಕಿ ನಿಯತ್ತು […] ಪಡೆವ ಸಂಬಳಕ್ಕೆ ಋಣ ತೀರಿಸುವ ಬದ್ಧತೆಯಿಂದ ಕೆ[…] ಮಾಡಿದ್ದೇ ಆದರೆ ಕಾವ್ಯಳ ಕತೆಯ ಒಳಗುಟ್ಟು ರ[…] ಮಾಡೋದೇನೂ ದೊಡ್ಡ ಸಂಗತಿಯಲ್ಲ. ಆಳ್ವಾ[…] ಯಜಮಾನ ಮೋನಾಳ್ವ ಹೇಳುವ ಪ್ರಕಾರ- ಅಂದು ಸ[…] ನಾಲ್ಕರ ನಂತರ ಕಾವ್ಯ ಲೇಡಿಸ್ ಹಾಸ್ಟೆಲ್‌ನಲ್ಲಿ ಒಬ[…] ಇದ್ದಳು. ಸಹಪಾಠಿಗಳು ಕ್ರೀಡಾ ತರಬೇತಿಗೆ ಹೋಗಿದ್[…] ಅವಳ ಐವರು ರೂಮ್‌ಮೇಟ್‌ಗಳಲ್ಲಿ ಯಾರೂ ರೂ[…] ಇರಲಿಲ್ಲ. ಆ ಹೊತ್ತಲ್ಲಿ ಕಾವ್ಯ ಗೆಳತಿಯ ತಾಯಿ ಬ[…] ಹೋಗಿದ್ದ ಸೀರೆಯಿಂದ ಫ್ಯಾನಿಗೆ ನೇಣು ಹಾಕಿಕೊಂಡಿದ[…] ಆಗ ವಾರ್ಡನ್ ಕೂಡ ಹಾಸ್ಟೆಲ್‌ನಲ್ಲಿ ಇರಲಿಲ್ಲ.

ಅಡಗೂಲಜ್ಜಿ ಕತೆ ಥರ

ಮುಸ್ಸಂಜೆ 7ರ ವೇಳೆಗೆ ಕಾವ್ಯಳ ರೂಮ್‌ಮೇ[…] ಗೆಳತಿಯರು ಬರುತ್ತಾರೆ. ಆಗ ಒಳಗಿಂದ ಚ[…] ಹಾಕಿಕೊಂಡಿತ್ತು. ಎಷ್ಟು ಕರೆದರೂ ಬಾಗಿಲು ತೆಗೆಯಲಿ[…] ಆಗ ಕಿಟಕಿ ಬಾಗಿಲು ಸರಿಸಿ ನೋಡಿದ್ದಾರೆ. ಕಾವ್ಯ ನೇ[…] ಹಾಕಿಕೊಂಡ ಸ್ಥಿತಿಯಲ್ಲಿ ಅಲುಗಾಡುತ್ತಿದ್ದಳು. ಆಕೆ[…] ಗೆಳತಿಯರ ಕಿರುಚಾಟ ಕೇಳಿ ಸೀನಿಯರ್ ಕ್ರೀಡಾಪ[…] ನಿಖಿತಾ ಎಂಬ ಡಿಗ್ರಿ ಹುಡುಗಿ ಓಡಿಬಂದಿದ್ದಾಳೆ. […] ಧೈರ್ಯ ಮಾಡಿ ಪಕ್ಕದ ಕೋಣೆಯಿಂದ ಕಾವ್ಯಳ ರೂ[…] ಧುಮುಕಿದ್ದಾಳೆ. ಬಾಗಿಲು ತೆಗೆದು ಉಳಿದ ಹುಡುಗಿ[…] ಸಹಾಯದಿಂದ ಕಾವ್ಯಳ ದೇಹ ಕುಣಿಕೆಯಿಂದ ಕೆಳಗಿಳಿಸಿ[…] ಸುದ್ದಿ ತರಬೇತುದಾರ ಪ್ರವೀಣ್ ಪೂಜಾರಿಗೆ ತಲುಪಿ[…] ಅದು ಆತನ ಮೂಲಕ ಸಂಸ್ಥೆಯ ಒಡೆಯ ಮೋನಾಳ್ವ[…] ಮುಟ್ಟಿದೆ. ಪ್ರವೀಣ್ ತಕ್ಷಣ ಕಾವ್ಯಳ ಹೆತ್ತವ[…] ಫೋನಾಯಿಸಿ ಕಾವ್ಯ 'ಕತೆ'ಯಾದಳೆಂದು ಹೇಳಿದ್ದಾನೆ. ಇದಿ[…] ಮೋನಾಳ್ವ, ಆತನ ಶಿಷ್ಯ ಪ್ರವೀಣ್ ಪೂಜಾರಿ ಮ[…] ಕಾವ್ಯಳ ರೂಮ್‌ಮೇಟ್‌ಗಳು ಉರು ಹೊಡೆದಂತೆ ಒ[…] ಉಸಿರಿಗೆ ಹೇಳಿಮುಗಿಸುವ ಒಂಥರಾ ಕೃತಕವಾದ ಕ[…]

ಈ ಕಾಗಕ್ಕೆ-ಗುಬ್ಬಕ್ಕ ಕತೆ ಕೆದಕುತ್ತಾ ಹೋದರೆ ಕಾ[…] ಸಾವಿನ ಸುತ್ತ ಅನುಮಾನದ ಹುತ್ತವೇ ಏಳುತ್ತ[…] ವಿದ್ಯಾರ್ಥಿನಿಯರೇ ಸ್ವಯಂ ನಿರ್ಧಾರ ತೆಗೆದುಕೊಂ[…] ಹೆಣ ನೇಣು ಕುಣಿಕೆಯಿಂದ ಇಳಿಸಿದ್ದಾರೆಂಬು[…] ನಂಬಲಸಾಧ್ಯವಾದದ್ದು. ಆಳ್ವಾಸ್‌ನಂತ 'ಕಟ್ಟು-ನಿಟ್[…] ಕಾಲೇಜಿನ, ದರ್ಪಿಷ್ಟ ವಾರ್ಡನ್‌ಗಳ ಹಾಸ್ಟೆ[…] ಹುಡುಗಿಯರು ಹೆಣ ಇಳಿಸುವ ಸಾಹಸ ಮಾಡುತ್ತಾರೆ[…] ಹೇಳೋದೇ ಕಟ್ಟು ಕತೆಯಾಗಿ ಕೇಳಿಸುತ್ತದೆ. ಹೆಣ ಕಂಡ[…] ಅದೂ ನೇತಾಡುವ ಸಹಪಾಠಿಯ ದೇಹ ಕಂಡ[…]













...ರು ಅದೆಷ್ಟೇ ಧೈರ್ಯಶಾಲಿಗಳಾದರೂ ಕಂಗೆಡದೇ ... ಸಾಧ್ಯವೇ ಇಲ್ಲವೆಂದು ಮನೋತಜ್ಞರು ಹೇಳುತ್ತಾರೆ. ...ಮ್ಮ ಹೆದರದಿದ್ದರೂ ಹೆಣ ಕೆಳಗಿಳಿಸುವ ಗಟ್ಟಿತನ ...ಯರಿಗೆ ಬರಲು ಸಾಧ್ಯವೇ ಇಲ್ಲವೆನ್ನುತ್ತಾರೆ ಅನುಭವಿ ...ಸ್ ಅಧಿಕಾರಿಗಳು.

ಸಂಶಯಗಳ ಸರಮಾಲೆ

...ವ್ಯ ಸಾಯುವ ಮೊದಲ ರಾತ್ರಿ ತಾಯಿ ಜತೆ ...ವುದೇ ಖಿನ್ನತೆ-ಬೇಸರ-ಹತಾಶೆ ತೋರಿಸಿರಲಿಲ್ಲ. ...ನಿನಲ್ಲಿ ಸಹಜವಾಗಿ-ಲವಲವಿಕೆಯಿಂದಲೇ ...ಡಿದ್ದಳು. ನಿಂಗೆ ಪಿಂಕ್ ಚೂಡಿದಾರ್ ತರ್ತೇನೆ ಎಂದು ... ಅಂದಾಗ ನಂಗೆ ಚಾಕಲೇಟು ಬೇಕು ಅಂದಿದ್ದಾಳೆ. ...ಕ್ಲಾಸ್‌ಟೆಸ್ಟ್‌ನಲ್ಲಿ ಬಿದ್ದ ಮಾರ್ಕ್ ಬಗ್ಗೆ ಹೇಳಿದ್ದಾಳೆ. ...ಳಗ್ಗೆ 4.30ಕ್ಕೆ ಪ್ರಾಕ್ಟೀಸ್‌ಗೆ ಬರಲು ತರಬೇತುದಾರ ...ದ್ದಾನೆ ಅಂದಿದ್ದಾಳೆ. ಅಷ್ಟು ಮುಂಚೆ ನಂಗೆ ...ಗುತ್ತದೋ ಇಲ್ಲವೋ ಎಂದು ಅನುಮಾನಿಸಿದ ...ಗೆ ನಿಂಗೊಂದು ಅಲಾರಾಮ್ ಗಡಿಯಾರ ...ಕೊಡ್ತೇನೆ ಅಂದಿದ್ದಾಳೆ ಆಕೆಯ ತಾಯಿ. ಸಾವಿನ ...ಯೋಚಿಸಿದ ಅಥವಾ ಬದುಕಿನ ಬಗ್ಗೆ ಜಿಗುಪ್ಸೆ ...ಸುವ ಯಾವ ಸೂಚನೆಯೂ ಆಕೆಯ ಮಾತಿನಲ್ಲಿ ...ಹಲು ಸಾಧ್ಯವೇ ಇಲ್ಲ.

...ಂಥ ಹುಡುಗಿ ಮರುದಿನ ಇನ್ನಿಲ್ಲವಾಗಿದ್ದಾಳೆ. ಇಲ್ಲಿ ... ಅನುಮಾನ ಎಂಥ ಹೆಡ್ಡನಿಗೂ ಬರುತ್ತದೆ. ...ಜಾನೆ ನಾಲ್ಕು ಮೂವತ್ತಕ್ಕೆಲ್ಲ ಕಾವ್ಯಳನ್ನು ಪ್ರಾಕ್ಟೀಸ್ ...ಲ್ಲಿ ಕರೆಯುತ್ತಿದ್ದದ್ದು ಯಾಕೆ? ತರಬೇತುದಾರ ಪ್ರವೀಣ್ ...ರಿಗೆ ಕೇಳಿದರೆ ಇದು ಘೋರ ಸುಳ್ಳು ಅಂತಾನೆ. ...ಗುರು ಮೋನಾಳ್ವ ತನ್ನ ಮುದ್ದು ಪೋರ ಪ್ರವೀಣ ...ಗೆ ಬರುವುದೇ ಬೆಳಗ್ಗೆ 6ರ ನಂತರ ಅಂತಾನೆ. ...ದ್ದರೆ ಕಾವ್ಯ ನಾಲ್ಕೂವರೆಗೆ ತನಗೆ ಪ್ರಾಕ್ಟೀಸ್ ...ಂದು ಸುಳ್ಳು ಹೇಳುವ ದರ್ದಾದರೂ ಏನು? ... ಸುರಕ್ಷಿತ ಸುಸಜ್ಜಿತ ಕಾಲೇಜು-ಹಾಸ್ಟೆಲು ಎಂದು ಮೋನಾಳ್ವ ಕೊಚ್ಚಿಕೊಳ್ಳುತ್ತಾರೆ. ಆದರೆ ಹಾಸ್ಟೆಲ್‌ನಲ್ಲಿ ಒಂದು ಸಿಸಿ ಕ್ಯಾಮೆರಾ ಇಲ್ಲವಂತೆ! ಕ್ಯಾಂಪಸ್‌ನಲ್ಲಿ ಹಾಸ್ಟೆಲ್ ಹೊರಗೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆಯಂತೆ.

ಸಿಸಿ ಕ್ಯಾಮರಾದಲ್ಲಿ ಕಾವ್ಯಳ ಮೃತದೇಹ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಒಯ್ಯುವುದು, ಆಸ್ಪತ್ರೆಯ ಕ್ಯಾಶುವಲ್ಟಿಯ ಸ್ಟ್ರೇಚರಲ್ಲಿ ಟ್ರ್ಯಾಕ್ ಸೂಟಲ್ಲಿ ಇರುವ ಕಾವ್ಯಳ ದೇಹ ಮಲಗಿಸಿ ಮರಣೋತ್ತರ ಪರೀಕ್ಷೆಗೆ ಒಯ್ಯುವುದು ದಾಖಲಾಗಿದೆಯಂತೆ. ಆದರೆ ಹಾಸ್ಟೆಲ್‌ನ ಒಂದೇ ಒಂದು ಘಟನಾವಳಿಯ ದೃಶ್ಯ ಮೋನಾಳ್ವ ಬಳಿಯಿಲ್ಲ. ಹಾಸ್ಟೇಲಿಂದ ಹೆಣ ಒಯ್ಯುವಾಗ ವೀಡಿಯೋ ಮಾಡಬಹುದಿತ್ತಲ್ಲ, ಕನಿಷ್ಠ ಮೊಬೈಲ್‌ನಲ್ಲಿಯಾದರೂ ಚಿತ್ರೀಕರಿಸಬಹುದಿತ್ತಲ್ಲ, ಅದು ಯಾಕೆ ಮೋನಾಳ್ವರಂಥ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇರುವ ಶಿಕ್ಷಣ ಪ್ರೇಮಿಯಿಂದ ಆಗಿಲ್ಲವೆಂದರೆ ಆಳ್ವಾಸ್‌ನಲ್ಲಿ ಉತ್ತರವಿಲ್ಲ. ಈಗ ಹರಿದಾಡುತ್ತಿರುವ ಸುದ್ದಿಗಳ ಪ್ರಕಾರ ಕಾವ್ಯಳ ಸಾವು ಹಾಸ್ಟೆಲ್‌ನಲ್ಲಿ ಆಗಿಲ್ಲ, ಅದು ಅಂದು ಮುಂಜಾನೆಯೇ ಆಗಿಹೋಗಿದೆ ಎಂಬ ಗುಲ್ಲುಗಳು ಎದ್ದಿದೆ.

ಮೋನಾಳ್ವನ ತರಾತುರಿ

ಕಾವ್ಯಳ ಹೆತ್ತವರು ಕಟೀಲಿನಿಂದ ಮೂಡಬಿದ್ರೆಗೆ ಬರಲು ಹೆಚ್ಚೆಂದರೆ ಅರ್ಧ ಗಂಟೆ ಸಾಕು. ಅಷ್ಟು ಕಾಯುವ ವ್ಯವಧಾನವೂ ಅಪರಾಧಿ ಪ್ರಜ್ಞೆಯಲ್ಲಿ ಹೈರಾಣಾಗಿದ್ದ ಮೋನಾಳ್ವರಿಗೆ ಇರಲಿಲ್ಲ. ಆತ ಲಗುಬಗೆಯಲ್ಲಿ ಮೂಡಬಿದರೆ ಎಸ್‌ಐ ದೇಜಪ್ಪ-ಸಿಪಿಐ ರಾಮಚಂದ್ರನಂಥವರ ಓಲೈಸಿ ಕಾವ್ಯಳ ಮರಣೋತ್ತರ ಪರೀಕ್ಷೆ ಮಾಡಿಸಿ ಮೋಕ್‌ಳಿಕ್ ಆಗಿದ್ದಾರೆ. ಅಷ್ಟೇ ಅಲ್ಲ, ಆಕೆಯ ಹೆತ್ತವರು ಬರುವ ಮೊದಲೇ ಹೆಣವನ್ನು ಶವಾಗಾರಕ್ಕೆ ರವಾನಿಸಿದ್ದಾರೆ ಪೊಲೀಸರು. ಈ ಅವಸರದ ಕಾರ್ಯಾಚರಣೆಯೇ ಮೋಹನ್ ಆಳ್ವರ ಅಸಲಿಯತ್ತು ಬಿಚ್ಚಿಡುತ್ತಿದೆ.

ಸುದ್ದಿ ತಿಳಿದ ಒಂದು ಗಂಟೆಯೊಳಗೆ ಕಾವ್ಯಳ ತಂದೆ-ತಾಯಿ-ಮಾವ ಬಂದು ತಲುಪಿದ್ದಾರೆ. ಆಗಲೇ ಕಾವ್ಯಳ ಹೆಣ ಬರ್ಫ್‌ದಂತಾಗಿತ್ತು, ಇದು ಆಕೆ ಸತ್ತದ್ದು ಬೆಳಗ್ಗೆಯೇ ಇರಬೇಕು; ಬಹಳ ಹೊತ್ತಿಂದ ಮೋರ್ಚರಿಯಲ್ಲಿ ಹೆಣ ಇಡಲಾಗಿದೆ ಎಂಬ ಸಂಶಯಕ್ಕೆ ಕಾರಣವಾಗಿದೆ. ಎರಡೆರಡು ಬೆಡ್‌ಶೀಟಲ್ಲಿ ಶವ ಸುತ್ತಲಾಗಿತ್ತು. ಹೆತ್ತವರಿಗೆ ಆಕೆಯ ಮುಖ ಬಿಟ್ಟು ಬೇರೇನೂ ತೋರಿಸಲಿಲ್ಲ. ಮೋನಾಳ್ವನ ಈ ಮಸಲತ್ತಿನ ಹಿಂದೆ ತನ್ನ ಶಿಕ್ಷಣ ದಂಧೆಯ ಟ್ರೇಡ್‌ನೇಮ್‌ಗೆ ಧಕ್ಕೆಯಾಗದಂತೆ ನಿಗಾ ವಹಿಸುವ ಅನಿವಾರ್ಯತೆ-ಚಡಪಡಿಕೆ ಅಡಗಿದೆ. ಹೊರಜಗತ್ತಿಗೆ ಆಳ್ವಾಸ್‌ನಲ್ಲಿ ಹೆಣ, ಅದೂ ಅಮಾಯಕ ಹೆಣ್ಣು ಮಗುವಿನ ಹೆಣ, ಬಿದ್ದಿದೆ ಎಂದು ಬೊಬ್ಬೆ ಬಿದ್ದರೆ ಆತನ ಶಿಕ್ಷಣೋದ್ಯಮದ ಪಾಡೇನಾಗಬೇಡ? ಹಾಗಾಗಿಯೇ ಅವಸರವಸರವಾಗಿ ಎಲ್ಲ ಸತ್ಯ ಹೂತುಹಾಕಲು ಮೋನಾಳ್ವ ಗ್ಯಾಂಗು ಹವಣಿಸಿದೆಯಷ್ಟೇ!

ವಾಯ್ಸ್ ರೆಕಾರ್ಡ್

ಕಾವ್ಯಳ ಸಾವಿನ ಬಗ್ಗೆ ಇಡೀ ಕರಾವಳಿ ಕೆರಳಿದೆ. ಎಡ-ಬಲ ವಿದ್ಯಾರ್ಥಿ ಸಂಘಟನೆಗಳು ಮೋನಾಳ್ವನ ಮೇಲೆ ಮುರಕೊಂಡು ಬಿದ್ದಿವೆ. ಇಡೀ ರಾಜ್ಯದಲ್ಲಿ ಆಳ್ವಾಸ್‌ನ ಟ್ರೇಡ್ ಹೆಸರಿಗೆ ಕಳಂಕ ತಟ್ಟಿದೆ. ಹೆತ್ತವರು ತಮ್ಮ ಮಕ್ಕಳನ್ನು ಆಳ್ವಾಸ್‌ಗೆ ಕಳಿಸಲು ನಾಲ್ಕು-ನಾಲ್ಕು ಸಲ ಯೋಚಿಸುವ ಪರಿಸ್ಥಿತಿ ಬಂದಿದೆ. ಮೋನಾಳ್ವನ ಮತ್ತೊಂದು ಮುಖದ ಅನಾವರಣವಾಗಿದೆ. ಆ ವಿದ್ಯಾ ವ್ಯಾಪಾರಿಗೆ ತನ್ನ ಸಂಸ್ಥೆಯ ಅಂಗಳದಲ್ಲಿ ಬೀಳುವ ಹೆಣದ ಬಗ್ಗೆ ಯಾವ ಕಳಕಳಿ-ಕಾಳಜಿ-ಗೌರವವೇ ಇಲ್ಲವೆಂಬುದು ಈಗ ಪಕ್ಕಾ ಆಗಿದೆ. ಆಳ್ವಾಸಲ್ಲಿ ವರ್ಷಕ್ಕೊಂದರಂತೆ ಹೆಣ ಬೀಳುತ್ತದೆ ಎಂಬುದು ಸೂರ್ಯ ಸತ್ಯ. ಅದನ್ನು ತುಂಬ ವ್ಯವಸ್ಥಿತವಾಗಿ ಮೋನಾಳ್ವ ಎಂಬ ಹಣ-ಪ್ರಭಾವದಲ್ಲಿ ಪರಾಕ್ರಮಿಯಾದ ದಂಧೆಕೋರ ನಿಭಾಯಿಸುತ್ತ ಬಂದಿದ್ದಾನೆ.

ಇಲ್ಲಿ ಆಗುವ ಸಾವುಗಳೆಲ್ಲವೂ ಆತ್ಮಹತ್ಯೆಯಷ್ಟೇ. ಈ ಶರಾ ಮೋನಾಳ್ವ ಪೊಲೀಸರಿಂದ ಬರೆಸಿ ಮುಂದೆ ತನಿಖೆ ನಡೆಯದಂತೆ ಮಾಡುತ್ತಾನೆ. ಅಸಹಜ ಸಾವುಗಳು ನಡೆದಾಗ ಮಣಿಪಾಲ್ ಪೈಗಳ ರಿಪಬ್ಲಿಕ್‌ನಲ್ಲಿ ಹೇಗೆ ವ್ಯವಸ್ಥಿತವಾಗಿ ಮುಚ್ಚಿಹಾಕಲಾಗುತ್ತದೋ ಅದೇ ಶೈಲಿಯಲ್ಲಿ ಆಳ್ವಾಸ್‌ನಲ್ಲೂ ಕೇಸ್ ಖತಮ್ ಆಗುತ್ತದೆ. ಸಾವು ಸಂಭವಿಸಿದ ಮೂರ್‍ನಾಲ್ಕು ತಾಸಲ್ಲಿ ಹೆಣ ತವರೂರು ಸೇರುವ ವ್ಯವಸ್ಥೆ ಮೋನಾಳ್ವರ ಕಿಂಕರ ಪಡೆ ಮಾಡುತ್ತದೆ. ಹೀಗಾಗಿ ಎಲ್ಲವೂ ಮೊಗಮ್ ಆಗಿ ಮುಗಿದುಹೋಗುತ್ತದೆ. ಆದರೆ ಈ ಬಾರಿಯ ಕಾವ್ಯಳ ಸಾವು ಹಾಗಾಗದೆ ಮೋನಾಳ್ವನ ಸುತ್ತಿಕೊಂಡಿದೆ. ಆತ ಆಳ್ವಾಸ್‌ನ ಅದ್ವಾನ-ಅಕ್ರಮ-ಅನಾಚಾರದ ಬಗ್ಗೆ ಭುಗಿಲೆದ್ದು ಬೆಚ್ಚಿ ಬಳಿಚಿಕೊಂಡಿದ್ದಾನೆ. ಸರಿಯಾದ ಸಮಜಾಯಿಷಿ ಕೊಡಲಾಗದೆ ತಡವರಿಸಿದ್ದಾನೆ. ಇದಕ್ಕೆಲ್ಲ ಪ್ರಮುಖ ಕಾರಣ- ಸತ್ತ ಹುಡುಗಿ ಲೋಕಲ್!!

ಕಾವ್ಯಳ ತಾಯಿ-ತಂದೆಯೂ ಮೊದ-ಮೊದಲು ಈ ಬಲಾಢ್ಯ ಮೋನಾಳ್ವ ಗ್ಯಾಂಗ್‌ಗೆ ಹೆದರಿಕೊಂಡಿದ್ದರು. ಯಾವಾಗ ಸ್ಥಳೀಯರು, ಸರ್ವ ಕಾಲೇಜು ಯೂನಿಯನ್, ಎಸ್‌ಎಫ್‌ಐ, ಎಬಿವಿಪಿಯಂಥ ಸಂಘಟನೆಗಳು, ರಾಬರ್ಟ್ ರೊಸಾರಿಯೋ ಎಂಬ ಪುಢಾರಿ ತಿರುಗಿಬಿದ್ದು ಬೊಬ್ಬೆ ಹಾಕತೊಡಗಿದವೋ ಆಗ ಕಾವ್ಯಳ ತಾಯಿಗೆ ಧೈರ್ಯ ಬಂದಿದೆ. ಆಕೆ ತನ್ನ ಮಗಳ ಸಾವಿಗೆ ತರಬೇತುದಾರ ಪ್ರವೀಣ ಪೂಜಾರಿಯೇ ಹೊಣೆ ಎಂದು ಬಹಿರಂಗವಾಗೇ ದೂರಿದ್ದಾಳೆ. ಆಕೆಗೆ ಅರಿವಿಲ್ಲದೆ ಮೊಬೈಲ್‌ನಲ್ಲಿ ರೆಕಾರ್ಡ್ ಆದ ಕಾವ್ಯಳ ಜತೆಗಿನ ಸಂಭಾಷಣೆ ಎರಡು-ಮೂರು ದಿನದ ನಂತರ ಗೊತ್ತಾಗಿದೆ. ಅದರಲ್ಲಿ ಪ್ರವೀಣ್ ಬೆಳಗಿನ ಜಾವ ನಾಲ್ಕೂ ಮೂವತ್ತಕ್ಕೆ ಒಳಾಂಗಣ ಕ್ರೀಡಾಂಗಣಕ್ಕೆ ಬರಲು ಹೇಳಿದ್ದಾನೆಂಬುದೂ ದಾಖಲಾಗಿತ್ತು. ಈ ವಾಯ್ಸ್‌ರೆಕಾರ್ಡ್ ಮೋನಾಳ್ವನ ಗ್ರಹಚಾರ ಬಿಡಿಸುತ್ತಿದೆ!!

ಯಾರಿವನು ಪ್ರವೀಣ್ ಪೂಜಾರಿ

ಕಾವ್ಯಳ ತಾಯಿಗೆ ಅನುಮಾನವಿರುವುದು ತರಬೇತುದಾರ ಪ್ರವೀಣ್ ಪೂಜಾರಿ ಮೇಲೆ. ಆತನ ನಡೆನುಡಿ ಕಾವ್ಯಳಿಗೆ ನ್ಯಾಯ ಕೊಡಿಸುವ ಹಠಕ್ಕೆ ಬಿದ್ದಿರುವ ಹೋರಾಟಗಾರರಿಗೆ ಮತ್ತು ಸಾಮಾನ್ಯ ಜನರಿಗೂ ಅನುಮಾನ

⏭ 10







ಮೋನಾಳ್ವನ ಸುಳ್ಳು-ಸಬೂಬು!!

...ದು ಹಂತದವರೆಗೆ ಮುಖವಾಡ-ಸುಳ್ಳು-...ಬು-ಋಣಾತ್ಮಕ ಯಶಸ್ಸು -ಲಾಭ-ಪ್ರಸಿದ್ಧಿ ...ಕೊಡುತ್ತದೆ. ಮುಖವಾಡ ಕಳಚಿ ಬಿದ್ದಾಗ ...ದ್ದೋ ಮಾದಾಯ ಎನ್ನುತ್ತದೆ ನೈಸರ್ಗಿಕ ನ್ಯಾಯತತ್ವ. ... ಸತ್ವ ಪರೀಕ್ಷೆಯಲ್ಲೀಗ ಆಳ್ವಾಸ್ ಟ್ರೇಡರ್ಸ್ ಕಿಂಗ್ ...ಲ್ಲ ಬಿದ್ದಿದ್ದಾನೆ. ಇಷ್ಟು ದಿನ ಸರಿಯಿದ್ದ ಮೋನಾಳ್ವನ ...ರ ಈಗ ವಕ್ರವಾಗಿದೆ. ಸ್ಥಳೀಯ ಹುಡುಗಿ ಹಠಾತ್ ... ಅಂಗಳದಲ್ಲೇ ಸತ್ತಿರುವುದು ದೊರೆಯ ಅಸಲೀ ...ರ ಅನಾವರಣ ಮಾಡಿಬಿಟ್ಟಿದೆ. ವಾಟ್ಸ್‌ಅಪ್, ...ಕ್‌ನಂಥ ಸಾಮಾಜಿಕ ಜಾಲತಾಣಗಳಲ್ಲಿ ಮೋನಾಳ್ವನ ...ಖರ ಟೀಕೆ-ಆಕ್ಷೇಪ-ಆರೋಪ ಹರಿದಾಡುತ್ತಿದೆ. ...ಲ್ಲಿ ಮುಖ್ಯವಾದದ್ದು- ಮೋನಾಳ್ವನ ಮಗ ವಿವೇಕ್ ...ರಬೇತುದಾರ ಪ್ರವೀಣ್ ಪೂಜಾರಿ ಎಂಬ ಆತ್ಮೀಯ ...ರು ಸೇರಿ ಕಾವ್ಯಳ ತಿಂದು-ಕೊಂದು ಹಾಕಿದ್ದಾರೆ ...ದು. ಇದೆಷ್ಟು ಸತ್ಯವೋ ಗೊತ್ತಿಲ್ಲ, ಆದರೆ ಮುಂಜಾನೆ ...ಸರಿಗೆ ತನ್ನನ್ನು ಕೋಚ್ ಪ್ರಾಕ್ಟೀಸಿಗೆ ಕರೆದಿದ್ದಾರೆಂದು ...ವ ಮೊದಲು ಕಾವ್ಯ ಹೇಳಿರುವುದು ಇಂಥದೊಂದು ...ಗೆ ಪುಷ್ಟಿ ಕೊಡುತ್ತಿದೆ.

...ವ್ಯ ಸತ್ತಾಗ ಆಳ್ವಾಸ್ ದೊರೆ ನಡೆದುಕೊಂಡ ರೀತಿ ...ಸಿಯು. ಆಕೆಯ ಹೆತ್ತವರು ಬರುತ್ತಿರುವಾಗಲೇ ...ಸ್ಟ್‌ಮಾರ್ಟಮ್ ಮಾಡಿ ಹೆಣ ಮಾರ್ಚರಿಗೆ ಕಳಿಸುವ ... ಮಾಡಲಾಗಿತ್ತು, ಆಕೆಗಾಗಿ ಸಣ್ಣ ಸಂತಾಪವೂ ...ಲ್ಲಿ ನಡೆಯಲಿಲ್ಲ, ಆಕೆಯ ಹೆತ್ತವರಿಗೂ ಮೋನಾಳ್ವ ...ಹಿತ್ಯ-ಸಂಸ್ಕೃತಿ-ಶಿಕ್ಷಣ ಹರಿಕಾರ ಕನಿಷ್ಠ ಸಾಂತ್ವನ ... ಕಾವ್ಯಳನ್ನು ಆಕೆಯ ಕ್ರೀಡಾ ಪ್ರತಿಭೆಯಿಂದ ಆಳ್ವಾಸ್‌ನ ಕೀರ್ತಿ ಹೆಚ್ಚಿಸುತ್ತಾಳೆಂದೇ ಮೋನಾಳ್ವ ಕರೆತಂದಿದ್ದ. ಅಂಥ ಪ್ರತಿಭಾನ್ವಿತೆ ಕಾಲೇಜಲ್ಲೇ ಸತ್ತಾಗ ಮೋನಾಳ್ವ ನಡೆದುಕೊಂಡ ರೀತಿ ಆತನೆಷ್ಟು ಕುಬ್ಜ, ಕಠೋರ, ವ್ಯಾಪಾರಿ ಆಸಾಮಿ ಎಂಬುದು ಜಗಜ್ಜಾಹೀರು ಮಾಡಿದೆ. ಇಂಥದೊಂದು ಭರ್ಜರಿ ಡ್ಯಾಮೇಜ್‌ನಿಂದ ಬಚಾವಾಗಲೂ ಈಗ ಆಳ್ವಾಸ್ ಗ್ಯಾಂಗ್ ಕಾವ್ಯಳ ಕ್ಯಾರೆಕ್ಟರ್‌ಗೆ ಮಸಿಬಳಿವ ಮಸಲತ್ತು ಮಾಡುತ್ತಿರುವುದು ಅಸಹ್ಯವಾಗಿದೆ. ಅಷ್ಟೇ ಅಲ್ಲ, ತಾನೊಬ್ಬ ಸಂಭಾವಿತನೆಂದು ತೋರಿಸಲು ಮೋನಾಳ್ವ ಶಿಕ್ಷಣ ಮಾಫಿಯಾ, ಕ್ರಿಶ್ಚಿಯನ್ ಲಾಬಿ, ಬಂಟರ ವಿರೋಧಿ ಬಣದ ಮೇಲೆಲ್ಲ ಗೂಬೆ ಕೂರಿಸುತ್ತಿದ್ದಾನೆ.

ಕಾವ್ಯ ಕ್ಲಾಸ್ ಪರೀಕ್ಷೆಯೊಂದರಲ್ಲಿ ಎರಡು ವಿಷಯದಲ್ಲಿ ಏಳೇಳು ಮಾರ್ಕ್ ಪಡೆದಿದ್ದಳು. ಆದರೆ ತಾಯಿ ಬಳಿ ತನಗೆ 20ಕ್ಕೆ ಹತ್ತೊಂಬತ್ತೂವರೆ ಮಾರ್ಕ್ ಬಿದ್ದಿದೆ ಎಂದಿದ್ದಳು. ತಾಯಿ ಆಕೆಗೆ ಪದೇಪದೇ ಪರೀಕ್ಷೆ ಬಗ್ಗೆ ವಿಚಾರಣೆ ನಡೆಸಿದ್ದಳು. ತಾನು ಸುಳ್ಳು ಹೇಳಿದ್ದು ಅಮ್ಮನಿಗೆ ಗೊತ್ತಾಗುತ್ತದೆಂಬ ಭಯದಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಳೆಂದು ಸುದ್ದಿ ಹಬ್ಬಿಸಲಾಗುತ್ತಿದೆ. ಆದರೆ ಮೋನಾಳ್ವನೇ ಹೇಳುವಂತೆ ಆಕೆ ಶೇಕಡಾ 54 ಸಾಮರ್ಥ್ಯದ ಹುಡುಗಿ. ಅಷ್ಟೇ ಅಲ್ಲ, ಅಷ್ಟಕ್ಕೂ ಮೊನ್ನೆ ಆಗಿದ್ದು ಅಂಥ ಮಹತ್ವವಿಲ್ಲದ ಕ್ಲಾಸ್‌ಟೆಸ್ಟ್, ಅಲ್ಲಿ ಕಡಿಮೆ ಅಂಕ ಬಂತೆಂದು ಸಾವಿಗೆ ಶರಣಾಗೋ ಪುಕ್ಕಿ ಆಕೆಯಲ್ಲ. ಜತೆಗೆ ತಾನು ಕ್ರೀಡಾಪಟುವಾದ್ದರಿಂದ ಪಾಸಾಗುತ್ತ ಹೋದರೆ ಸಾಕು; ಉದ್ಯೋಗ ಗ್ಯಾರಂಟಿ. ಕ್ರೀಡೆಯಲ್ಲಿ ದೊಡ್ಡ-ದೊಡ್ಡ ಸಾಧನೆ ಮಾಡಬೇಕೆಂಬ ಒಂದೇ ಗುರಿ ಆಕೆಯದಾಗಿತ್ತು. ಅಂಥ ನಿರ್ಧಾರದ ಹುಡುಗಿ ಪುಟಗೋಸಿ ಪರೀಕ್ಷೆಯ ಕಡಿಮೆ ಅಂಕಕ್ಕಾಗಿ ಜೀವ ತೆಗೆದುಕೊಳ್ಳುತ್ತಾಳಾ?


ಈಗ ತೇಲಿಬಿಡಲಾಗಿರುವ ಮತ್ತೊಂದು ಪುಕಾರೆಂದರೆ, ಕಾವ್ಯಳಿಗೆ ಕೇರಳದ ನಾಟೇಕಲ್‌ನ ಬ್ಯಾರಿ ಪೋರನ ಜತೆ ಅನ್ಯೋನ್ಯ ದೋಸ್ತಿಯಿತ್ತು. ಇದೇ ಎಡವಟ್ಟು ಮಾಡಿದೆ ಎಂಬುದು. ಇದು ಹಸಿ-ಹಸೀ ಸುಳ್ಳು. ತರಬೇತುದಾರ ರಾಜು ಎಂಬಾತನ ಹುಟ್ಟುಹಬ್ಬದ ಕೇಕ್ ಕತ್ತರಿಸಿದಾಗ ಈ ಇಬ್ಬರೂ ಕೇಕ್‌ಕ್ರೀಮ್ ಮುಖಕ್ಕೆ ಪರಸ್ಪರ ಹಚ್ಚಿಕೊಂಡಿದ್ದನ್ನೇ 'ಲವ್' ಎಂದು ಬಣ್ಣ ಬಳಿಯಲಾಗುತ್ತಿದೆ. ದೊಡ್ಡವರು ಇಂಥ ಸಣ್ಣತನದಿಂದ ಬಚಾವಾಗಲು ಹವಣಿಸೋದು ಎಂಥ ಸಿಲ್ಲಿಯೋ ಅಷ್ಟೇ ಅಸಹ್ಯ ಕೂಡ. ತನ್ನ ವಿರುದ್ಧ ಶಿಕ್ಷಣ ಮಾಫಿಯಾ ಮಸಲತ್ತು ಮಾಡುತ್ತಿದೆ ಎಂಬುದು ಮೋನಾಳ್ವನ ಅಳಲು. ಅಸಲಿಗೆ ಮೋನಾಳ್ವನದೆ ಒಂದು ಶಿಕ್ಷಣ ಮಾಫಿಯಾ ಎಂಬುದೇ ಗಮ್ಮತ್ತು ಮಾರಾಯ್ರೆ!!


ಸಕಲ ಕೀರ್ತಿ, ರ್‍ಯಾಂಕ್, ಪದಕ ತನ್ನ ಆಳ್ವಾಸ್ ಟ್ರೇಡರ್ಸ್‌ಗೆ ಧಕ್ಕಬೇಕೆಂಬ ದುರಾಸೆಯ ಮೋನಾಳ್ವ ಇದೇ ತನಗೆ ಮುಳುವಾಗಿದೆ ಎಂದು ಹಲುಬುತ್ತಿದ್ದಾನೆ. ಪರಮ ಚಡ್ಡಿಯಾದ ಮೋನಾಳ್ವನಿಗೆ ಹಿಂದೂವಾದಿಗಳು ಸ್ವಾಮಿ ವಿವೇಕಾನಂದರ ನೂರಾಐವತ್ತನೇ ಜನ್ಮದಿನಾಚರಣೆ ಹಬ್ಬಕ್ಕೆ ಅಧ್ಯಕ್ಷನಾಗಿಸಿದ್ದಾರೆ. ವಿಶ್ವಹಿಂದೂ ಪರಿಷತ್‌ನ ಮತಾಂಧ ಸಮಾರಂಭದಲ್ಲಿ ಈತನಿಗೊಂದು ಕುರ್ಚಿ ಖಂಡಿತ. ಹೀಗಾಗಿ ತನ್ನ ಮೇಲೆ ಅನ್ಯಧರ್ಮೀಯರು ಕೆಂಗಣ್ಣು ಹಾಕಿದ್ದಾರೆ ಅಂತಾನೆ ಮೋನಾಳ್ವ. ಸ್ವ-ಜಾತಿ ಬಂಟರ ಎರಡು ತಂಡದಲ್ಲಿ ಒಂದು ಗ್ಯಾಂಗ್‌ಗೆ ಈತನೇ ನಾಯಕಾಗ್ರೇಸ.


ಎದುರಾಳಿ ದಂಧೆದಾರರು ಕತ್ತಿ ಮಸೆಯುತ್ತಿದ್ದಾರೆ. ಕಾವ್ಯಳ ಕೇಸು ಬಳಸಿಕೊಂಡು ಹೆಸರು ಕೆಡಿಸುತ್ತಿದ್ದಾರೆ ಅಂತಾನೆ ಮೋನಾಳ್ವ. ನಾನು ಬಂಟ, ಸತ್ತು ಹೋದ ಹುಡುಗಿ ಬಿಲ್ಲವರವಳು. ಹೀಗಾಗಿ ಬಂಟ v/s ಬಿಲ್ಲವ ಜಾತಿ ವೈಷಮ್ಯ ತನ್ನ ಕಾಡುತ್ತಿದೆ ಎಂಬ ಸಬೂಬು ಮೋನಾಳ್ವನದು. ಮಂಗಳೂರಿನ ಎಮ್ಮೆಲ್ಲೆ ಲೋಬೋ, ಸೇಂಟ್ ಅಲೋಸಿಯಸ್ ಕಾಲೇಜಿನ ಕ್ರಿಶ್ಚಿಯನ್ನರಿಗೆ ತನ್ನ ಹಣಿಯಲು ಕಾವ್ಯಳ ಸಾವಿನ ಪ್ರಕರಣ ಸಿಕ್ಕಿದೆ ಎಂಬ ಹಸಿ-ಹಸೀ ಸುಳ್ಳು ಹೇಳುತ್ತಾನೆ ಮೋನಾಳ್ವ. ಪ್ರತಿಭಾನ್ವಿತ ವಿದ್ಯಾರ್ಥಿಗಳು-ಕ್ರೀಡಾಪಟುಗಳು ಆಳ್ವಾಸ್‌ಗೆ ಸಾಲುಗಟ್ಟಿ ನಿಂತು ಪ್ರವೇಶ ಪಡೆಯುವುದರಿಂದ ಉಳಿದ ಶಿಕ್ಷಣ ಸಂಸ್ಥೆಗಳಿಗೆ ಹೊಟ್ಟೆಕಿಚ್ಚು, ಈ ಅಸೂಯೆಯ ಬೆಂಕಿಯ ಬಲೆಯಲ್ಲಿ ತಾನು ಬಿದ್ದಿದ್ದೇನೆಂಬ ಕತೆ ಕಟ್ಟಿ ಬಿಟ್ಟಿದ್ದಾನೆ ಮೋನಾಳ್ವ.

ಆದರೆ ವಾಸ್ತವವೇ ಬೇರೆ. ಮೋನಾಳ್ವನ ಮನೋಗತ ಎಲ್ಲರಿಗೂ ಅರ್ಥವಾಗಿದೆ. ದುರಾಸೆಯ ಶಿಕ್ಷಣೋದ್ಯಮಕ್ಕೆ ಸ್ವಯಂ ಕಡಿವಾಣ ಹಾಕಿಕೊಂಡರೆ ಅಪಾಯದಿಂದ ಪಾರಾಗಬಹುದು; ಅಮಾಯಕ ಆಹುತಿ ಆಳ್ವಾಸ್ ಅಂಗಳದಲ್ಲಿ ಆಗುವುದೂ ತಪ್ಪಬಹುದು. ■

ರೋಣ: ಕುರುಬರ ಝೇಂಕಾರದ 'ಟಿಕೆಟ್ ಪೊಲಿಟಿಕ್


ರವಿ ದಂಡಿನ್


ಬಿ.ಎಫ್. ದಂಡಿನ್


ನಿಂಗನಗೌಡ ಪಾಟೀಲ



ಜನಸಂಖ್ಯೆಯಲ್ಲಿ ಹೆಚ್ಚೂಕಮ್ಮಿ ಲಿಂಗಾಯತರು, ಒಕ್ಕಲಿಗರ ನಂತರ ಮೂರನೇ ಸ್ಥಾನದಲ್ಲಿರುವ, ಮುಖ್ಯಮಂತ್ರಿಯನ್ನೂ ಒಳಗೊಂಡಂತೆ ಪ್ರಭಾವಿ ಪೊಲಿಟಿಕಲ್ ಮತ್ತು ಬ್ಯೂರೊಕ್ರೆಟ್ ಲೀಡರುಗಳನ್ನು ಹೊಂದಿರುವ ಕುರುಬ ಸಮುದಾಯವನ್ನು ಎಸ್ಟಿ ಪಂಗಡಕ್ಕೆ ಸೇರಿಸಬೇಕೆನ್ನುವ ಕೂಗು ಇತ್ತೀಚೆಗೆ ಚಲಾವಣೆಗೆ ಬರುತ್ತಿದೆ. ಜುಲೈ 29ರಂದು ಬಾಗಲಕೋಟೆಯಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ಕೊನೆಗದು ಹಿಂಸಾರೂಪಕ್ಕೆ ತಿರುಗಿ, ಮುಂದಾಳತ್ವ ವಹಿಸಿದ್ದ ಮನಸೂರು ಮಠದ ಬಸವರಾಜ ದೇವರುಗಳು ಅರೆಸ್ಟಾದದ್ದೂ ಆಯ್ತು. ಅದಾದನಂತರದ ದಿನವೇ, ಅಂದರೆ ಜುಲೈ 30ರಂದು ಅಂತದ್ದೇ ಒಂದು ಹೋರಾಟ ರೋಣದಲ್ಲಿ ನಡೆಯಿತು. ಕುರುಬ ಜಾತಿಯನ್ನು ಎಸ್ಟಿ ಪಂಗಡಕ್ಕೆ ಸೇರಿಸಬೇಕು ಎಂಬ ಅಜೆಂಡಾ ಆ ಹೋರಾಟಕ್ಕೆ ಇತ್ತಾದರು ಅದರ ಮುಂದಾಳತ್ವ ವಹಿಸಿದ್ದ ಲೀಡರುಗಳ ತಲೆಯಲ್ಲಿ ನಡೆಯುತ್ತಿದ್ದುದೆಲ್ಲ ಮುಂಬರುವ ಎಲೆಕ್ಷನ್‌ನಲ್ಲಿ ಆಯಾ ಪಕ್ಷಗಳ ಟಿಕೆಟ್ ಗಿಟ್ಟಿಸಿಕೊಳ್ಳಬೇಕೆನ್ನುವ ಲೆಕ್ಕಾಚಾರ.

ರೋಣ ಹೇಳಿಕೇಳಿ ಲಿಂಗಾಯತರ ಡಾಮಿನೆನ್ಸ್ ಇರುವ ಕ್ಷೇತ್ರ. ಅಂದಾನಪ್ಪ ದೊಡ್ಡಮೇಟಿ, ಅವರ ಮಗ ಜ್ಞಾನದೇವ ದೊಡ್ಡಮೇಟಿ, ಈರಣ್ಣ ಮತ್ತಿಕಟ್ಟಿ, ಕಳಕಪ್ಪ ಬಂಡಿ, ಶ್ರೀಶೈಲಪ್ಪ ಬಿದರೂರ, ನೀಲಗಂಗಯ್ಯ ಜಂಗಮ ಹೀಗೆ ಇಲ್ಲಿಂದ ಶಾಸಕರಾಗಿ ಆಯ್ಕೆಯಾದವರೆಲ್ಲ ಲಿಂಗಾಯತ ಧರ್ಮಕ್ಕೆ ಸೇರಿದವರೆ. ತಾಲ್ಲೂಕಿನಲ್ಲಿ ಅಜಮಾಸು ನಲವತ್ತು ಸಾವಿರದಷ್ಟು ಮತಗಳು ಇದ್ದಾಗ್ಯೂ ಕುರುಬ ಸಮುದಾಯದ ಯಾವೊಬ್ಬ ನಾಯಕನೂ ಶಾಸಕನಾಗಿ ಆಯ್ಕೆಯಾಗಲು ಸಾಧ್ಯವಾಗಿಲ್ಲ. ಈ ಕೊರಗು ಕುರುಬ ಸಮುದಾಯಕ್ಕೆ ಇದ್ದೇಇದೆ. ಆದರೆ ಈ ಸಲ ಶತಾಯಗತಾಯ ತಾವು ಶಾಸಕರಾಗಬೇಕೆನ್ನುವ ಹಂಬಲ ರೋಣದ ಕುರುಬ ಲೀಡರುಗಳಲ್ಲಿ ಶುರುವಾಗಿದೆ. ಆದರೆ ಅದಕ್ಕೂ ಮೊದಲು ಪಕ್ಷಗಳ ಟಿಕೆಟ್ ಗಿಟ್ಟಿಸಿಕೊಳ್ಳಬೇಕಲ್ಲ, ಅದಕ್ಕಾಗಿ ರೂಪುಗೊಂಡದ್ದೇ ಎಸ್ಟಿ ಮೀಸಲು ಹೋರಾಟದ ರ‍್ಯಾಲಿ. ಕ್ಷೇತ್ರದ ಕುರುಬ ಸಮುದಾಯದ ಶಕ್ತಿ ಪ್ರದರ್ಶನ ತೋರಿಸಿ, ಆಯಾ ಪಕ್ಷಗಳ ಗಮನ ಸೆಳೆಯಲು ಆಯೋಜಿಸಿದ್ದ ರ‍್ಯಾಲಿಗೆ ತಾಲೂಕಿನ ಮೂಲೆಮೂಲೆಯಿಂದ ಕುಲಬಾಂಧವರು ಹರಿದುಬಂದಿದ್ದರು. ಬೇರೆಬೇರೆ ಪಾರ್ಟಿಗಳಲ್ಲಿ ಗುರುತಿಸಿಕೊಂಡಿರುವ ಕುರುಬ ಸಮಾಜದ ರವಿ ದಂಡಿನ, ಎಚ್.ಎಸ್ ಸೊಂಪುರ, ನಿಂಗನಗೌಡ ಪಾಟೀಲ ಮೊದಲಾದವರು ಆ ರ‍್ಯಾಲಿಯ ಮುಂದಾಳತ್ವ ವಹಿಸಿದ್ದರು. ಈ ಹೋರಾಟ ಮೀಸಲಾತಿಗಾಗಿ ಎಂಬುದು ಒಂದಂಶವಾಗಿದ್ದರೂ, ಮುಖ್ಯವಾಗಿ ನಾವು ಒಟ್ಟಾಗೋಣ, ನಮ್ಮ ಜೊತೆ ಇನ್ನಿತರ ಅಹಿಂದ ಸಣ್ಣಪುಟ್ಟ ಜಾತಿಗಳ ಒಗ್ಗೂಡಿಸಿ ಆ ಮೂಲಕ ಶಾಸಕರಾಗೋಣ ಎಂದು ಮುಖಂಡರು ಗುಡುಗೇಬಿಟ್ಟರು.

ಹಾಗಂತ ಇಲ್ಲಿಯವರೆಗೆ ರೋಣದಲ್ಲಿ ಶಾಸಕರಾಗಲು ಯಾವೊಬ್ಬ ಕುರುಬ ನಾಯಕರೂ ಪ್ರಯತ್ನಿಸಿಲ್ಲ ಎಂದಲ್ಲ, ಹಲವರು ಪ್ರಯತ್ನಿಸಿದ್ದಾರೆ ಆದರೆ ಯಶಸ್ವಿಯಾಗಿಲ್ಲ. ಹಾಲಿ ಚಲಾವಣೆಯಲ್ಲಿರುವ ಕಾಂಗ್ರೆಸ್‌ನ ರವಿ ದಂಡಿನವರ್ ಕೂಡಾ ಹಿಂದೊಮ್ಮೆ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದ. ಈತನ ತಂದೆ ಬಿ.ಎಫ್.ದಂಡಿನವರ್ ಕೂಡಾ ಜನತಾ ಪರಿವಾರದ ಮೂಲಕ ಹಲವು ಕಡೆ ಪ್ರಯತ್ನಿಸಿ ಸೋತಿದ್ದುಂಟು. ಗದಗ, ಬೆಳಗಾವಿ ಭಾಗದಲ್ಲಿ ಕನಕದಾಸ ಶಿಕ್ಷಣ ಸಂಸ್ಥೆ ಸ್ಥಾಪಿಸಿ 53ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ ಬಿ.ಎಫ್.ದಂಡಿನವರ್ 1978ರಲ್ಲಿ ಮುಂಡರಗಿಯಲ್ಲಿ ಕಾಂಗ್ರೆಸ್‌ನ ಕೆ.ಎಚ್.ಕುರಡಗಿ ವಿರುದ್ಧ ಜನತಾ ಪಕ್ಷದ ಅಭ್ಯರ್ಥಿಯಾಗಿ ಕೇವಲ 300 ಮತಗಳಿಂದ ಸೋತಿದ್ದರು. 1994ರಲ್ಲಿ ಗದಗದಿಂದ ಸ್ಪರ್ಧಿಸಿ ಹುಲಕೋಟಿಯ ಡಿ.ಆರ್.ಪಾಟೀಲರ ವಿರುದ್ಧ ಸೋಲುಂಡರು. 2004ರಲ್ಲಿ ವಾಪಾಸ್ ಮುಂಡರಗಿಯಿಂದ ಜೆಡಿಎಸ್ ಪರವಾಗಿ ಕಣಕ್ಕಿಳಿದ ಅವರಿಗೆ ಮತ್ತೆ ಸಿಕ್ಕಿದ್ದು ಸೋಲು. ಆ ಸಲ ಕಾಂಗ್ರೆಸ್‌ನ ಎಸ್.ಎಸ್.ಪಾಟೀಲ ವಿರುದ್ಧ ಸೋಲುಂಡರು. ಆದರೆ ತನ್ನ ಧರ್ಮಪತ್ನಿ ಶಕುಂತಲಾ ಬಾಯಿಯವರನ್ನು 1996ರಲ್ಲೇ ಗದಗ ಜಿಲ್ಲಾ ಪಂಚಾಯತಿ ಅಧ್ಯಕ್ಷೆಯಾಗಿಸುವಲ್ಲಿ ಯಶಸ್ವಿಯಾಗಿದ್ದ ಅವರು ತಕ್ಕಮಟ್ಟಿನ ರಾಜಕೀಯ ಪ್ರಭಾವ ಕಾಯ್ದುಕೊಳ್ಳುತ್ತಲೇ ಬಂದಿದ್ದರು.

ಅವರ ನಂತರ ಅವರ ಮಗ ರವಿ ದಂಡಿನ ಜೆಡಿಎಸ್ ಮೂಲಕ ರಾಜಕಾರಣ ಶುರು ಮಾಡಿದ. ಅಪ್ಪನ ಪೊಲಿಟಿಕಲ್ ಪ್ರಭಾವದಿಂದ ಗದಗ ಜೆಡಿಎಸ್ ಜಿಲ್ಲಾಧ್ಯಕ್ಷನಾಗಿ ಆಯ್ಕೆಯಾದ ಆತ 2008ರಲ್ಲಿ ರೋಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದನಾದರೂ 12 ಸಾವಿರ ಮತಗಳಿಸುವುದಕ್ಕಷ್ಟೇ ಸುಸ್ತು ಹೊಡೆದಿದ್ದ. ಅದೇನಾಯ್ತೊ ಏನೋ, 2013ರಲ್ಲಿ ಜೆಡಿಎಸ್‌ಗೆ ಗುಡ್‌ಬೈ ಹೇಳಿದ ಆತ ಕಾಂಗ್ರೆಸ್ ಸೇರಿಕೊಂಡು ರೋಣದಲ್ಲಿ ಜಿ.ಎಸ್.ಪಾಟೀಲನ ಗೆಲುವಿಗೆ ಬೆವರು ಹರಿಸಿದ್ದ. ಈ ಸಾರಿ ಜಿ.ಎಸ್.ಪಾಟೀಲ್‌ನ ಬದಲು ತಾನು ಟಿಕೆಟ್ ಗಿಟ್ಟಿಸಿಕೊಳ್ಳಬೇಕೆನ್ನುವ ಲೆಕ್ಕಾಚಾರದಲ್ಲಿರುವ ಆತ ಕುರುಬರ ಮೀಸಲಾತಿ ಹೋರಾಟವನ್ನು ಶಕ್ತಿ ಪ್ರದರ್ಶನದ ಅಸ್ತ್ರವಾಗಿ ಬಳಸಿಕೊಂಡಂತಿದೆ.

ಇನ್ನು ರ‍್ಯಾಲಿಯ ಮುಂದಾಳತ್ವ ವಹಿಸಿದ್ದ ಎಚ್.ಎಸ್.ಸೋಂಪುರ ಹಾಗೂ ನಿಂಗನಗೌಡ ಮಾಲೀಪಾಟೀಲ್ ಕೂಡಾ ಸಕ್ರಿಯ ರಾಜಕಾರಣದಲ್ಲಿ ಗುರುತಿಸಿಕೊಂಡಿದ್ದು ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವ ಇರಾದೆಯಲ್ಲಿ ಇರುವಂತವರು. ಇವರಿಬ್ಬರೂ ಸದ್ಯ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದು ಟಿಕೆಟ್‌ಗಾಗಿ ತಮ್ಮದೇ ಆದ ಲಾಬಿ ನಡೆಸುತ್ತಿದ್ದಾರೆ. ಎಡಪಂಥೀಯ ಹೋರಾಟಗಾರನಾಗಿ ಚಲಾವಣೆಗೆ ಬಂದು ನಂತರ ಕನ್ನಡಪರ ಹೋರಾಟಗಾರನಾಗಿ ಗಮನ ಸೆಳೆದ ಸೋಂಪುರ 2012ರಲ್ಲಿ ಗಜೇಂದ್ರಗಡಕ್ಕೆ ಕುಮಾರಸ್ವಾಮಿ-ದೇವೇಗೌಡರನ್ನು ಕರೆಸಿ 25 ಸಾವಿರ ಜನರನ್ನು ಸೇರಿಸಿ ಜೆಡಿಎಸ್ ಸೇರಿಕೊಂಡಿದ್ದರು. 2013ರಲ್ಲೇ ಸೊಂಪುರನಿಗೆ ಜೆಡಿಎಸ್ ಟಿಕೆಟ್ ಲಭಿಸಲಿದೆ ಎಂಬ ಲೆಕ್ಕಾಚಾರ ಇತ್ತಾದರು ಅದು ಹೇಮಗಿರೀಶ್ ಹಾವಿನಾಳನ ಪಾಲಾಗಿತ್ತು. ಈ ಸಲ ಶತಾಯಗತಾಯ ಟಿಕೆಟ್ ಗಿಟ್ಟಿಸಿಕೊಳ್ಳಬೇಕೆಂಬ ಎಣಿಕೆಯಲ್ಲಿರುವ ಆತ ತಾನು ಕುರುಬ ಲೀಡರ್ ಎಂದು ಬಿಂಬಿಸಿಕೊಳ್ಳಲು ಯತ್ನಿಸುತ್ತಿರುವಂತಿದೆ. ಅದಕ್ಕೆ ಈ ರ‍್ಯಾಲಿಯನ್ನು ವೇದಿಕೆಯಾಗಿ ಬಳಸಿಕೊಂಡಿದ್ದಾರೆ. ಅಂದಹಾಗೆ, ಈ ರ‍್ಯಾಲಿಗೂ ಬಹಳ ದಿನ ಮೊದಲೇ ತನ್ನ ಹುಟ್ಟುಹಬ್ಬದ ನೆಪದಲ್ಲಿ ಜೆಡಿಎಸ್‌ನ ಕುರುಬ ನಾಯಕ ಮಾಜಿ ಸಚಿವ ಬಂಡೆಪ್ಪ ಕಾಶ[illegible] ರೋಣಕ್ಕೆ ಕರೆಸಿ ಅದ್ದೂರಿ ಕಾ[illegible] ಆಯೋಜಿಸಿಕೊಂಡದ್ದು ಕೂಡಾ ಇದಕ್ಕೆ [illegible] ನೀಡುವಂತಿತ್ತು.

ಇನ್ನು 2005ರಿಂದಲೂ ಜೆಡಿಎಸ್ ಸಂಘ[illegible] ಗುರುತಿಸಿಕೊಂಡ ನಿಂಗನಗೌಡ ಮಾಲಿಪಾಟೀಲ[illegible] ಟಿಕೆಟ್‌ಗೆ ನಿರಂತರವಾಗಿ ಯತ್ನಿಸುತ್ತಲೇ ಬ[illegible] 2008ರಲ್ಲಿ ಪ್ರಯತ್ನಪಟ್ಟಾಗ ಟಿಕೆಟ್ ರವಿ [illegible] ಪಾಲಾಗಿತ್ತು. 2013ರಲ್ಲಿ ಅದು ಹೇಮಗಿರೀಶ ಹಾ[illegible] ಹಣಕ್ಕೆ ಬಿಕರಿಗೊಂಡಿತ್ತು. ಹಾಗಾಗಿ ಈ ಸ[illegible] ಟಿಕೆಟ್ ಗಿಟ್ಟಿಸುವ ನಿರೀಕ್ಷೆಯಲ್ಲಿರುವ ಅವರು [illegible] ಸಮಾಜದ ಒಗ್ಗೂಡಿಕೆಯಲ್ಲಿ ಕೈಜೋಡಿಸಿದ್ದಾರೆ.

ಅಂದಹಾಗೆ, ಎಚ್.ಎಸ್. ಸೋಂಪುರ[illegible] ನಿಂಗನಗೌಡ ಪಾಟೀಲ್ ಇಬ್ಬರಿಗೂ ಜೆಡಿ[illegible] ಅಡ್ಡವಾಗಿರೋದು ಜೆಡಿಎಸ್ ಯುವ ಘಟಕದ [illegible] ಡಾ. ಮಂಜುನಾಥ ವಿಶ್ವಬ್ರಾಹ್ಮಣ. 199[illegible] ಇಲ್ಲಿಯವರೆಗೆ ಜೆಡಿಎಸ್‌ಗಾಗಿ ದುಡಿಯುತ್ತಲೇ ಬ[illegible] ಜ್ಞಾನದೇವ ದೊಡ್ಡ ಮೇಟಿ ಮತ್ತು ಶ್ರೀ[illegible] ಬಿದರೂರರನ್ನು ಶಾಸಕರನ್ನಾಗಿಸಲು ವಿಶ್ವಬ್ರಾಹ್ಮ[illegible] ಹಾಕಿದ್ದರು. 2004ರ ಚುನಾವಣೆಯಲ್ಲಿ ಶ್ರೀ[illegible] ಬಿದರೂರನ್ನು ಜೆಡಿಎಸ್ ತನ್ನ ಅಭ್ಯರ್ಥಿಯಾಗಿ ಘೋ[illegible] ಆದರೆ ಬಿದರೂರ ಜೆಡಿಎಸ್‌ಗೆ ಗುಡ್‌ಬೈ ಹೇ[illegible] ಮನೆ ಹೊಕ್ಕಿದ್ದ. ಅಂತಹ ಕಷ್ಟಕರ ಸಂದ[illegible] ಮಂಜುನಾಥ್ ಜೆಡಿಎಸ್ ಅಭ್ಯರ್ಥಿಯಾಗಿ [illegible] ಸೋತಿದ್ದರು. ಆ ಸೋಲು ಅವರನ್ನು ಆರ[illegible] ದಿವಾಳಿಯಾಗಿಸಿ ಮನೆ, ಆಸ್ತಿ ಕಳೆದುಕೊಳ್ಳುವಂತೆ [illegible] ನಂತರ 2008ರಲ್ಲಿ ಮತ್ತೊಮ್ಮೆ ಜೆಡಿಎಸ್ ಟಿ[illegible] ಮಂಜುನಾಥ್ ಅರ್ಜಿ ಸಲ್ಲಿಸಿದರೂ ಟಿಕೆಟ್ ವ[illegible] ದಂಡಿನವರ ಪಾಲಾಗಿತ್ತು. 2013ರಲ್ಲು ಸಹ [illegible] ಹೇಮಗಿರಿಯ ಪಾಲಾಗಿ ಮಂಜುನಾಥ್‌ಗೆ [illegible] ದಿಗ್ಗಜರಿಂದ ನಿರಾಸೆಯೇ ಸಿಕ್ಕಿತ್ತು. ಆ ಎರಡ[illegible] ಜೆಡಿಎಸ್ ಸೋತಿತ್ತು ಇಷ್ಟಾದರು ಮಂಜುನಾಥರ[illegible] ನಿಷ್ಠೆ ಬದಲಾಗಿಲ್ಲ. ಆ ಕಾರಣಕ್ಕೇ ಕುಮಾರಸ್ವಾಮಿ[illegible] ಮಂಜುನಾಥ್‌ರನ್ನು ಜೆಡಿಎಸ್ ಬಾಂಬೆ-ಕರ್ನಾಟಕ[illegible] ಕಮಿಟಿ ಸದಸ್ಯನನ್ನಾಗಿ ನೇಮಿಸಿದ್ದಾರೆ. ಎಚ್.ಡಿ.ದೇ[illegible] ಮಾನಸಪುತ್ರನೆಂದೇ ಗುರುತಿಸಲಾಗುವ ಮಂ[illegible] ಕುಮಾರಸ್ವಾಮಿಯ ಆಪ್ತ ಒಡ್ಡೋಲಗದಲ್ಲೂ ಮಿಂ[illegible] ಅವರಿಗೇ ಈ ಸಲ ಜೆಡಿಸ್ ಟಿಕೆಟ್ ಬಹು[illegible] ಎನ್ನಲಾಗುತ್ತಿದ್ದು, ಆತನನ್ನು ಓವರ್‌ಟೇಕ್ ಮಾಡಿ[illegible] ಗಿಟ್ಟಿಸಬೇಕೆಂದರೆ ಸೋಂಪುರ ಮತ್ತು ನಿಂಗನ[illegible] ಇಂತಹ ಜಾತಿ ಶಕ್ತಿ ಪ್ರದರ್ಶನ ಅನಿವಾರ್ಯ [illegible]

ಅದೇನೇ ಇರಲಿ, ರೋಣದಲ್ಲಿ [illegible] ಸಂಖ್ಯಾಬಲವಿದ್ದರೂ ಇದುವರೆಗೆ ಪಂಚಾಯತಿ[illegible] ಅಧಿಕಾರಕ್ಕೆ ಮಾತ್ರವೇ ತೃಪ್ತಿ ಪಟ್ಟುಕೊಳ್ಳುತ್ತಿದ್ದ[illegible] ಸಮಾಜದ ನಾಯಕರುಗಳಲ್ಲಿ ಇದೀಗ ಶಾಸ[illegible] ಹಂಬಲ ಶುರುವಾದಂತಿದೆ. ಇದು ಕ್ಷೇತ್ರದ ರಾ[illegible] ಚಿತ್ರಣವನ್ನೇ ಬದಲಿಸುವ ಸಾಧ್ಯತೆಯನ್ನು ತಳ್ಳಿಹಾ[illegible]

■ ಸ. ಶರಣಪ್ಪ ಪಾ[illegible]

ಆಳ್ವಾಸ್ ಬಿಗ್‌ಬಜಾರಲ್ಲಿ...

9 ◀◀

ಬರುವಂತೆಯೇ ಇದೆ. ಈ ಪ್ರವೀಣ ಸರ್ಕಾರಿ ನೌಕರ. ಹಳೆಯಂಗಡಿ ಶಿಕ್ಷಣ ಸಂಸ್ಥೆಯಲ್ಲಿ ಫಿಸಿಕಲ್ ಡೈರೆಕ್ಟರ್ (ಪಿಡಿ) ಆಗಿದ್ದಾನೆ. ಆದರವನ ಹೊಕ್ಕಳು ಬಳ್ಳಿ ಸಂಬಂಧ ಆಳ್ವಾಸಲ್ಲಿದೆ. ಪ್ರವೀಣ್ ವಿದ್ಯಾರ್ಥಿಯಾಗಿದ್ದಾಗಲೇ ಕ್ರೀಡಾಪಟುವಾಗಿ ಹೆಸರು ಮಾಡಿದ್ದನಂತೆ. ಅದನ್ನು ಮೆಚ್ಚಿ ಮೋನಾಳ್ವ ಆತನಿಗೆ ಸ್ಟೈಫೆಂಡ್ ಕೊಡುತ್ತಿದ್ದನಂತೆ. ಶಿಕ್ಷಣ ಮುಗಿದ ನಂತರ ಆರೇಳು ವರ್ಷ ಆಳ್ವಾಸ್‌ನಲ್ಲಿ ತರಬೇತುದಾರನಾಗಿದ್ದನಂತೆ. ಈತನ ಹೆಂಡತಿ ಈಗಲೂ ಅಲ್ಲೇ ಉಪನ್ಯಾಸಕಿ ಆಗಿದ್ದಾಳೆ.

ಸರ್ಕಾರಿ ನೌಕರಿ ಸಿಕ್ಕಿದ್ದರಿಂದ ಪ್ರವೀಣ್ ಆಳ್ವಾಸ್ ಬಿಟ್ಟರೂ ಮೋನಾಳ್ವನ ಹೆಂಡತಿಯಿಂದ ವಿಚ್ಛೇದನ ಗೊಂಡಿರುವ ಮಗ ಮಹಾರಾಯ ವಿವೇಕ್ ಆಳ್ವನ ಗೆಳೆತನ ತುಂಬ ಅನ್ಯೋನ್ಯವಾಗೇ ಮುಂದುವರಿಸಿದ್ದಾನೆ. ಮೋನಾಳ್ವನ ಹೆಂಡತಿ ಸಣ್ಣ ಪ್ರಾಯದಲ್ಲೇ- ಅಂದರೆ ಆತ ಡಬ್ಬಾ ಡಾಕ್ಟರ್ ಆಗಿದ್ದಾಗಲೇ- ಆತ್ಮಹತ್ಯೆ ಮಾಡಿಕೊಂಡಿದ್ದರು. ಇಂಥ ವಿಧುರ ಗುರುವಿನ ಸಖ್ಯ ಪ್ರವೀಣ ಪೂಜಾರಿಗಿದೆ. ಮೋನಾಳ್ವ ಈ ಪ್ರವೀಣ್‌ನನ್ನು ನಂಬಿಗಸ್ಥ ಬಂಟನೆಂದೇ ಕಂಡಕಂಡಲ್ಲಿ ಪರಿಚಯಿಸುತ್ತಾರೆ. ಹೀಗಾಗಿ ಸದ್ರಿ ಸರ್ಕಾರಿ ನೌಕರ ಇವತ್ತಿಗೂ ದಿನಕ್ಕೆರಡು ಬಾರಿ ಬಿಟ್ಟಿಯಾಗಿ ಆಳ್ವಾಸ್‌ನಲ್ಲಿ ಕೋಚ್ ಕೈಂಕರ್ಯ ತುಂಬ ಭಕ್ತಿಯಿಂದ ಮಾಡುತ್ತಿದ್ದಾನೆ. ಈತನ ಆಸಕ್ತಿಯಿಂದಲೇ ಕಾವ್ಯಳನ್ನು ಆಳ್ವಾಸ್‌ಗೆ ಕರೆತರಲಾಗಿತ್ತು. ಸರ್ಕಾರಿ ನೌಕರನಾಗಿದ್ದೂ ಖಾಸಗಿ ಆಳ್ವಾಸ್ ಪ್ರಸಿದ್ಧಿಗೆ ತ್ರಿಕರಣಪೂರ್ವಕ ಬೆವರಿಸುತ್ತಿರುವ ಪ್ರವೀಣ್ ಹೊರನೋಟಕ್ಕೆ, ಅಂಥ ದುಷ್ಟನೇನೂ ಅಲ್ಲ, ಆದರೆ ಸುಣ್ಣಗಿರುವವರ ಬಣ್ಣವೇ ಬೇರೆ ಅಂತಾರೆ ಕಂಡವರು.

ಪ್ರವೀಣ್ ಪೂಜಾರಿಯೇ ಕಾವ್ಯಳ ಹೆತ್ತವರಿಗೆ ಮಗಳ ಸಾವಿನ ಸಮಾಚಾರ ತಿಳಿಸಿದವನು. ಹಾಗಂತ ಆತ ಪಾಲಕರು ಬರುವವರೆಗೆ ಕಾಯುವ ಮನುಷ್ಯತ್ವವನ್ನೂ ತೋರಿಸಲಿಲ್ಲ. ಮರಣೋತ್ತರ ಪರೀಕ್ಷೆ ಮುಗಿಸಿ ಶವಾಗಾರಕ್ಕೆ ಸಾಗಿಸುವತನಕ ಎಲ್ಲ ನಿಭಾಯಿಸಿ ಗುರುವಿನ ಸಂರಕ್ಷಣೆಗೆ ಈತ ಹವಣಿಸಿದ್ದಾನೆ. ಹಾಗಂತ ಕರುಳ ಕುಡಿ ಕಳಕೊಂಡ ಕಾವ್ಯಳ ಹೆತ್ತವರ ಬಗ್ಗೆ ಈತ ಯಾವ ಕಾಳಜಿಯೂ ತೋರಿಸಲಿಲ್ಲ. ಇದು ಸಹಜವಾಗೇ ಕಾವ್ಯಳ ತಾಯಿಯನ್ನು ಕೆರಳಿಸಿದೆ. "......... ಆ ಪ್ರವೀಣ್ ಪೂಜಾರಿಗೆ ಚಪ್ಪಲಿಯಿಂದ ಹೊಡೀತೇನೆ...." ಎಂದಾಕೆ ಪತ್ರಿಕಾಗೋಷ್ಠಿಯಲ್ಲೇ ಹೇಳಿದ್ದಾರೆ. ಅಂಥ ಅತೀವ ನೋವಿನಲ್ಲೂ ಕಾವ್ಯಳ ತಾಯಿ ಉಗ್ರಳಾಗಿದ್ದಾರೆಂದರೆ ಪ್ರವೀಣ್‌ನಿಂದ ಆ ಕುಟುಂಬಕ್ಕೆ ಏನೋ ಅನ್ಯಾಯವಾಗಿದೆ ಎಂದೇ ಅರ್ಥ ಅಥವಾ ಕಾವ್ಯಳಿಗೆ ಈ ತರಬೇತುದಾರನಿಂದ ಮೋಸವಾದ ವಾಸನೆ ತಾಯಿಗೆ ಬಡಿದಿದೆ ಎಂಬ ಅಭಿಪ್ರಾಯ ಈಗ ಮೂಡಿದೆ. ಎಲ್ಲಕ್ಕಿಂತ ಹೆಚ್ಚಾಗಿ ಹೆಂಡತಿಯಿಲ್ಲದೆ ಒಂಟಿಯಾಗಿರುವ ಮೋನಾಳ್ವನ ಕುಮಾರ ಕಂಠೀರವ ವಿವೇಕ ಆಳ್ವನ ಜತೆಗಿನ ಪ್ರವೀಣ್ ನಂಟು ಅನೇಕ ಅನುಮಾನಕ್ಕೆಡೆ ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲೂ ಪ್ರವೀಣ್, ವಿವೇಕ್, ಮೋನಾಳ್ವರ ಬಗ್ಗೆ ಆಕ್ಷೇಪ-ಆರೋಪ ಹರಿದಾಡಿದೆ.

ಕಟುಕರ ಆಟ

ಆಳ್ವಾಸ್‌ನಲ್ಲಿ ಸಾಯುವ ಜೀವಕ್ಕೆ ಬೆಲೆಯೇ ಇಲ್ಲ. ಸತ್ತ ವಿದ್ಯಾರ್ಥಿಗಳ ಬಗ್ಗೆ ಮೋನಾಳ್ವ ಕಂಪನಿಗೆ ಯಾವ ಕನಿಕರ-ಗೌರವವಿಲ್ಲ. ವಿದ್ಯಾರ್ಥಿಗಳು ಸತ್ತಾಗ ಪಾಲಕರ ಕರೆಸಿ ತುಂಬ ಗೌಪ್ಯವಾಗಿ ಹಣ ಕೊಟ್ಟು ಕಳಿಸಲಾಗುತ್ತದೆ. ಸೂತಕದಿಂದ ಶುದ್ಧವಾಗಲು ಮೋನಾಳ್ವ ಗುಟ್ಟಾಗಿ ಹೋಮ-ಹವನ-ಶನಿ ಜಪ ಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನೆ. ಆದರಿದು ಹೊರಜಗತ್ತಿಗೆ ಗೊತ್ತಾಗೋದೇ ಇಲ್ಲ. ತನ್ನ ಸಂಸ್ಥೆಯ ವಿದ್ಯಾರ್ಥಿಗಳು ಆಟದಲ್ಲಿ ಗೆದ್ದಾಗ, ಪಾಠದಲ್ಲಿ ರ‍್ಯಾಂಕ್ ಹೊಡೆದಾಗ ವಿಜೃಂಭಣೆಯಿಂದ ಸಡಗರ ಆಚರಿಸುವ ಈ ಪ್ರಭೃತಿ ಅದೇ ಸಂಸ್ಥೆಯ ಹುಡುಗ-ಹುಡುಗಿ ಸತ್ತಾಗ ಸಣ್ಣ ಸಂತಾಪ-ಪ್ರಾರ್ಥನೆಯೂ ಮಾಡೋದಿಲ್ಲ, ಒಂದು ರಜೆ ಕೂಡ ಘೋಷಿಸುವುದಿಲ್ಲ. ಅಷ್ಟು ವ್ಯಾವಹಾರಿಕವಾದ ಕಠೋರ ಲೆಕ್ಕಾಚಾರ ಮೋನಾಳ್ವನದು. ಹೀಗೆ ಸತ್ತ ಸುದ್ದಿ ತಾನೇ ಹೊರಹಾಕಿಕೊಂಡರೆ ಶಿಕ್ಷಣ ಅಂಗಡಿಗೆ ಗಿರಾಕಿಗಳು ಬರಲು ಹಿಂಜರಿಯುತ್ತಾರಲ್ಲವೇ? ಈ ದೂ(ದು)ರಾಲೋಚನೆಯಿಂದ ಆತ ಕಟುಕನಂತೆ ಆಟ ಆಡುತ್ತ ಬಂದಿದ್ದಾನೆ. ಇದು ಆತನ ಸಂಸ್ಥೆಯ ಕಂಬ-ಕಂಬವೂ ಹೇಳುವ ಮೌನ ಪುರಾಣ!!

ಮೊನ್ನೆ ಪ್ರತಿಭಾವಂತ ಕ್ರೀಡಾಪಟುವಾದ ಕಾವ್ಯ ಸತ್ತಾಗಲೂ ಮೋನಾಳ್ವನ ಕಣ್ಣಿಂದ ಒಂದು ಹನಿ ಜಾರಲಿಲ್ಲ; ಕಲ್ಲು ಹೃದಯ ಕರಗಲಿಲ್ಲ. ಯಾವಾಗ ಇಡೀ ಕರಾವಳಿ ಕೆಂಡವಾಯ್ತೋ ಆಗ ಸಿಬಿಐ, ಸಿಓಡಿ, ಮಂಪರುಪರೀಕ್ಷೆಗೆ ಸಿದ್ಧನೆಂದೂ, ತಾನು ನಿರಪರಾಧಿಯೆಂದೂ, ತನ್ನ ಶಿಷ್ಯ ಪ್ರವೀಣ ಸಂಭಾವಿತನೆಂದೂ ಗೋಗರೆದಿದ್ದಾನೆ. ಆತನಿಗೆ ಗೊತ್ತು, ಎಂಥ ತನಿಖೆಯನ್ನಾದರೂ ತನ್ನ ಹಣ-ಪ್ರಭಾವದಿಂದ ನಿಕಾಲಿ ಮಾಡಿಸಬಹುದೆಂದು. ಧರ್ಮಸ್ಥಳದ ದೇವರ ಆಸ್ಥಾನದಲ್ಲಿ, ಮಣಿಪಾಲ್ ರಿಪಬ್ಲಿಕ್‌ನಲ್ಲಿ, ಎಕ್ಸ್‌ಪರ್ಟ್‌ನ ಕೂಪದಲ್ಲಿ ಆಗುವ ಸಾವು-ನೋವಿಗೆ ನ್ಯಾಯ ಸಿಕ್ಕಿದ್ದು ಇದೆಯಾ? ಅದೇ ಪ್ರಭೇದಕ್ಕೆ ಸೇರಿದ ಶಿಕ್ಷಣ ಉದ್ಯಮಿ ತಾನೆ ಮೋನಾಳ್ವಜೀ!!


ಸಾವಿರ-ಸಾವಿರ ಶಿಕ್ಷಣಾರ್ಥಿಗಳು ಇರುವ ಆಳ್ವಾಸ್‌ನಲ್ಲಿ ವಿಚಿತ್ರ ಒತ್ತಡ, ಕಠೋರತೆಯಿದೆ. ಮಾರ್ಕ್ ತೆಗೆಯುವ, ಪ್ರತಿಷ್ಠಿತ-ಕೈತುಂಬ ಕಾಂಚಾಣದ ನೌಕರಿ ಪಡೆವ, ಮೆಡಲ್ ಹೊಡೆವ ಒತ್ತಡ ಮಕ್ಕಳಲ್ಲಿ ಮೂಡಿಸಲು [illegible] ವಾರ್ಡನ್‌ಗಳು, ಸಿಬ್ಬಂದಿ ಶಿಸ್ತಿನ ಹೆಸರಲ್ಲಿ [illegible] ತೋರಿಸುತ್ತಾರೆ; ಭಯೋತ್ಪಾದನೆ ನಡೆಸುತ್ತಾರೆ. [illegible] ಬಂದಾಗಲೂ ಸೌಜನ್ಯ ತೋರಿಸದ ಸಿಬ್ಬಂದಿಯೂ [illegible] ಕೆಲವೊಮ್ಮೆ ಪಿಯು ವಿದ್ಯಾರ್ಥಿಗಳಿಗೆ ಪೆಟ್ಟುಕೊ[illegible] ಹೇಳೋದು ಇದೆ ಎಂಬ ಪುಕಾರುಗಳಿವೆ.

ಮಾನಸಿಕ ಕ್ಷೋಭೆಗೆ ವಿದ್ಯಾರ್ಥಿಗಳು [illegible] ಒದ್ದಾಡುವುದೂ ಇದೆ. ಡಿಪ್ರೆಷನ್ ತಡೆ[illegible] ವಿದ್ಯಾರ್ಥಿಗಳು ಸಾವಿಗೆ ಶರಣಾಗುತ್ತಾರೆ. [illegible] ನಿಭಾಯಿಸುವ ವಾತ್ಸಲ್ಯವನ್ನು ಹಣದ ಹಿಂದೆ ಬಿ[illegible] ನಿರೀಕ್ಷಿಸಲಾದೀತಾ? ಕಾಲು ಲಕ್ಷ ದಾಟಿದ [illegible] ಸಂಖ್ಯೆ ಮುಕ್ಕಾಲು ಲಕ್ಷ ಮಾಡುವ ಗಡಿಬಿಡಿ ಮೋ[illegible] ಓವರ್ ಕ್ರೌಡ್‌ನಿಂದ ಒಂಥರಾ ಅಲ್ಲೋಲ[illegible] ಆಳ್ವಾಸ್‌ನಲ್ಲಿ ಆಗುತ್ತಿದೆ. ಇದು ಮೋನಾಳ್ವನಿ[illegible] ವಾಗುತ್ತಿಲ್ಲ. ಕಷ್ಟಪಟ್ಟು ಕಟ್ಟಿದ ಸಂಸ್ಥೆಯನ್ನು ಒ[illegible] ಬಿದ್ದು ಮೋನಾಳ್ವನೇ ಕೆಡವಿಕೊಳ್ಳುತ್ತಿದ್ದಾನಾ [illegible] ತೆವಲಿನಿಂದ ಮೋನಾಳ್ವಗೆ ಸಂಸ್ಥೆ ಮೇಲಿನ [illegible] ಜಾರುತ್ತಿದೆಯಾ?

ಅಂಥದೊಂದು ಅನುಮಾನ ಆಳ್ವಾಸ್‌ನ ವಾ[illegible] ಯಾಂತ್ರಿಕ ನಡಾವಳಿ, ರೀತಿ-ರಿವಾಜು, ನೀತಿ-ನಿಯಮ [illegible] ಕಂಡವರಿಗಷ್ಟೇ ಬರಲು ಸಾಧ್ಯ?! ಇನ್ನಾದರೂ [illegible] ಎಚ್ಚೆತ್ತುಕೊಂಡು ಸಾಮ್ರಾಜ್ಯ ವಿಸ್ತರಣೆ ನಿಲ್ಲಿಸಬೇ[illegible] ಗುಣಮಟ್ಟದ ಉದ್ಯಮ ಸಾಧ್ಯ. ಎಲ್ಲೆಲ್ಲಿಂದಲೋ ಶಿಕ್ಷ[illegible] ಮೋಹಕ್ಕೆ ಒಳಗಾದಂತೆ ಬಂದು ಬಲಿ ಬೀಳೋದು [illegible] ಹೆತ್ತವರು ತಮ್ಮ ಮಕ್ಕಳ ಜೀವದ ಬಗ್ಗೂ ಯೋ[illegible] ಒಂದಂತೂ ಖರೆ ಆಳ್ವಾಸ್‌ನಲ್ಲಿ ಜೀವ ಅಗ್ಗ!!

■ ವರ[illegible]

ಚನ್ನಗಿರಿ: ಕೆರೆ ಒತ್ತುವರಿಗೆ ತಹಸೀಲ್ದಾರಮ್ಮನ ಸಾಥ್?




ನ್ನಗಿರಿ ತಹಸೀಲ್ದಾರ್ ಕುರ್ಚಿಯಲ್ಲಿ ಕೂತಿರೊ ಕುಮಾರಿಯ ಮೇಯ್ವಾಟ ಕಂಡು ಜನ ಗಿಹೋಗಿದ್ದಾರೆ. ಬಗರ್‌ಹುಕುಂ ಜಮೀನಿನಿಂದ ಮರಳುದಂಧೆಯವರೆಗೆ ಎಲ್ಲದರಲ್ಲೂ ಈಯಮ್ಮನ ಟದ್ದೇ ಜೋರು. ಸಾಮಾನ್ಯ ಖಾತಾ ವಣೆಯಂತಹ ಕೆಲಸಕ್ಕೂ ಪದ್ಮಕುಮಾರಿ ರೇಟು ಮಾಡಿದ್ದಾಳೆ. ಚನ್ನಗಿರಿ ತಾಲ್ಲೂಕಿನಲ್ಲಿ ಒಟ್ಟು 43 ಣೆಗಳಿವೆ. ಇವೆಲ್ಲವೂ ಪದ್ಮಾ ಮೇಡಂಗೆ ಕಪ್ಪ ಬೇಕು. ಈ 43ರಲ್ಲಿ 12 ಕ್ವಾರಿಗಳು ಕ್ರಶರ್ ಗಳನ್ನೂ ಹೊಂದಿವೆ. ಈ ಕ್ವಾರಿಗಳು ಕೆಲಸ ಬೇಕೆಂದರೆ ಅವಕ್ಕೆ ಲೈಸೆನ್ಸ್ ಬೇಕು. ಆ ಲೈಸೆನ್ಸ್ ಕೊಳ್ಳಬೇಕೆಂದರೆ ತಹಸೀಲ್ದಾರ್ ನೀಡುವ ಎನ್‌ಓಸಿ ಅಲ್ಲೇ ನೋಡಿ ಪದ್ಮಮ್ಮನ ಪವಾಡ ನಡೆಯೋದು. ಂದು ಎನ್‌ಓಸಿಗೂ 50 ಸಾವಿರದಿಂದ 1 ಲಕ್ಷ ಯ ಫಿಕ್ಸ್ ಮಾಡಿ ವಸೂಲಿಗೆ ನಿಂತಿದ್ದಾಳೆ. ಇನ್ನು ಹೊಂದಿರುವ 12 ಕ್ವಾರಿಗಳ ಎನ್‌ಓಸಿಗೆ 1 1.5 ಲಕ್ಷ ರೇಟು ನಿಗದಿ ಮಾಡಿದ್ದಾಳೆ ಅನ್ನೋ ತಾಲ್ಲೂಕಾಫೀಸ್ ಆವರಣದಲ್ಲಿ ಓಡಾಡುತ್ತಿದೆ.


ಮಾರಿಯ ಕರಾಮತ್ತು ಕೇವಲ ಕ್ವಾರಿಗೆ ಮಾತ್ರವೇ ವಾದುದಲ್ಲ, ಬಗರ್‌ಹುಕುಂ ರೈತರನ್ನೂ ಆಕೆ ಬಗೆದು ದ್ದಾಳೆ. ಚನ್ನಗಿರಿ ತಾಲ್ಲೂಕಿನಲ್ಲಿ ಬಡ ರೈತರಿಂದ 60 ಸಾವಿರ ಬಗರ್‌ಹುಕುಂ ಅರ್ಜಿಗಳು ಬಂದಿವೆ. ಲ್ಲಿ 13 ಸಾವಿರ ಅರ್ಜಿಗಳು ಅಧಿಕೃತವಾದವು. ಸರ್ವೆ ಪ್ರಕಾರ ಚನ್ನಗಿರಿ ತಾಲ್ಲೂಕಿನಲ್ಲಿ 700 ಎಕರೆ ಬಗರ್‌ಹುಕುಂ ಜಮೀನನ್ನು ಬಡ ರೈತರಿಗೆ ಹಂಚಬಹುದಾಗಿದೆ. ಇದು ಪದ್ಮಕುಮಾರಿಗೆ ಹಬ್ಬ. ಈಗಾಗಲೇ 700 ಎಕರೆ ಬಗರ್ ಹುಕುಂ ಸಾಗುವಳಿ ಹಕ್ಕುಪತ್ರಕ್ಕೆ ಅಧಿಕೃತವಾಗಿ 6,500 ರೈತರಿಂದ ಅರ್ಜಿಗಳು ನೋಂದಣಿಯಾಗಿವೆ. ಈ ಪ್ರತಿ ರೈತರಿಂದ 15 ರಿಂದ 30 ಸಾವಿರ ವಸೂಲಿ ನಡೆಸಿದ್ದಾಳೆ ಎಂಬ ವರ್ತಮಾನವಿದೆ. ಅರ್ಜಿದಾರ ಬಡವನಾಗಿದ್ದರೆ ಒಂಚೂರು ರಿಯಾಯಿತಿ, ತುಸು ಧನಿಕನಾಗಿದ್ದರೆ ತುಟ್ಟಿ ರೇಟು ಹೀಗೆ ಪದ್ಮಮ್ಮನ ಮಾರ್ಕೆಟು ಭರ್ಜರಿಯಾಗಿ ನಡೆಯುತ್ತಿದೆಯಂತೆ.

ಅಂದಹಾಗೆ, ಈಗಾಗಲೇ ಸಾವಿರಾರು ರೈತರಿಗೆ ಸರ್ಕಾರವೇ ಈ ಹಿಂದೆ ಅಧಿಕೃತ ಬಗರ್‌ಹುಕುಂ ಸಾಗುವಳಿ ಚೀಟಿ ನೀಡಿದೆ. ಆದರೆ ತಹಸೀಲ್ದಾರ್ ಪದ್ಮಕುಮಾರಿ ಅಂತಾ ಅಧಿಕೃತ ಸಾಗುವಳಿ ಪತ್ರಗಳಿರುವ ಬಡ ರೈತರನ್ನೂ ಕರೆಸಿ ಧಮಕಿ ಹಾಕುತ್ತಿದ್ದಾಳಂತೆ. ಅವು ಅಧಿಕೃತ ಸಾಗುವಳಿ ಚೀಟಿಗಳೇ ಅಲ್ಲ, ನೀವೇ ಸೃಷ್ಟಿಸಿಕೊಂಡಿರುವ ಬೋಗಸ್ ಸಾಗುವಳಿ ಪತ್ರಗಳು ಎಂಬ ಬ್ಲಾಕ್‌ಮೇಲ್ ತಂತ್ರ ಬಳಸಿ ಅಮಾಯಕ ರೈತರಿಂದ ಬಂದಷ್ಟು ಪೀಕಿ ಕೈತೊಳೆದುಕೊಂಡಿದ್ದಾಳೆ ಎಂಬ ಸುದ್ದಿಯೂ ಇದೆ. ಹಾಗೊಂದು ವೇಳೆ ರೈತರ ಬಳಿಯಿರುವ ಸಾಗುವಳಿ ಪತ್ರಗಳು ನಕಲಿ ಎನ್ನುವುದೇ ಆದರೆ ತಹಸೀಲ್ದಾರ್ ಪದ್ಮಕುಮಾರಿ ಯಾಕೆ ದೂರು ದಾಖಲಿಸಿಕೊಂಡು ತನಿಖೆ ಮಾಡಲಿಲ್ಲ?

ಕೆರೆ ಒತ್ತುವರಿಗೆ ಕಣ್ಮುಚ್ಚಿ ಕೂತ ತಹಸೀಲ್ದಾರ್

ಚನ್ನಗಿರಿ ಪಟ್ಟಣದಲ್ಲಿ ಪುಟ್ಟಬಸಪ್ಪನ ಕೆರೆ ಪುರಾತನವಾದದ್ದು. ಇದನ್ನು ಚಿಕ್ಕ ಹುಲಿಕೆರೆ ಎಂತಲೂ ಕರೆಯಲಾಗುತ್ತೆ. ಈ ಕೆರೆಯ ನೀರಿನ ಆಶ್ರಯದಿಂದಲೇ ಸುತ್ತಮುತ್ತಲ ಬೋರ್‌ವೆಲ್‌ಗಳು ನೀರುಣಿಸುತ್ತಿದ್ದವು. ಸರ್ವೆ ನಂಬರ್ 147ರಲ್ಲಿ ಚಾಚಿಕೊಂಡಿರುವ ಈ ಕೆರೆಯ ಅಸಲಿ ವಿಸ್ತೀರ್ಣ 11 ಎಕರೆ 30 ಗುಂಟೆ. ಆದರೆ ಇದರಲ್ಲಿ 1.39 ಗುಂಟೆ ಕೆರೆ ಜಾಗವನ್ನು ಒತ್ತುವರಿ ಮಾಡಲಾಗಿದೆ. ದಾಖಲೆಗಳ ಪ್ರಕಾರ ಒಟ್ಟು 21 ಜನ ಕೆರೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇದರಲ್ಲಿ ಬೆರಳೆಣಿಕೆಯಷ್ಟು ಬಡವರಿದ್ದರೆ ಉಳಿದವರೆಲ್ಲ ಉಳ್ಳವರೆ. ಬಡವರನ್ನು ಮುಂದಿಟ್ಟುಕೊಂಡು ಸರ್ಕಾರದ ಅನುಕಂಪದ ಮೇಲೆ ಸಕ್ರಮ ಮಾಡಿಕೊಳ್ಳುವ ಹುನ್ನಾರ ಉಳ್ಳವರದ್ದು.







2007ರಲ್ಲಿ ಚನ್ನಗಿರಿ ಪಟ್ಟಣ ಪಂಚಾಯ್ತಿಗೆ ಅಧ್ಯಕ್ಷನಾಗಿದ್ದ ಅಸ್ಲಾಂ ಬೇಗ್ ಎಂಬಾತನ ಸಾಮಿಲ್ ಹಾಗೂ ಅವನ ಶ್ರೀಮಂತ ಸಂಬಂಧಿಗಳೇ ಈ ಒತ್ತುವರಿದಾರರಲ್ಲಿ ಹೆಚ್ಚು. ಹಾಲಿ ಪಟ್ಟಣ ಪಂಚಾಯ್ತಿ ಸದಸ್ಯನೂ ಆಗಿರುವ ಈ ಕಾಂಗ್ರೆ ಲೀಡರನ್ನು ಓಟ್‌ಬ್ಯಾಂಕ್ ಕಾರಣಕ್ಕೆ ಹಾಲಿ ಶಾಸಕ ವಡ್ನಾಳ್ ರಾಜಣ್ಣನೂ ಎದುರಾಕಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ, ಹಾಗಾಗಿ ಕೆರೆ ಒತ್ತುವರಿ ಬಗ್ಗೆ ಶಾಸಕರನ್ನು ಪ್ರಶ್ನಿಸಿದರೆ 'ಹೋಗಲಿ ಬಿಡಿ ಬಡವರು' ಎಂಬ ಅನುಕಂಪದ ಮಾತಿನಲ್ಲಿ ತಮ್ಮ ಚೇಲಾನನ್ನು ರಕ್ಷಿಸಲು ಮುಂದಾಗುತ್ತಾರೆ. ಒಂದೊಮ್ಮೆ, ಅಲ್ಲಿರುವವರು ನಿಜವಾಗಲು ಬಡವರೇ ಆಗಿದ್ದು, ಒತ್ತುವರಿ ತೆರವಿನಿಂದ ಅವರೆಲ್ಲ ವಸತಿ ಕಳೆದುಕೊಂಡು ಬೀದಿಗೆ ಬರುತ್ತಾರೆ ಎನ್ನುವುದಾದಲ್ಲಿ, ಅವರಿಗೆ ಸರ್ಕಾರದ ಬೇರೆ ಜಾಗದಲ್ಲಿ ಪುನರ್‌ವಸತಿ ಕಲ್ಪಿಸುವ ಅವಕಾಶವಿದೆ. ಅದರತ್ತ ಶಾಸಕರು ಮತ್ತು ಆಡಳಿತ ವರ್ಗ ಗಮನಹರಿಸಬಹುದು. ಅದನ್ನು ಬಿಟ್ಟು ಜೀವಸೆಲೆಯಾದ ಕೆರೆಯ ಒತ್ತುವರಿ ಸುಸ್ಪಷ್ಟವಾಗಿದ್ದರೂ ಅದನ್ನು ಸಮರ್ಥಿಸಿಕೊಳ್ಳುವುದು ಮುಂದೊಂದು ದಿನ ಬೇರೆಯವರೂ ಕೆರೆ ಜಾಗ ಆಕ್ರಮಿಸಲು ಆಹ್ವಾನ ಕೊಟ್ಟಂತಾಗುತ್ತೆ.

ಕೆರೆ ಒತ್ತುವರಿಯನ್ನು ಯಾರೂ ಗಂಭೀರವಾಗಿ ಪರಿಗಣಿಸದಿದ್ದರಿಂದ ತಾಲ್ಲೂಕು ರೈತ ಸಂಘದ ಜಕ್ಕಲಿ ನಾಗರಾಜ, ಸಂತೋಷ್‌ನಾಯ್ಕ, ಕಲೀಮುಲ್ಲಾ, ಸ್ವಾಮಿನಾಯ್ಕ ಗುರುಗದ ನಾಗೇಂದ್ರಪ್ಪ ಮೊಹ್ಮದ್ ನವಾಜ್ ಮೊದಲಾದವರು ಸಂಬಂಧಪಟ್ಟ ಇಲಾಖೆಗಳ ಬೆನ್ನುಹತ್ತಿ ದಾಖಲೆಗಳನ್ನು ಹೊರಗೆಳೆದು ತಹಸೀಲ್ದಾರ್ ಪದ್ಮಕುಮಾರಿಗೆ ದೂರು ನೀಡಿದ್ದರು. ಆಗ ನೆಪಕ್ಕೆಂಬಂತೆ ಕೆರೆ ಜಮೀನಿನ ಸರ್ವೆ ನಡೆಸಲಾಯ್ತು. ಇದರಿಂದ ರೊಚ್ಚಿಗೆದ್ದ ಉಳ್ಳವರು ರೈತಸಂಘದ ಮೊಹ್ಮದ್ ನವಾಜನ ಮೇಲೆ ಹಲ್ಲೆ ಮಾಡಿದ್ದರು. ಈ ವಿಚಾರ ಗೊತ್ತಾದರು ಪದ್ಮಮ್ಮ ಕೈಕಟ್ಟಿ ಕೂತಿದ್ದಾಳೆ.

ವಿಚಿತ್ರವೆಂದರೆ ಯಾವ ಜಾಗವು ಕೆರೆಯ ಅಕ್ರಮ ಒತ್ತುವರಿ ಎಂದು ಘೋಷಿಸಲಾಗಿದೆಯೋ ಅದೇ ಜಾಗದ ಸಾಮಿಲ್, ಮನೆಗಳಿಗೆ ಪಟ್ಟಣ ಪಂಚಾಯ್ತಿಯಿಂದಲೇ ಕರೆಂಟು, ರಸ್ತೆ, ಚರಂಡಿ, ನೀರಿನ ಸೌಲಭ್ಯ ಒದಗಿಸಿಕೊಡಲಾಗಿದೆ. ಆ ಇಪ್ಪತ್ತೂ ಜನ ಅಕ್ರಮ ಒತ್ತುವರಿದಾರರ ಬಳಿ ಪಟ್ಟಣ ಪಂಚಾಯ್ತಿ ನೀಡಿದ್ದು ಎನ್ನಲಾದ ಹಕ್ಕುಪತ್ರಗಳಿವೆ. ಆದರೆ ಅಂತಹ ಹಕ್ಕುಪತ್ರಗಳನ್ನು ನೀಡಿದ ಬಗ್ಗೆ ಪಟ್ಟಣ ಪಂಚಾಯ್ತಿಯ ಯಾವ ಕಡತಗಳಲ್ಲೂ ದಾಖಲೆಗಳಿಲ್ಲ! ಅಂದರೆ ಅವೆಲ್ಲ ಬೋಗಸ್ ಹಕ್ಕುಪತ್ರಗಳು ಎಂದಾಯಿತು. ಅವುಗಳನ್ನು ನೀಡಿದ್ದಾದರೂ ಯಾರು? ಈ ಕುರಿತು ತಹಸೀಲ್ದಾರಮ್ಮ ತುಟಿ ಎರಡು ಮಾಡುತ್ತಿಲ್ಲ.


ಮರಳು ದಂಧೆಯಲ್ಲೂ ಮೋಸದಾಟ


ಇನ್ನು ಚನ್ನಗಿರಿ ತಾಲ್ಲೂಕಿನಲ್ಲಿ ಮರಳು ದಂಧೆ ಎಗ್ಗಿಲ್ಲದೇ ನಡೆಯುತ್ತಿದೆ. ಸ್ವತಃ ಶಾಸಕ ವಡ್ನಾಳ್ ರಾಜಣ್ಣನ ಕೃಪಾಪೋಷಿತ ಘಟಿಂಗರ ಗುಂಪೇ ಈ ದಂಧೆಗೆ ನಿಂತುಬಿಟ್ಟದೆ. ಅದರಲ್ಲೂ ಸಂತೆಬೆನ್ನೂರು ಭಾಗದ ದಂಧೆಕೋರರು ಸೊಂಪಾಗಿ ಮರಳುಗಳ್ಳತನ ಮಾಡುತ್ತಿದ್ದಾರೆ. ಇಲ್ಲೂ ತಹಸೀಲ್ದಾರ್ ಪದ್ಮಮ್ಮನಿಗೆ ಕಪ್ಪ ಸಲ್ಲಿಕೆಯಾಗುತ್ತದೆ ಎಂಬ ವರ್ತಮಾನವಿದೆ. ಇತ್ತೀಚೆಗಷ್ಟೆ ತಣಿಗೆರೆಯ 16/2 ಸರ್ವೆ ನಂಬರಿನ ಮಹದೇವಪ್ಪ ಎಂಬುವವರ ಹೊಲದಲ್ಲಿ ಇಂದೂಧರ ಎಂಬ ರಾಜಕೀಯ ಪುಢಾರಿ ರಾತ್ರೋರಾತ್ರಿ 50 ಲೋಡು ಮರಳು ಲೂಟಿ ಮಾಡಿದ್ದ ಇದಕ್ಕೆ ಮಹದೇವಪ್ಪನ ತಮ್ಮನ ಮಗ ಸುರೇಶ ಎಂಬಾತ ತಕರಾರು ತೆಗೆದಾಗ ಇಂದೂಧರ ತನ್ನ ಚೇಲಾಗಳಾದ ಉಮಾಪತಿ, ವೇದಮೂರ್ತಿ, ಶಂಕರಮೂರ್ತಿಯ ಜೊತೆ ಸೇರಿಕೊಂಡು ಆತನ ಮೇಲೆ ಹಲ್ಲೆ ಮಾಡಿದ್ದ ಹಲ್ಲೆಗೊಳಗಾದ ಸುರೇಶ್ ಸಂತೇಬೆನ್ನೂರು ಠಾಣೆಯ ಎಸ್.ಐ. ಮಲ್ಲಿಕಾರ್ಜುನ ಸ್ವಾಮಿಗೆ ದೂರು ನೀಡಲು ಹೋದಾಗ, ದೂರು ಸ್ವೀಕರಿಸದ ಎಸ್‌ಐ ತಹಸೀಲ್ದಾರಮ್ಮನ ಕಡೆ ಬೆರಳು ತೋರಿಸಿ ತೆಪ್ಪಗಾಗಿದ್ದ

ಪದ್ಮಕುಮಾರಿಯ ಎದುರು ನಿಂತ ಸುರೇಶ್ ಮರಳು ಲೂಟಿ ಮತ್ತು ಹಲ್ಲೆಯ ಬಗ್ಗೆ ವಿವರಿಸಿದಾಗ ಹೆಚ್ಚೇನು ತಲೆ ಕೆಡಿಸಿಕೊಳ್ಳದ ಮೇಡಮ್ಮು ಸಂತೇಬೆನ್ನೂರು ಎಸ್.ಐ. ಮಲ್ಲಿಕಾರ್ಜುನ ಸ್ವಾಮಿಗೆ ಫೋನ್ ಮಾಡಿ ಟ್ರ್ಯಾಕ್ಟರ್, ಜೆ.ಸಿ.ಬಿ. ಸೀಜ್ ಮಾಡಲು ಹೇಳಿ ಸುಮ್ಮನಾಗಿದ್ದಳು. ಮಲ್ಲಿಕಾರ್ಜುನ ಸ್ವಾಮಿ ಕೇಸು ದಾಖಲಿಸಿಕೊಂಡ. ಇದಾದ ಎರಡೇ ದಿನಕ್ಕೆ ಇಂದೂಧರನಿಂದ ಅದೆಷ್ಟು ಅಮೇಧ್ಯ ಎಸ್.ಐ. ಮಲ್ಲಿಕಾರ್ಜುನಸ್ವಾಮಿ ಮತ್ತು ತಹಸೀಲ್ದಾರ್ ಪದ್ಮಕುಮಾರಿಯ ಕೈ ತಲುಪಿತೋ ಗೊತ್ತಿಲ್ಲ, ಸೀಜಾಗಿದ್ದ ಟ್ರ್ಯಾಕ್ಟರ್ ಮತ್ತು ಜೆಸಿಬಿಗಳನ್ನು ರಿಲೀಜ್ ಮಾಡಿದ್ದಲ್ಲದೆ ಹಲ್ಲೆಗೆ ತುತ್ತಾಗಿದ್ದ ಸುರೇಶನ ಮೇಲೆಯೇ ಎಸ್‌ಐ ಮಲ್ಲಿಕಾರ್ಜುನ ದೂರು ದಾಖಲಿಸಿಕೊಂಡಿದ್ದಾನೆ.

[illegible] ಬಂದು ತಲುಪಿರುವ ಪದ್ಮಮ್ಮನಿಗೆ ಆಯಾಸವೇ [illegible], ಈಗಲಾದರೂ ಶಾಸಕ ವಡ್ನಾಳ್ ರಾಜಣ್ಣ ಆಕೆಯ ಆಟಕ್ಕೆ ಲಗಾಮು ಹಾಕುವರೆ ಮುಂಬರುವ ...ಲೆಕ್ಷನ್ ಕದನಾಗ..ನ

■ ಟಿ.ಎನ್. ಹಾನು ಖಿ






ಒತ್ತುವರಿ ಕೆರೆ ಜಾಗದಲ್ಲಿ ರಸ್ತೆ ನಿರ್ಮಾಣ...

...ಡ್ನಾಳ್-ಮಾಡಾಳು ಮುಂದೆ ನಡೆಯುತ್ತಾ ಮಹಿಮೆ?

...ಷ್ಟ ಅಧಿಕಾರಿಗಳ ಆಟಾಟೋಪದಿಂದಾಗಿ ಜನ ...ಳ್ ರಾಜಣ್ಣನ ಶಾಸಕಗಿರಿಯ ವಿರುದ್ಧ ...ಕೊಂಡಿದ್ದಾರೆ. ಅಧಿಕಾರಿಗಳನ್ನು ಮುಂದಿಟ್ಟುಕೊಂಡು ...ಜಣ್ಣನೇ ಲೂಟಿಗಿಳಿದಿದ್ದಾರೆ ಎಂಬ ಗಾಳಿಸುದ್ದಿಗಳೂ ...ಪಡೆದುಕೊಂಡಿವೆ. ಇವೆಲ್ಲವೂ ...ಸ ಎಲೆಕ್ಷನ್‌ನ ಕಾವು ಹೆಚ್ಚಿಸಿವೆ. ...ಮತ್ತು ಕಸಬಾ ಹೋಬಳಿಗಳ ...ರು ತುಂಬಿಸಿದ್ದೇ ಸಾಧನೆ ಎಂದು ...ತಿರುಗಾಡುತ್ತಿರುವುದೇನೊ ನಿಜ. ...ತುಂಗಭದ್ರಾ ನದಿಯಿಂದ ನೀರು ... ಆ ಕೆಲಸ ಶುರುವಾದದ್ದು ...ಪಟೇಲರ ಕಾಲದಲ್ಲಿ, ಆಗಿನಿಂದ ...ಕ್ಕ ಕಾಮಗಾರಿಯ ಕೆಡಿಟ್ಟು ...ರ್ಣವಾಗಿ ರಾಜಣ್ಣನಿಗೆ ದಕ್ಕುವುದಿಲ್ಲ, ಅಧಿಕಾರಿಗಳ ...ರ್ತನೆ ಹಾಗೂ ರಾಜಣ್ಣನ ಸರ್ವಾಧಿಕಾರಿ ...ಜೇ ಮುಳುವಾಗಲಿವೆ. ರಾಜಣ್ಣನ ಭಟ್ಟಂಗಿಗಳು ...ತುಂಬಾ ಲೂಟಿ ಮಾಡುತ್ತಾ ಶಾಸಕರ ಇಮೇಜಿಗೆ ...ಡುತ್ತಿದ್ದಾರೆ. ಜನ ಯಾವಾಗ ವಡ್ನಾಳ್ ರಾಜಣ್ಣನನ್ನು ... ಮಾಡಬೇಕೆಂದು ಮಾತಾಡಿಕೊಳ್ಳಲು ಶುರು ...ರೋ ಆಗಿನಿಂದ, ಬಿಜೆಪಿಯ ಮಾಡಾಳು ...ಜೆಡಿಯುನ ಮಹಿಮಾ ಪಟೇಲ್, ಜೆಡಿಎಸ್‌ನ ... ರಮೇಶ್ ಮೊದಲಾದವರು ಕ್ಷೇತ್ರದಲ್ಲಿ ...ದ್ದಾರೆ.

...ರ್ ರಾಜಣ್ಣ ಹಾಗೂ ಮಾಡಾಳು ವಿರೂಪಾಕ್ಷಪ್ಪ ಇಬ್ಬರೂ ಜಾತಿ ರಾಜಕಾರಣದ ಮೇಲೆ ನೆಲೆ ಭದ್ರ ಮಾಡಿಕೊಂಡವರು. ಇಬ್ಬರೂ ಸಾದರ ಲಿಂಗಾಯತ ಕೆಟಗರಿಯವರು. ಪ್ರಭಾವಿ ಸಮುದಾಯವಾದ ಈ ಮತಗಳು ಇಬ್ಬರ ನಡುವೆ ಹಂಚಿಹೋಗುವುದರಿಂದ ದಲಿತರು, ಹಿಂದುಳಿದವರು ಮತ್ತು ಮುಸ್ಲಿಂ ಮತಗಳು ಯಾರಿಗೆ ಹರಿದುಹೋಗಲಿವೆ ಎಂಬುದು ಇಲ್ಲಿ ಗೆಲುವನ್ನು ನಿರ್ಧರಿಸಲಿದೆ. ಆದರೆ ಈ ಸಲ ಇವರಿಬ್ಬರೂ ಮತದಾರನಿಗೆ ಬೇಸರವಾಗಿದ್ದಾರೆ. ಇದು ಪಟೇಲರ ಪುತ್ರ ಮಹಿಮಾ ಪಟೇಲ್‌ನಲ್ಲಿ ಗೆಲುವಿನ ಆಸೆ ಮೂಡಿಸಿದೆ.



ಅಪ್ಪನ ಹೆಸರಲ್ಲಿ ಒಮ್ಮೆ ಶಾಸಕನಾಗಿದ್ದ ಮಹಿಮ ಮತದಾರನನ್ನು ಮರೆತು ಕಲ್ಕಿ ಭಗವಂತನ ಭಕ್ತನಾಗಿ ಭಜನೆ ಶುರುವಿಟ್ಟುಕೊಂಡಿದ್ದ, ಒಂದು ಹಂತದಲ್ಲಿ ರಾಜಕಾರಣ ತ್ಯಜಿಸಿ ಕಲ್ಕಿ ಸನ್ಯಾಸಿಯಾಗಿಬಿಡುತ್ತಾನೇನೊ ಅನ್ನುವ ಆತಂಕ ಮೂಡಿಸಿದ್ದ, ಅದಕ್ಕೋಸ್ಕರವೇ ನಂತರದ ಎಲೆಕ್ಷನ್‌ನಲ್ಲಿ ಮತದಾರ ಮಹಿಮನನ್ನು ತಿರಸ್ಕರಿಸಿದ್ದ, 2008ರ ಚುನಾವಣೆಗೆ ಜೆಡಿಎಸ್, ಜೆಡಿಯು, ಕೈ ಯಾವ ಪಾರ್ಟಿಯಲ್ಲೂ ಕೂರಲು ಕುರ್ಚಿ ಸಿಗದಿದ್ದಾಗ ಸುವರ್ಣ ಕರ್ನಾಟಕ ಅಂತಾ ಚುನಾವಣಾ ನಿಮಿತ್ತ ಹೊಸ ಪಾರ್ಟಿ ಕಟ್ಟಿ ನಿಂತಿದ್ದ, ಚುನಾವಣಾ ರಾಜಕಾರಣದ ಜಣಜಣ ಕಾಂಚಾಣದ ಮರ್ಮವರಿತೂ ಮತದಾರನ ಬಳಿ ಹೋಗಿ ನನಗೆ ನೋಟು-ಓಟು ಎರಡೂ ಕೊಡಿ ಅಂತ ಕೇಳಿದ್ದ. ಆದರೆ ವಡ್ನಾಳು-ಮಾಡಾಳುಗಳ ತಿಜೋರಿ ಮತದಾರನೆದುರು ಓಪನ್ನಾಗಿಡಲಾಗಿತ್ತು, ಈಗ ಮಹಿಮಾ ಜೆಡಿಯು ಸೇರಿ ಮರು ಎಂಟ್ರಿಗೆ ಹಾತೊರೆಯುತ್ತಿದ್ದಾನೆ. ಈಗ ಆತನಿಗೆ ಕೊಂಚ ಚುನಾವಣಾ ರಾಜಕಾರಣದ ಸೀರಿಯಸ್‌ನೆಸ್ ಬಂದಂತಿದೆ. ಕಲ್ಕಿ ಭಗವಂತನ ಭಜನೆ ಬಿಟ್ಟು ಮತದಾರನ ಭಜನೆ ಶುರುಮಾಡಿದ್ದಾನೆ. ವಡ್ನಾಳ್ ಮತ್ತು ಮಾಡಾಳುಗಳ ರಾಜಕಾರಣ ವೈಖರಿಗೆ ಬೇಸತ್ತ ಮತದಾರ ಮಹಿಮನ ಬಗ್ಗೆ ಒಲವು ಮೂಡಿಸಿಕೊಳ್ಳುತ್ತಿದ್ದಾನೆ. ಅಲ್ಲದೆ ಜಾತಿಯಲ್ಲಿ ಮಹಿಮನೂ ಪಂಚಮಸಾಲಿ ಲಿಂಗಾಯತನಾಗಿರೋದ್ರಿಂದ ಕ್ಯಾಸ್ಟ್ ಕೆಮಿಸ್ಟ್ರಿಯೂ ಕೈಹಿಡಿಯಬಹುದು.

ಉಳಿದಂತೆ ಪಟೇಲರ ಮೇಲಿನ ಪ್ರೀತಿಗೆ ಸಾದರಲ್ಲೂ ಹಳೇ ತಲೆಮಾರಿನ ಹಿರಿಯ ಮತದಾರರು, ಅಲ್ಪಸಂಖ್ಯಾತರು, ನಾಯಕರು, ದಲಿತರು, ಉಪ್ಪಾರರ ಮತಗಳು ಮಹಿಮಾನಿಗೆ ಸಾಥ್ ನೀಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ, ಆತ ಹೋದ ಕಡೆಯಲ್ಲೆಲ್ಲ ಪಟೇಲರ ಅಭಿಮಾನಿಗಳು ಬೆಂಬಲಕ್ಕೆ ನಿಲ್ಲುವ ಸೂಚನೆ ನೀಡುತ್ತಿದ್ದಾರೆ.

ಮೂಲಭೂತವಾದಿಗಳ ಮೂಲ ವ್ಯಾಧಿ: ಪಠ್ಯಕ್ರಮ ಬದಲಾ



■ ಸುರೇಶ್ ಭಟ್ ಬಾಕ್ರಬೈಲ್

ಕಳೆದ ಹಲವಾರು ದಶಕಗಳಿಂದ ತನ್ನ ಹಿಂದೂತ್ವ ಸಿದ್ಧಾಂತವನ್ನು ಭಾರತದ ವಿವಿಧ ರಾಜ್ಯಗಳ ಶಾಲಾ ಪಠ್ಯಕ್ರಮಗಳಲ್ಲಿ ಪರೋಕ್ಷವಾಗಿ ತೂರಿಸುತ್ತಾ ಬಂದಿರುವ ಸಂಘ ಪರಿವಾರ ಈಗ ಕೇಂದ್ರದಲ್ಲಿ ತನ್ನದೇ ಸರ್ಕಾರ ಆಡಳಿತ ವಹಿಸಿಕೊಂಡ ನಂತರವಂತೂ ಪಠ್ಯಕ್ರಮಗಳಲ್ಲಿ ನೇರ ಹಸ್ತಕ್ಷೇಪಕ್ಕೆ ಮುಂದಾಗಿದೆ. ಸಂಘ ಪರಿವಾರದ ಹಲವು ಮುಖಂಡರಿಂದ ದೇಶಾದ್ಯಂತದ ಎಲ್ಲಾ ಶಾಲೆಗಳ ಪಠ್ಯಕ್ರಮವನ್ನು ಹಿಂದೂತ್ವ ಸಿದ್ಧಾಂತಕ್ಕೆ ಅನುಗುಣವಾಗಿ ಬದಲಾಯಿಸುವ ಇಂಗಿತ ವ್ಯಕ್ತವಾಗುತ್ತಲೆ ಬಂದಿದೆ. ಇತ್ತೀಚೆಗೆ "ಇವತ್ತಿನ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಬದಲು 'ಕಾರ್ಯಕರ್ತ'ರನ್ನು ಸೃಷ್ಟಿಸುತ್ತಿರುವುದರಿಂದ ಇಂತಹ ರಾಜಕೀಯ ಅಜೆಂಡಾ ಇಟ್ಟುಕೊಂಡಿರುವ ಪಠ್ಯಕ್ರಮವನ್ನು ಬದಲಾಯಿಸಬೇಕಾಗಿದೆ" ಎಂಬ ನುಡಿಮುತ್ತೊಂದನ್ನು ಉದುರಿಸಿರುವ ಭಾರತೀಯ ಸಮಾಜವಿಜ್ಞಾನ ಸಂಶೋಧನಾ ಮಂಡಳಿಯ ನೂತನ ಮುಖ್ಯಸ್ಥ ಬ್ರಿಜ್ ಬಿಹಾರಿ ಕುಮಾರ್, ತನ್ಮೂಲಕ ಮುಂಬರುವ ವಿದ್ಯಮಾನಗಳ ಸೂಚನೆಯೊಂದನ್ನು ನೀಡಿದ್ದಾನೆ.

ಉತ್ತರ ಪ್ರದೇಶದ ಬೆಳವಣಿಗೆಗಳು

ಹಿಂದೂತ್ವ ಒಂದು ಉತ್ತಮ ಜೀವನಶೈಲಿಯಾಗಿದ್ದು ಜನತೆಗೆ ಅದನ್ನು ಪರಿಚಯಿಸುವ ಅಗತ್ಯವಿದೆ ಎಂದು ಹೇಳಿರುವ ಉತ್ತರ ಪ್ರದೇಶದ ಬಿಜೆಪಿ ಘಟಕ ಹಿಂದೂತ್ವ ಸಿದ್ಧಾಂತವನ್ನು ನೇರವಾಗಿ ಮಕ್ಕಳ ತಲೆಯಲ್ಲಿ ಬಿತ್ತಲು ಯೋಚಿಸುತ್ತಿದೆ. ಆ ನಿಟ್ಟಿನಲ್ಲಿ ಅದು ರಾಜ್ಯದ 9000 ಶಾಲೆಗಳ ಸುಮಾರು 9 ಲಕ್ಷ ವಿದ್ಯಾರ್ಥಿಗಳಿಗೆ ತಥಾಕಥಿತ 'ಸಾಮಾನ್ಯ ಜ್ಞಾನ'ದ ಪರೀಕ್ಷೆಯೊಂದನ್ನು ಸದ್ಯದಲ್ಲೆ ನಡೆಸಲಿದೆ. ಪರೀಕ್ಷೆಯನ್ನು ನಡೆಸುವುದಷ್ಟೆ ಅಲ್ಲ, ಅದರ ಸಿಲೆಬಸ್‌ಅನ್ನೂ ತಯಾರಿಸಿ ಹಂಚುತ್ತಿರುವುದು ಗಮನಾರ್ಹವಾಗಿದೆ. 70 ಪುಟಗಳ ಕಿರುಹೊತ್ತಗೆಯ ರೂಪದಲ್ಲಿರುವ ಸಿಲೆಬಸ್‌ಅನ್ನು ಇದೇ ಆಗಸ್ಟ್ 1ರಂದು ಲಕ್ನೌದಲ್ಲಿ ಪಕ್ಷಾಧ್ಯಕ್ಷ ಅಮಿತ್ ಶಾನ 'ದಿವ್ಯಹಸ್ತ'ದಲ್ಲಿ ಬಿಡುಗಡೆಗೊಳಿಸಲಾಗಿದ್ದು ಅದರ ಹೆಸರು ಸಾಮಾನ್ಯ ಗ್ಯಾನ್ ಪ್ರತಿಯೋಗ. ಪುಸ್ತಕದಲ್ಲಿರುವ ವಿಷಯಗಳೆಲ್ಲವೂ ಸತ್ಯವೆಂದು ಬಿಜೆಪಿ ಹೇಳಿಕೊಳ್ಳುತ್ತಿದೆ. ಅದರಲ್ಲಿ ಆರೆಸ್ಸೆಸ್ ವಿಶ್ವದ ಅತಿದೊಡ್ಡ ಸಾಮಾಜಿಕ ಸಂಘಟನೆ ಎಂದು ಗುಣಗಾನ ಮಾಡಲಾಗಿದೆ; ಮಾತೃಭೂಮಿ, ಸಂಸ್ಕೃತಿ, ಹಿಂದೂತ್ವ ಮತ್ತು ರಾಷ್ಟ್ರೀಯತೆಗಳ ಬಗ್ಗೆ ಲೇಖನಗಳಿವೆ. ಮುಂದಿನ ಪೀಳಿಗೆಗಳು ಇದುವರೆಗೂ ಮುಚ್ಚಿಡಲಾದ ಇತಿಹಾಸದ ಶ್ರೇಷ್ಠ ವ್ಯಕ್ತಿಗಳು ಮತ್ತು ಹೀರೋಗಳ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿದೆ ಎಂದಿರುವ ಬಿಜೆಪಿ ತನ್ನ ಈ ಪುಸ್ತಕದಲ್ಲಿ ದೀನ ದಯಾಳು ಉಪಾಧ್ಯಾಯ, ಕೆ.ಬಿ. ಹೆಡ್ಗೇವಾರ್, ಶ್ಯಾಮ್‌ಪ್ರಸಾದ್ ಮುಖರ್ಜಿ, ವಿ.ಡಿ. ಸಾವರ್ಕರ್, ನಾನಾಜಿ ದೇಶ್‌ಮುಖ್‌ರಂತಹ ಸಂಘ ಪರಿವಾರದ ನಾಯಕರು ಮತ್ತು ಸಿದ್ಧಾಂತಿಗಳ ಬದುಕು ಮತ್ತು ನಿಲುವುಗಳನ್ನು ಪರಿಚಯಿಸುವ ಬರಹಗಳನ್ನು ಸೇರಿಸಿದೆ. ಪ್ರಧಾನಿ ನರೇಂದ್ರ ಮೋದಿಯ ಐಡಿಯಾಗಳಾದ ನೋಟು ರದ್ದತಿ, ಜನಧನ ಯೋಜನೆಗಳನ್ನಂತೂ ಕಂಠಪೂರ್ತಿ ಹೊಗಳಲಾಗಿದೆ. ಪುಸ್ತಕದಲ್ಲಿ ಉತ್ತರ ಪ್ರದೇಶದ ಯೋಗಿ ಸರ್ಕಾರ, ರಾಮಜನ್ಮಭೂಮಿ, ನೋಟು ರದ್ದತಿಯಂತಹ ವಿಷಯಗಳ ಕುರಿತು ಪ್ರಶ್ನೆಗಳಿವೆ. ಭಾರತದ ಪ್ರಥಮ ಗವರ್ನರ್ ಜನರಲ್, ರಾಷ್ಟ್ರಪತಿ, ಉಪರಾಷ್ಟ್ರಪತಿ, ಲೋಕಸಭಾಧ್ಯಕ್ಷ ಮುಂತಾದ ಗಣ್ಯರನ್ನು ಹೆಸರಿಸುವ ಪಟ್ಟಿಯೊಂದರಲ್ಲಿ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಹೆಸರನ್ನು ಕೈಬಿಡಲಾಗಿದೆ! ಇದನ್ನು ಉದ್ದೇಶಪೂರ್ವಕ ಎಂದಲ್ಲದೆ ಇನ್ನೇನೆಂದು ಕರೆಯಬೇಕು? ಸ್ಪರ್ಧಾತ್ಮಕ ಎನ್ನಲಾಗಿರುವ ಈ ಪರೀಕ್ಷೆಯನ್ನು ಹಿಂದೂತ್ವವಾದಿ ದೀನ ದಯಾಳು ಉಪಾಧ್ಯಾಯನ ಜನ್ಮದಿನವಾದ ಆಗಸ್ಟ್ 26ರಂದು ಹಮ್ಮಿಕೊಂಡಿರುವುದು ಗಮನಾರ್ಹವಿದೆ. ಸುಮಾರು 100 ಪ್ರಶ್ನೆಗಳ ಈ ಪರೀಕ್ಷೆ ಕೇವಲ 9, 10ನೆ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ ಎನ್ನಲಾಗಿದೆ. ಸಂಘ ಪರಿವಾರದ ಉತ್ಪನ್ನವಾದ ಸಾಮಾನ್ಯ ಗ್ಯಾನ್ ಪ್ರತಿಯೋಗದಲ್ಲಿ ನೀಡಲಾಗಿರುವ ಕೆಲವು ಸ್ಯಾಂಪಲ್ ಪ್ರಶ್ನೆಗಳು ಮತ್ತು ಉತ್ತರಗಳನ್ನು ನೋಡಿದರೆ ಸಾಕು ಅದರ ಹಿಂದಿರುವ ಯೋಚನೆಗಳೇನೆಂದು ನಿಚ್ಚಳವಾಗುತ್ತದೆ:

ಪ್ರಶ್ನೆ: ಭಾರತ ಹಿಂದೂಗಳ ದೇಶವೆಂದು ಯಾರು ಹೇಳಿದರು?

ಉತ್ತರ: ಡಾ। ಕೇಶವ ಬಲಿರಾಮ ಹೆಡ್ಗೇವಾರ್.

ಪ್ರಶ್ನೆ: ಚಿಕಾಗೊದ ಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಯಾವ ಧರ್ಮವನ್ನು ಪ್ರತಿನಿಧಿಸಿದರು?

ಉತ್ತರ: ಹಿಂದೂತ್ವ.

ಪ್ರಶ್ನೆ: ಮಹಾರಾಜ ಸುಹೇಲ್‌ದೇವ ಯಾವ ಮುಸ್ಲಿಂ ಆಕ್ರಮಣಕಾರನನ್ನು ಕ್ಯಾರಟ್, ಮೂಲಂಗಿ ಥರ ಕೊಚ್ಚಿಹಾಕಿದ?

ಉತ್ತರ: ಸಯ್ಯದ್ ಸಾಲಾರ್ ಮಸೂದ್ ಘಾಜಿ?.


ಪ್ರಶ್ನೆ: ರಾಮ ಜನ್ಮಭೂಮಿ ಎಲ್ಲಿದೆ?

ಉತ್ತರ: ಅಯೋಧ್ಯೆ.

ಪ್ರಶ್ನೆ: ಹರಿಜನರ ಕುರಿತು ಗಾಂಧಿ ಮತ್ತು ಕಾಂಗ್ರೆಸ್ ನೀಡಿದ ಹೇಳಿಕೆಯನ್ನು ವಿರೋಧಿಸಿ ಅಂಬೇಡ್ಕರ್ ಬರೆದ ಪುಸ್ತಕ ಯಾವುದು?

ಉತ್ತರ: ಕಾಂಗ್ರೆಸ್ ಮತ್ತು ಗಾಂಧಿ ಮಾಡಿದ್ದಾರೆ.

ಕೊನೆಯ ಪ್ರಶ್ನೆಗೆ ಸರಿಯಾದ ಉತ್ತರವೆಂದರೆ: 'ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗಾಗಿ ಏನು ಮಾಡಿದ್ದಾರೆ'. ಇಲ್ಲಿ ಅಂಬೇಡ್ಕರ್‌ರ ಇತರ ಕೃತಿಗಳ ವಿಷಯವನ್ನು ಪ್ರಸ್ತಾಪಿಸದಿರುವುದು ಖಂಡಿತಾ ಅನುದ್ದೇಶಪೂರ್ವಕವಲ್ಲ. ಉದಾಹರಣೆಗೆ 'ಹಿಂದೂ ಧರ್ಮದ ಒಗಟುಗಳು', 'ಹಿಂದೂ ಧರ್ಮದ ತತ್ವ', 'ಜಾತಿವಿನಾಶ' ಮುಂತಾದ ಪುಸ್ತಕಗಳು. ಇವು ಹಿಂದೂ ಧರ್ಮ ಮತ್ತು ಹಿಂದೂತ್ವದ ಹುಳುಕುಗಳನ್ನು ಬಯಲುಗೊಳಿಸುತ್ತವೆ ಎಂಬ ಕಾರಣಕ್ಕಾಗಿ



ಇವುಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿರುವುದು ಸ್ಪಷ್ಟವಿದೆ.

ಅಖಿಲ ಭಾರತ ಮಟ್ಟದಲ್ಲಿ

ತೀರಾ ಇತ್ತೀಚೆಗೆ ಜವಾಹರಲಾಲ್ ವಿಶ್ವವಿದ್ಯಾನಿಲಯದ ಉಪಕುಲಪತಿ ಜಗದೀಶ್ ಕುಮಾರ್ ಎಂಬಾತ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಉದ್ದೀಪಿಸಲು ಕ್ಯಾಂಪಸ್ ಒಳಗಡೆ ಯುದ್ಧ ಟ್ಯಾಂಕ್ ಪ್ರದರ್ಶಿಸಬೇಕಾಗಿದೆ ಎಂದು ಹೇಳಿದ. ಇದರಲ್ಲಿ ಅಚ್ಚರಿಪಡುವಂಥಾದ್ದೇನೂ ಇಲ್ಲ ಏಕೆಂದರೆ ಇದು ಹಿಂದೂತ್ವವಾದಿ ಚಿಂತನೆಗೆ ಅನುಗುಣವಾಗಿಯೇ ಇದೆ. ಆರೆಸ್ಸೆಸ್‌ನ ಸಂಸ್ಥಾಪಕರಲ್ಲೊಬ್ಬನಾದ ಡಾ। ಬಿ.ಎಸ್. ಮೂಂಜೆ 1930ರ ದಶಕದಿಂದಲೆ ಹಿಂದೂಗಳ ಸೈನಿಕೀಕರಣಕ್ಕೆ ಸಿದ್ಧತೆಗಳನ್ನು ಪ್ರಾರಂಭಿಸಿದ್ದ. ಬ್ರಿಟನ್, ಫ್ರಾನ್ಸ್, ಇಟಲಿ, ಜರ್ಮನಿಗಳ ಮಿಲಿಟರಿ ಶಾಲೆಗಳ ಕಾರ್ಯನಿರ್ವಹಣೆಯನ್ನು ಅಭ್ಯಸಿಸಿದ್ದ ಮೂಂಜೆ ಹಿಂದೂಗಳಿಗೆ ಸೈನಿಕ ತರಬೇತಿ ನೀಡುವ ಸಲುವಾಗಿ ಅದೇ ಮಾದರಿಯ ಭೋನ್ಸಾಲಾ ಮಿಲಿಟರಿ ಶಾಲೆಯನ್ನು 1937ರಲ್ಲಿ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಪ್ರಾರಂಭಿಸಿದ. ಇದಕ್ಕೂ ಮುನ್ನ ಆತ ಹಂಚಿದ್ದ ಕರಪತ್ರದಲ್ಲಿ ಜರ್ಮನ್ ಪ್ರೊಫೆಸರ್ ಎವಾಲ್ಡ್ ಬನ್ಸೆಯ 'ಮಿಲಿಟರಿ ವಿಜ್ಞಾನ' ಪುಸ್ತಕದ ಆಯ್ದ ಕೆಲವು ಸಾಲುಗಳನ್ನು ಉಲ್ಲೇಖಿಸಲಾಗಿತ್ತು: 'ಮರಣಶಯ್ಯೆಯಲ್ಲಿರುವ ಯೋಧನೊಬ್ಬನಿಗೆ ತನ್ನ ರಕ್ತ ತನ್ನ ರಾಷ್ಟ್ರದೇವತೆಗಾಗಿ ಹರಿದುಹೋಗುತ್ತಿದೆಯೆಂದು ಗೊತ್ತಿದ್ದಾಗ ಆತ ಹೆಚ್ಚು ನಿಶ್ಚಿಂತನಾಗಿ ಸಾಯುತ್ತಾನೆ. ಹೀಗಾಗಿ ದೇಶದ 'ಜನರ' ಮನದಲ್ಲಿ ಚಿಕ್ಕಂದಿನಿಂದಲೇ ಯುದ್ಧದ ಯೋಚನೆಯನ್ನು ತುಂಬಿ, ಅದು ರೂಢಿಗತವಾಗುವ ರೀತಿಯಲ್ಲಿ ಅದನ್ನು ಸಜ್ಜುಗೊಳಿಸಬೇಕು'. ಕೆಲವು ವರ್ಷಗಳ ನಂತರ ನಾಗಪುರದಲ್ಲೂ ಇದರ ಶಾಖೆಯೊಂದನ್ನು ತೆರೆಯಲಾಯಿತು. ತರುವಾಯದ ದಿನಗಳಲ್ಲಿ ಸಂಘ ಪರಿವಾರದ ನಾಯಕರು ಕಾಲಕಾಲಕ್ಕೆ ಮಕ್ಕಳಿಗೆ ಸೈನಿಕ ಶಿಕ್ಷಣ ನೀಡುವ ಬಗ್ಗೆ ಹೇಳುತ್ತಲೇ ಬಂದಿರುವುದನ್ನು ಗಮನಿಸಬಹುದು. 2012ರಲ್ಲಿ ಈಗಿನ ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗ್ವತ್ ಕೂಡಾ ಇದನ್ನೆ ಪುನರುಚ್ಚರಿಸಿದ್ದಾನೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದನಂತರ ಏಕಾಏಕಿ ಚುರುಕಾದ ಸಂಘ ಪರಿವಾರ ಮಿಲಿಟರಿ ಶಿಕ್ಷಣವೂ ಸೇರಿದಂತೆ ತನ್ನ ಅಜೆಂಡಾದ ಅಂಶಗಳೆಲ್ಲವನ್ನೂ ಒಂದೊಂದಾಗಿ ಜಾರಿಗೊಳಿಸತೊಡಗಿದೆ. ಇತ್ತೀಚಿನ ಮಾಹಿತಿಗಳಂತೆ ಸಿಬಿಎಸ್‌ಸಿ ಪಠ್ಯಕ್ರಮದ ಸುಮಾರು 20,000 ಶಾಲೆಗಳ ಪಠ್ಯಕ್ರಮದಲ್ಲಿ ಮಿಲಿಟರಿ ಶಿಕ್ಷಣದ ವಿಷಯವನ್ನು ಸೇರಿಸುವ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ವಿದ್ಯಾರ್ಥಿಗಳಲ್ಲಿ ದೈಹಿಕ ಕ್ಷಮತೆ, ಶಿಸ್ತು ಹಾಗೂ ದೇಶಭಕ್ತಿ ಬೆಳೆಸುವುದೆ ಇದರ ಉದ್ದೇಶ ಎನ್ನಲಾಗಿದೆ. ಆರಂಭದಲ್ಲಿ ನಿರ್ದಿಷ್ಟ ಶಾಲೆಗಳಿಗಷ್ಟೆ ಸೀಮಿತವಾಗಲಿರುವ ಈ ಯೋಜನೆ ಶೀಘ್ರದಲ್ಲಿ ದೇಶದ ಎಲ್ಲಾ ಶಾಲೆಗಳಿಗೆ ವಿಸ್ತರಿಸುವುದರಲ್ಲಿ ಸಂಶಯವಿಲ್ಲ.

ಇದು ಹೊಸಾ ಸೇರ್ಪಡೆಯ ವಿಚಾರವಾಯಿತು. ಈಗ ಪಠ್ಯಕ್ರಮ ಮಾರ್ಪಾಟಿನ ವಿಚಾರಕ್ಕೆ ಬರೋಣ. ಬಿಜೆಪಿ ಆಡಳಿತದ ರಾಜಸ್ತಾನ, ಗುಜರಾತ್, ಹರಿಯಾಣಾ, ಮಧ್ಯಪ್ರದೇಶ, ಛತ್ತೀಸ್‌ಘಡ, ಜಾರ್ಖಂಡ್‌ಗಳಲ್ಲಿ ಪಠ್ಯಪುಸ್ತಕಗಳು ಈಗಾಗಲೆ ಹೆಚ್ಚುಕಡಿಮೆ ಪೂರ್ತಿ ಕೇಸರೀಕರಣಕ್ಕೆ ಒಳಗಾಗಿವೆ. ಗಾಂಧಿ, ನೆಹರು ಮೊದಲಾದವರ ಕುರಿತ ಪಾಠಗಳ ಬದಲು-ಸಾವರ್ಕರ್, ಗೋಲ್ವಲ್ಕರ್, ಹೆಡಗೇವಾರ್ ಮುಂತಾದ ಸಂಘಿ ನಾಯಕರನ್ನು ಹೊಗಳುವ, ಅನ್ಯ ಧರ್ಮಗಳನ್ನು ತೆಗಳುವ ಪಾಠಗಳು ಬಂದಿವೆ. ರಾಜಸ್ತಾನದ ವಿಶ್ವವಿದ್ಯಾನಿಲಯಗಳಲ್ಲಿ ವಾಣಿಜ್ಯ ವಿಷಯಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಈಗ ಗೀತೆ, ರಾಮಾಯಣ, ವೇದಗಳನ್ನು ಓದಲೇಬೇಕಾಗಿದೆ. ಗುಜರಾತಿನ 4ನೆ ತರಗತಿಯ ಹಿಂದಿ ಪಠ್ಯಪುಸ್ತಕದಲ್ಲಿ ಮುಸ್ಲಿಮರು ಪ್ರತಿ ವರ್ಷ ರಂಜಾನ್ ಹಬ್ಬಕ್ಕೆ ಮುನ್ನ ಒಂದು ತಿಂಗಳ ಕಾಲ ಆಚರಿಸುವ ಉಪವಾಸ ವ್ರತವಾದ 'ರೋಜಾ'ವನ್ನು 'ವಾಂತಿಭೇದಿ ಉಂಟುಮಾಡುವ ಅಪಾಯಕಾರಿ ಸಾಂಕ್ರಾಮಿಕ ರೋಗ' ಎಂದು ಕರೆಯಲಾಗಿದೆ. ಅದೇ ರೀತಿ 9ನೆ ತರಗತಿಯ ಹಿಂದಿ ಪಠ್ಯವೊಂದು ಯೇಸು ಕ್ರಿಸ್ತನನ್ನು 'ದೆವ್ವ' ಎಂದು ವರ್ಣಿಸುತ್ತದೆ.

ಆರೆಸ್ಸೆಸ್‌ನ ಅಂಗಸಂಸ್ಥೆಗಳಲ್ಲೊಂದಾದ 'ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್' ಈಗ ದೇಶದಾದ್ಯಂತದ ಶಾಲಾಪಠ್ಯಗಳಿಂದ ತನಗಿಷ್ಟವಿಲ್ಲದ ವಿಷಯಗಳನ್ನು ತೆಗೆದುಹಾಕಬೇಕೆಂದು ಒತ್ತಾಯಿಸತೊಡಗಿದೆ. ದೀನನಾಥ ಬಾತ್ರ ಎಂಬಾತನ ನೇತೃತ್ವದಲ್ಲಿ ಕಾರ್ಯಾಚರಿಸುತ್ತಿರುವ ನ್ಯಾಸ್ ಇತ್ತೀಚೆಗೆ ಶಾಲಾ ಪಠ್ಯಕ್ರಮ ಬದಲಾವಣೆ ಕುರಿತು 5 ಪುಟಗಳಷ್ಟು ಸಲಹೆಸೂಚನೆಗಳನ್ನು ತಯಾರಿಸಿ ಎನ್‌ಸಿಇಆರ್‌ಟಿಗೆ ಕಳುಹಿಸಿದೆ. ಈ ಹಿಂದೆ ದೆಹಲಿ ವಿಶ್ವವಿದ್ಯಾನಿಲಯದ ಪಠ್ಯದಿಂದ ಎ.ಕೆ.ರಾಮಾನುಜಂರ 'ಮುನ್ನೂರು ರಾಮಾಯಣಗಳು' ಎಂಬ ಪಾಠವನ್ನು ತೆಗೆಸಿ ಕುಖ್ಯಾತಿಗೊಳಗಾದ ಸಂಘಟನೆ ಇದೇ ಆಗಿದೆ. ರವೀಂದ್ರನಾಥ ಟಾಗೋರರು "ರಾಷ್ಟ್ರ ಎಂಬುದು ಮನುಷ್ಯ ಆವಿಷ್ಕರಿಸಿರುವ ಅತ್ಯಂತ ಶಕ್ತಿಶಾಲಿ ಅರಿವಳಿಕೆಯ ಮದ್ದು. ಅದರ ಪ್ರಭಾವಕ್ಕೊಳಗಾದ ಜನಸಮೂಹ ನೈತಿಕ ವಿಕೃತಿಯ ಅರಿವಿಲ್ಲದೆ ಅತ್ಯುಗ್ರ ಸ್ವಾರ್ಥಪರತೆಯ ವ್ಯವಸ್ಥಿತ ಕಾರ್ಯಾಚರಣೆಯನ್ನು ನಡೆಸಬಹುದು" ಎಂದಿರುವುದು ಬಾತ್ರಾನ ಕಣ್ಣನ್ನು ಕೆಂಪಾಗಿಸಿದೆ. ಹೀಗೆ ಟಾಗೋರರ ಬರಹಗಳು ಮತ್ತು ಚಿಂತನೆಗಳ ಮೂಲಕ ರಾಷ್ಟ್ರೀಯತೆ ಮತ್ತು ಮಾನವೀಯತೆ ನಡುವೆ ಒಡಕುಗಳಿರುವಂತೆ ತೋರಿಸಲು ಯತ್ನಿಸಲಾಗುತ್ತಿರುವುದರಿಂದ ಪಠ್ಯಪುಸ್ತಕಗಳಲ್ಲಿ ಅಂತಹ ಪಾಠಗಳು ಇರಬಾರದೆಂದು ಆಗ್ರಹಿಸಿರುವ 'ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್'ನ ಇನ್ನಿತರ ಆಕ್ಷೇಪಣೆಗಳು, ಪ್ರತಿಪಾದನೆಗಳು ಮತ್ತು ಡಿಮಾಂಡ್‌ಗಳು ಹೀಗಿವೆ:

* ರಾಮ್‌ಧಾರಿ ಸಿಂಗ್ ದಿನಕರ್ ಎಂಬ ಹೆಸರಾಂತ ಹಿಂದಿ ಕವಿಯ ಪದ್ಯ ಮಕ್ಕಳನ್ನು ತಪ್ಪುದಾರಿಗೆ ಎಳೆಯುತ್ತದೆ. ಅದನ್ನು ಓದಿದರೆ ಮಕ್ಕಳ ಗುಣನಡತೆ ಹಾಳಾಗುತ್ತದೆ.
* ಅಕ್ಕ ಮಹಾದೇವಿ ಮೇಲಿನ ಪಾಠಕ್ಕೆ ಕತ್ತರಿಪ್ರಯೋಗ ಮಾಡಬೇಕು.
* 19ನೆ ಶತಮಾನದ ಮಹಿಳಾ ಹಕ್ಕು ಕಾರ್ಯಕರ್ತೆ ತಾರಾಬಾಯಿ ಶಿಂಧೆ ಬರೆದಿರುವ ಪುಸ್ತಕದಿಂದ ಉದ್ಧರಿಸಲಾದ ಪಿತೃಪ್ರಾಧಾನ್ಯತೆ ವಿರೋಧಿಸುವ ಪ್ಯಾರಾವನ್ನು ಕಿತ್ತುಹಾಕಬೇಕು.
* ಜಾತಿಪದ್ಧತಿ ಕುರಿತ ಯಾವ ಉ
ಇರಬಾರದು.
* ಅಲ್ಪಸಂಖ್ಯಾತರ ವಿರುದ್ಧ ನಡೆಯುವ ಹಿ
ವಿಷಯ ಇರಬಾರದು.
* ಮನಮೋಹನ ಸಿಂಗ್ 1984ರ ಸಿಖ್ಖ
ಹೋಮಕ್ಕೆ ಕ್ಷಮೆ ಯಾಚಿಸಿದ ವಿಷ
ತೆಗೆದುಹಾಕಬೇಕು.
* ಸುಮಾರು 2000 ಮುಸ್ಲಿಮರನ್ನು ಬಲಿ ತೆ
2002ರ ಗುಜರಾತ್ ಮಾರಣಹ
ವಿಷಯವನ್ನೂ ಕಿತ್ತುತೆಗೆಯಬೇಕು.
* ಸಮುದಾಯವೊಂದನ್ನು ಅಪಮಾನಿಸುವ
• ಕುರಿತು ಚರ್ಚಿಸುವ ಪಠ್ಯಗಳು ಇರಕೂ
* ಸಹಿಷ್ಣುತೆ ಮತ್ತು ಸಮನ್ವಯಗಳನ್ನು
ಮಧ್ಯಯುಗದ ಸೂಫಿ ಸಂತ ಅಮೀರ್
ವಿಷಯವನ್ನು ಕಿತ್ತುಹಾಕಬೇಕು.
* ಹಿಂದೂ ಮತ್ತು ಸಿಖ್ಖರ ಮಧ್ಯೆ ಒಡಕು ವ
ದ್ವೇಷ ಬೆಳೆಸುತ್ತಿರುವ ಶಕ್ತಿಗಳನ್ನು ವಿರೋಧಿ
ಪಂಜಾಬಿ ಕವಿ ಅವತಾರ್ ಸಿಂಗ್ ಪಾಶ್
ಇರಬಾರದು.
* ಕೆಲವು ಉರ್ದು, ಪರ್ಶಿಯನ್, ಅರಬಿ
ಕಿತ್ತು ತೆಗೆಯಬೇಕು.
* ಮಿರ್ಜಾ ಘಾಲಿಬ್ ಪದ್ಯ, ಎಂ.ಎಫ್
ಜೀವನಚರಿತ್ರೆಗಳನ್ನು ತೆಗೆದುಹಾಕಬೇಕು
* ಮುಘಲ್ ಚಕ್ರವರ್ತಿಗಳು ದಯಾಪರರ
ಹಿಂದೂತ್ವ ಸಿದ್ಧಾಂತಕ್ಕೆ ಬದ್ಧ ಎಂಬ ಉ
ಕಿತ್ತುಹಾಕಬೇಕು.

ವಾಸ್ತವದಲ್ಲಿ ಇದೆಲ್ಲವೂ ಮೊಗಲ್ ಆ
ಮರೆಮಾಚಿ/ಭಯಾನಕವೆಂದು ಬಿಂಬಿಸಿ ಇತಿ
ಮರುಬರೆಯುವ ಮೋದಿ ಸರ್ಕಾರದ ಯೋಜನೆ
ಆಗಿದೆ. ಈಗಾಗಲೆ ಮೋದಿಯನ್ನು ಖುಷಿ
ಮುಂದಾಗಿರುವ ಮಹಾರಾಷ್ಟ್ರದ ಬಿಜೆಪಿ ಸರ್ಕಾ
7 ಮತ್ತು 9ನೆ ತರಗತಿಯ ಪಠ್ಯಪುಸ್ತಕಗಳಿಂದ
ಆಳ್ವಿಕೆಯ ವಿಷಯವನ್ನು ಹೆಚ್ಚುಕಮ್ಮಿ ಸಂಪೂ
ಅಳಿಸಿಹಾಕಿದೆ. ಒಟ್ಟಾರೆಯಾಗಿ ಹೇಳುವುದಾದರೆ
ಸಿದ್ಧಾಂತವನ್ನು ವೈಭವೀಕರಿಸುವ, ಮಿಲಿಟರಿ ಶಿಕ್ಷ
ತಿರುಚಿದ ಇತಿಹಾಸ ಬೋಧಿಸುವ ಪಠ
ದೇಶದೆಲ್ಲೆಡೆಯ ಶಿಕ್ಷಣಸಂಸ್ಥೆಗಳಲ್ಲಿ ಜಾರಿಗೊಳ್ಳುವ
ನಿಚ್ಚಳವಾಗಿ ಗೋಚರಿಸುತ್ತಿವೆ. ಈ ಸನ್ನಿವೇಶದ
ಅಫಘಾನಿಸ್ಥಾನದ ವಿದ್ಯಮಾನಗಳತ್ತ ದೃಷ್ಟಿ ಬ
ಲೇಸು.

ಅಫಘಾನಿಸ್ತಾನದ ವಿದ್ಯಮಾನ

ಇಸ್ಲಾಮಿಕ್ ಮೂಲಭೂತವಾದಿ ಸಂಘ
ತಾಲಿಬಾನ್ 90ರ ದಶಕದಲ್ಲಿ ಇಡೀ ಅಫಘಾ
ಆಳುತ್ತಿದ್ದ ವಿಚಾರ ನಮಗೆಲ್ಲರಿಗೂ ತಿಳಿದುದೆ
ಕಾಲದಲ್ಲಿ ತಾಲಿಬಾನಿಗಳು ಅಫಘಾನಿಸ್ಥಾನದ ಎ
ಪಠ್ಯಕ್ರಮವನ್ನೂ ಬದಲಾಯಿಸಿ ತಮ್ಮದೇ ಪ
ಜಾರಿಗೊಳಿಸಿದ್ದರು. ಮುಂದಿನ ತಲೆಮಾರುಗ
ಸಿದ್ಧಾಂತವನ್ನು ಬಿತ್ತುವುದೆ ಅವರ ಏಕೈಕ ಉದ್ದೇ
ಪರಿಣಾಮವಾಗಿ ಶಾಲಾ ಕಾಲೇಜುಗಳಲ್ಲಿ
ಶಿಕ್ಷಣವನ್ನು ನಿಷೇಧಿಸಿ ಧಾರ್ಮಿಕ ಶಿ
ಕಡ್ಡಾಯಗೊಳಿಸಲಾಗಿತ್ತು. ಶಾಲೆಗಳಲ್ಲಿ ಇಂಗ್ಲಿಷ
ಚರಿತ್ರೆ, ಸಮಾಜ ಅಧ್ಯಯನ, ದೈಹಿಕ ಶಿಕ್ಷ
ವಿಷಯಗಳ ಕಲಿಕೆಯನ್ನು ನಿಲ್ಲಿಸಲಾಗಿತ್ತು. ಅವು
ಮಕ್ಕಳಿಗೆ ಧಾರ್ಮಿಕ ವಿಷಯಗಳನ್ನು ಕಲಿಸ
ಶಾಲೆಗಳಲ್ಲಿ ಪ್ರತಿದಿನ ಧಾರ್ಮಿಕ ಹಾಡನ್ನು ಹಾಡಿ
ಕ್ಲಾಸುಗಳು ಪ್ರಾರಂಭವಾಗುತ್ತಿದ್ದವು.
ಹೋರಾಟಗಾರರು ಆಗಾಗ ಬಂದು ಶಾಲೆಗ
ಕಲಿಸಲಾಗುತ್ತಿದೆ, ಮಕ್ಕಳು ಯಾವ ರೀತಿಯ ಉ
ಧರಿಸುತ್ತಾರೆ, ಯಾವ ಕೇಶಶೈಲಿಯನ್ನು ಅನು
ಎಂಬುದನ್ನು ಪರೀಕ್ಷಿಸುತ್ತಾ ಇದ್ದರು.
ಅಫಘಾನಿಸ್ತಾನದಲ್ಲಿ ಹೆಸರಿಗೊಂದು ಸರಕಾರವಿದ
ತಾಲಿಬಾನಿಗಳು ಪುನಃ ತಲೆಯೆತ್ತಿ ದೇ
ಸಕ್ರಿಯವಾಗಿದ್ದಾರೆ. ಅಫಘಾನಿಸ್ತಾನದ ಅನೇಕ
ಇಂದು ತಾಲಿಬಾನ್ ನಿಯಂತ್ರಣಕ್ಕೊಳಗಾಗಿ
ಶಾಲೆಗಳಲ್ಲಿ ಮತ್ತೆ ತಾಲಿಬಾನಿ ಪಠ್ಯಕ್ರಮ ಜಾರಿ
ಅಫಘಾನಿಸ್ಥಾನಕ್ಕೆ ಎಂಥಾ ಘೋರ ಭವಿಷ್ಯ ಕಾದಿ
ಈಗಲೆ ಊಹಿಸಬಹುದು.

ಬಾಮಿಯಾನ್ ಬುದ್ಧನ ವಿಗ್ರಹವನ್ನು ನ
ಇಸ್ಲಾಮಿಕ್ ಮೂಲಭೂತವಾದಿಗಳು ಅಫಘಾ
ನಿರ್ಮಿಸಿರುವ ಪರಿಸ್ಥಿತಿಗೂ ಬಾಬರಿ ಮ
ಧ್ವಂಸಗೊಳಿಸಿದ ಹಿಂದೂ ಮೂಲಭೂತ
ಭಾರತದಲ್ಲಿ ಹುಟ್ಟುಹಾಕುತ್ತಿರುವ ಪರಿಸ್ಥಿತಿಗ
ವ್ಯತ್ಯಾಸವೇನಾದರೂ ಇದೆಯೆ? ಒಂದು ಪಕ್ಷ
ಅಂತಹ ಪರಿಸ್ಥಿತಿಯೊಂದು ನಿರ್ಮಾಣವಾಗಿಬಿ
ಮಕ್ಕಳ ಭವಿಷ್ಯ ಏನಾಗಲಿದೆ? ದೇಶದ ಭವಿಷ್ಯ ಪ

(ಆಧಾರ: ವಯರ್.ಕಾಮ್
ಸಬ್‌ರಂಗ್ ಇಂಡಿಯದಲ್ಲಿ ಶಂಶುಲ
ಲೇಖನ; ಇತರ ಮಾಧ್ಯಮ

ಫಿರಂಗಿ (ಟ್ಯಾಂಕ್) ರಾಷ್ಟ್ರೀಯವಾದ

EPW ಸಂಪಾದಕೀಯ


ಕೃಪೆ: *Economic and Political Weekly*
Aug 5, 2017. Vol. 52. No. 31

■ ಅನು: ಶಿವಸುಂದರ್

ಭಾರತದ ರಾಷ್ಟ್ರೀಯವಾದಿ ಪರಿಕಲ್ಪನೆಗಳಿಗೂ ಮತ್ತು ಸಶಸ್ತ್ರ ಪಡೆಗಳಿಗೂ ನಡುವೆ ಇದ್ದ ಸಂಬಂಧಗಳಲ್ಲಿ ಸ್ಪಷ್ಟವಾದ ಬದಲಾವಣೆಗಳು ಬರುತ್ತಿವೆ.

ಈ ಹಿಂದೆ ಭಾರತೀಯರನ್ನು ...ಕರನ್ನಾಗಿಸುವ ಜವಾಬ್ದಾರಿಯನ್ನು ಬಿಳಿಯರು ... ಮೇಲೆ ತಾವೇ ಹೇರಿಕೊಂಡಿದ್ದರು. ಅದೇರೀತಿ ... ಹಾಲಿ ಕೇಂದ್ರ ಸರ್ಕಾರ ಪ್ರತಿಯೊಬ್ಬ ...ತೀಯನನ್ನು ರಾಷ್ಟ್ರೀಯವಾದಿಯನ್ನಾಗಿ ಮಾಡುವ ...ಬ್ದಾರಿಯನ್ನು ತನ್ನ ಮೇಲೆ ಹೇರಿಕೊಂಡಿದೆ. ... ಹಿಂದೆ ಭಾರತೀಯರು ಎಷ್ಟು ರಾಷ್ಟ್ರೀಯವಾದಿ ...ರಬೇಕಿತ್ತೋ ಅಷ್ಟು ರಾಷ್ಟ್ರೀಯವಾದಿ ...ಲ್ಲವೆಂಬ ತರ್ಕವಿರುವುದು ಸ್ಪಷ್ಟ. ಈ ...ಯನ್ನು ಸಾಧಿಸಲು ಅದು ಅನುಸರಿಸುತ್ತಿರುವ ...ನವೇನೆಂದರೆ ಸಶಸ್ತ್ರಪಡೆಗಳ ಬಗ್ಗೆ ಗೌರವ ಮತ್ತು ...ವನ್ನು ಮೂಡಿಸುವುದು. ಭಾರತದ ಸೈನ್ಯದ ...ಖ್ಯಸ್ಥರಾದ ಬಿಪಿನ್ ರಾವತ್ ಅವರು ಹೇಳಿದಂತೆ ... ನಮ್ಮನ್ನು ಕಂಡರೆ ಭಯಪಡಬೇಕು. ಇದು ...ತದ ರಾಷ್ಟ್ರೀಯವಾದಿ ಪರಿಕಲ್ಪನೆಗಳಿಗೂ ಮತ್ತು ...ಪಡೆಗಳಿಗೂ ನಡುವೆ ಇದ್ದ ಸಂಬಂಧಗಳಲ್ಲಿ ...ವಾದ ಬದಲಾವಣೆಯನ್ನು ಸೂಚಿಸುತ್ತದೆ. ...ರೆಂದರೆ ದೇಶದ ರಕ್ಷಣೆ ಮಾಡಲು ಸಾರ್ವಜನಿಕರ ...ದಿಂದ ವೇತನ ಪಡೆಯುವ ಸಾರ್ವಜನಿಕ ...ರೆಂಬ ಚಿತ್ರಣವು ಮಾಯವಾಗುತ್ತ ...ಯತೆಯ ಬಗ್ಗೆ ನಾಗರಿಕರಿಗೆ ಪಾಠ ಕಲಿಸುವ ...ರೆಂಬ ಚಿತ್ರಣ ರೂಪು ಪಡೆಯುತ್ತಿದೆ.

...ಸೈನ್ಯದ ಆರಾಧನೆಯ ಇತ್ತೀಚಿನ ...ಹರಣೆಯೆಂದರೆ ಜವಹರಲಾಲ್ ನೆಹರೂ ...ವಿದ್ಯಾಲಯ(ಜೆಎನ್ಯು)ದ ಉಪಕುಲಪತಿ ಎಮ್. ...ಶ್ ಕುಮಾರ್ ಅವರು ತಮ್ಮ ...ವಿದ್ಯಾಲಯದ ಆವರಣದಲ್ಲಿ ಭಾರತೀಯ ಸೈನ್ಯದ ...ರ್ (ಫಿರಂಗಿ) ಒಂದನ್ನು ಪ್ರದರ್ಶನಕ್ಕಿಡಲು ... ಬರೆದಿರುವ ಪತ್ರ. ವಿಶ್ವವಿದ್ಯಾಲಯದ ...ಖ ಸ್ಥಳವೊಂದರಲ್ಲಿ ಭಾರತೀಯ ಸೈನ್ಯದ ...ರ್ ಒಂದನ್ನು ಪ್ರತಿಷ್ಠಾಪಿಸುವ ಮೂಲಕ ...ರ್ಥಿಗಳಲ್ಲಿ ರಾಷ್ಟ್ರೀಯತೆಯ ಭಾವನೆಯನ್ನೂ ... ಭಾರತೀಯ ಸೈನ್ಯವು ಮಾಡಿರುವ ಅಮೋಘ ...ಳನ್ನು ಮತ್ತು ತೋರಿದ ಶೌರ್ಯಗಳನ್ನು ಸದಾ ...ನೆಗೊಳಿಸಲು ಅವರು ಬಯಸಿದ್ದಾರೆ. ಈ ...ಯನ್ನು ಅವರು ಜೆಎನ್‌ಯು ...ವಿದ್ಯಾಲಯದಲ್ಲಿ ಪ್ರಪ್ರಥಮ ಬಾರಿಗೆ ನಡೆಸಲಾದ ...ಲ್ ವಿಜಯ ದಿನದ ಸಮಾರಂಭಕ್ಕೆ ಆಗಮಿಸಿದ್ದ ...ದ ಮಂತ್ರಿಗಳಾದ ವಿ.ಕೆ. ಸಿಂಗ್ ಮತ್ತು ...ೇಂದ್ರ ಪ್ರಧಾನ್ ಅವರಿಗೆ ಸಲ್ಲಿಸಿದರು. ಈ ಯೋಜನೆಯು ಜೆಎನ್‌ಯುವಿನ ವಿಚ್ಛಿದ್ರಕಾರಿ-ದೇಶದ್ರೋಹಿ ಮನೋಭಾವದ ವಿದ್ಯಾರ್ಥಿಗಳನ್ನು ದೇಶಭಕ್ತರನ್ನಾಗಿ ಮಾಡಲು ಕೈಗೊಂಡಿರುವ ಸರಣಿ ಕಾರ್ಯಕ್ರಮಗಳ ಭಾಗವಾಗಿದೆ. ಒಂದು ವರ್ಷದ ಕೆಳಗೆ ಕೇಂದ್ರದ ಅಂದಿನ ಮಾನವ ಸಂಪನ್ಮೂಲ ಮಂತ್ರಿಗಳಾಗಿದ್ದ ಸ್ಮೃತಿ ಇರಾನಿಯವರು ಎಲ್ಲಾ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲೂ ದೊಡ್ಡ ದೊಡ್ಡ ರಾಷ್ಟ್ರಧ್ವಜಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದ್ದರು. ಆದರೆ ಅಂಥ ಒಂದು ರಾಷ್ಟ್ರ ಧ್ವಜವು ಜೆಎನ್‌ಯುನಲ್ಲಿ ಬಹಳ ವರ್ಷಗಳಿಂದಲೂ ಹಾರಾಡುತ್ತಿದೆಯೆಂದು ನಂತರ ಅವರಿಗೆ ಗೊತ್ತಾಯಿತು. ಇದರಿಂದ ನಿರಾಶರಾದ ಅವರು ಸೈನ್ಯದ ಅಧಿಕಾರಿಗಳನ್ನು ಕರೆಸಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ದೇಶಭಕ್ತಿಯ ಪಾಠ ಮಾಡಿಸುವ ಮತ್ತೊಂದು ಯೋಜನೆಯನ್ನು ಮುಂದಿಟ್ಟರು. ಆದರೆ



ಆಕೆಯ ದುರದೃಷ್ಟ. ಅವರ ಖಾತೆಯೇ ಬದಲಾವಣೆಯಾಗಿ ತಮ್ಮ ಎಲ್ಲಾ ಗಮನವನ್ನು ಜವಳಿ ಕ್ಷೇತ್ರದ ಮೇಲೆ ಕೇಂದ್ರೀಕರಿಸುವಂತೆ ಅವರಿಗೆ ಸೂಚಿಸಲಾಯಿತು.

ಈ ಸರ್ಕಾರಕ್ಕೆ ಒಂದು ಸಮಾಜದಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಉದ್ದೇಶವೇನು ಎಂಬುದರ ಬಗ್ಗೆ ಕಿಂಚಿತ್ತೂ ತಿಳಿವಳಿಕೆ ಇದ್ದಂತೆ ಕಾಣುತ್ತಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅದೇನೇ ಇದ್ದರೂ ಸೈನಿಕರನ್ನು ಧರೆಗಿಳಿದು ಬಂದಿರುವ ದೇವತೆಗಳಂತೆ ಪರಿಗಣಿಸುವಂತಹ ರೀತಿಯಲ್ಲಿ ನಡೆಯುತ್ತಿರುವ ಬದಲಾವಣೆಗಳು ಮಾತ್ರ ಇನ್ನೂ ಹೆಚ್ಚು ಗಾಬರಿ ಮೂಡಿಸುವಂತಿದೆ. ಈ ಬೆಳವಣಿಗೆಯು ಹೀಗೆ ಮುಂದುವರೆದರೆ ಪ್ರಜಾತಾಂತ್ರಿಕ ಸಂಸ್ಥೆಗಳನ್ನೇ ಅಪಾಯಕ್ಕೊಡ್ಡಬಹುದು.


ಸೈನಿಕರನ್ನು ದೇಶಪ್ರೇಮದ ರೂಪಕವನ್ನಾಗಿಸುವುದು ಹೊಸತೇನಲ್ಲ. ಆದರೆ ವಸಾಹತುಶಾಹಿ ವಿರೋಧಿ ಹೋರಾಟಗಳ ಮೂಲವನ್ನು ಹೊಂದಿರುವ ಭಾರತೀಯ ರಾಷ್ಟ್ರೀಯವಾದವು ವಸಾಹತು ಆಡಳಿತದ ಬಲುವಳಿಯಾಗಿ ಮುಂದುವರೆದ ಸಶಸ್ತ್ರಪಡೆಗಳ ಜೊತೆಗೆ ಅಂಥಾ ಆಪ್ತ ಸಂಬಂಧವನ್ನೇನೂ ಹೊಂದಿರಲಿಲ್ಲ. ಸ್ವಾತಂತ್ರ್ಯ ಪಡೆದ ನಂತರದ ಪ್ರಾರಂಭಿಕ ವರ್ಷಗಳಲ್ಲಂತೂ ಸೈನ್ಯವನ್ನು ಕಠಿಣ ನಾಗರಿಕ ನಿಯಂತ್ರಣಕ್ಕೊಳಪಟ್ಟ ವೃತ್ತಿಪರ ಪಡೆಯೆಂದೇ ಪರಿಗಣಿಸಲಾಗಿತ್ತು. ಒಬ್ಬ ಆದರ್ಶ ರಾಷ್ಟ್ರೀಯವಾದಿಯೆಂದರೆ ಒಂದೋ ಖಾದಿಧಾರಿ ಸತ್ಯಾಗ್ರಹಿ ಅಥವಾ ಸಾವಿಗೂ ಹೆದರದ ಕ್ರಾಂತಿಕಾರಿಯೆಂಬ ಚಿತ್ರಣವೇ ಪ್ರಧಾನವಾಗಿತ್ತು. ಇಂದು ಅವೆರಡೂ ಸ್ಥಾನವನ್ನು ಸೈನಿಕ ಆಕ್ರಮಿಸಿದ್ದಾನೆ. 1965ರಲ್ಲಿ ಭಾರತ-ಪಾಕಿಸ್ತಾನದ ಯುದ್ಧದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಜೈ ಜವಾನ್- ಜೈ ಕಿಸಾನ್ ಎಂಬ ಘೋಷಣೆಯನ್ನು ಹುಟ್ಟುಹಾಕಿದರು. ಅದರ ಉದ್ದೇಶ 1962ರ ಚೀನಾ-ಭಾರತ ಯುದ್ಧದಿಂದಾಗಿ ಸ್ಥೈರ್ಯಗೆಟ್ಟಿದ್ದ ಸೈನ್ಯದಲ್ಲಿ ಉತ್ಸಾಹ ತುಂಬುವುದಾಗಿತ್ತು. ಆದರೆ ಅದರಲ್ಲೂ ಹೆಗಲಿಗೆ ಹೆಗಲಾಗಿ ನಿಂತ ರೈತ ಮತ್ತು ಸೈನಿಕರಿಬ್ಬರೂ ಆದರ್ಶ ರಾಷ್ಟ್ರ ಸೇವಕರೆಂಬ ಚಿತ್ರಣವೇ ಇತ್ತು. ನಂತರ ಪ್ರಧಾನ ಮಂತ್ರಿ ವಾಜಪೇಯಿ ಅವರು ಆ ಘೋಷಣೆಯನ್ನು ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್ ಎಂದು ವಿಸ್ತರಿಸುವ ವೇಳೆಗೆ ಭಾರತ ರಾಷ್ಟ್ರೀಯವಾದವು ಉನ್ಮತ್ತ ಸೈನ್ಯವಾದದೊಂದಿಗೆ ಬೆರೆತುಹೋಗಿತ್ತು. 1998ರಲ್ಲಿ ನಡೆಸಲಾದ ಪೋಕ್ರಾನ್ ಅಣುಸ್ಫೋಟವು ಅದಕ್ಕೆ ಅಗತ್ಯವಿದ್ದ ಸಂದರ್ಭವನ್ನು ಒದಗಿಸಿತ್ತು ಹಾಗೂ ಭಾರತವು ಒಂದು ಅಣ್ವಸ್ತ್ರ ಸಜ್ಜಿತ ರಾಷ್ಟ್ರವಾಗಿ ಉಗಮಗೊಂಡಿದೆಯೆಂಬ ಗರ್ವವೂ ಅದರೊಂದಿಗೆ ಸೇರಿಕೊಂಡಿತು. ಈ ಎರಡೂ ಘೋಷಣೆಗಳ ಕಾಲಾವಧಿಯ ನಡುವೆ 1971ರಲ್ಲಿ ಮತ್ತೊಂದು ಯುದ್ಧ ನಡೆದಿತ್ತು. ಹಾಗೂ 1974ರಲ್ಲಿ ಪ್ರಪ್ರಥಮ ಭಾರತೀಯ ಅಣ್ವಸ್ತ್ರ ಪರೀಕ್ಷೆಯನ್ನೂ ನಡೆಸಲಾಗಿತ್ತು. ಆದರೆ 1990ರ ಕೊನೆಯ ಭಾಗದಲ್ಲಾಗಲೇ ಶಾಂತಿ ಮತ್ತು ನಿಶ್ಶಸ್ತ್ರೀಕರಣದ ಬಗ್ಗೆ ಭಾರತದ ತೋರಿಕೆಯ ಬದ್ಧತೆಯ ಮಾತುಗಳು ಕೊನೆಗೊಂಡಿದ್ದವು. ಹೀಗಾಗಿ 1999ರ ಕಾರ್ಗಿಲ್ ಯುದ್ಧದ ಸ್ಮರಣೆಯ ಸಂದರ್ಭದಲ್ಲಿ ಸೈನ್ಯದ ಫಿರಂಗಿಯನ್ನು ಶೈಕ್ಷಣಿಕ ಸಾಧನವನ್ನಾಗಿ ಬಳಸ ಬೇಕೆಂಬ ಆಲೋಚನೆ ಮೂಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಇಂದು ಸೈನ್ಯಾಧಿಕಾರಿಗಳೇ ಆದರ್ಶ ರಾಷ್ಟ್ರೀಯವಾದಿಗಳೆಂದು ಸಂಭ್ರಮಿಸುತ್ತಿರುವ ಹೊತ್ತಿನಲ್ಲೇ ಸಶಸ್ತ್ರಪಡೆಗಳ ಕಾರ್ಯನಿರ್ವಹಣೆಯಲ್ಲಿ ರಾಜಕೀಯ ಮಧ್ಯಪ್ರವೇಶವೂ ಹೆಚ್ಚಾಗುತ್ತಿದೆ. ಇಬ್ಬರು ಹಿರಿಯ ಅಧಿಕಾರಿಗಳ ಸೇವಾಹಿರಿತನವನ್ನು ಕಡೆಗಣಿಸಿ ಇಂದಿನ ಸೇನಾ ಮುಖ್ಯಸ್ಥರಾದ ಬಿಪಿನ್ ರಾವತ್ ಅವರಿಗೆ ಆ ಪದವಿಯನ್ನು ನೀಡಲಾಗಿದೆ. ಈ ಹಿಂದೆ ಇಂದಿರಾ ಗಾಂಧಿಯವರ ಕಾಲದಲ್ಲೂ ಸೇವಾಹಿರಿತನವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಅರುಣ್ ವೈದ್ಯ ಅವರಿಗೆ ಇದೇ ಸ್ಥಾನವನ್ನು ನೀಡಲಾಗಿತ್ತು. ಹೀಗಾಗಿ ಸೇವಾ ಹಿರಿತನದ ಕಡೆಗಣನೆಯಲ್ಲಿ ಹೊಸತಿಲ್ಲ. ಆದರೆ ಹಾಲೀ ಸೇನಾ ಮುಖ್ಯಸ್ಥರು ಯಾವುದೇ ನಿಯಂತ್ರಣಕ್ಕೊಳಪಡದೇ ಎಂಥದ್ದೇ ಸಾರ್ವಜನಿಕ ಘೋಷಣೆ ಮತ್ತು ಹೇಳಿಕೆಗಳನ್ನು ನೀಡಲು ಕೊಟ್ಟಿರುವ ಸ್ವಾತಂತ್ರ್ಯವನ್ನು ಮಾತ್ರ ಹಿಂದೆಂದೂ ಯಾವ ಸೇನಾ ಮುಖ್ಯಸ್ಥರಿಗೂ ಕೊಟ್ಟಿರಲಿಲ್ಲ. ಉದಾಹರಣೆಗೆ ಕಾಶ್ಮೀರದಲ್ಲಿ ಸೇನಾ ತುಕಡಿಯೊಂದು ತನ್ನ ಜೀಪಿನ ಮುಂದೆ ಕಾಶ್ಮೀರಿಯೊಬ್ಬನನ್ನು ಕಟ್ಟಿಹಾಕಿ ಮಾನವ ಗುರಾಣಿಯನ್ನಾಗಿ ಬಳಸಿಕೊಂಡಿದ್ದನ್ನು ಸಮರ್ಥಿಸಿಕೊಂಡು ಅವರು ನೀಡಿದ ಆಘಾತಕಾರಿ ಹೇಳಿಕೆಗೆ ಯಾರೂ ಯಾವ ವಾಗ್ದಂಡನೆಯನ್ನೂ ವಿಧಿಸಲಿಲ್ಲ. ವಿಪರ್ಯಾಸವೆಂದರೆ ಅವರ ಹೇಳಿಕೆಯನ್ನು ಖಂಡಿಸಿದ ಸಾರ್ವಜನಿಕರು ರಾಷ್ಟ್ರ ವಿರೋಧಿಗಳೆಂಬ ಆರೋಪಕ್ಕೆ ಗುರಿಯಾಗಬೇಕಾಯಿತು.

ಉತ್ತರ ಬಂಗಾಳ ವಿಶ್ವವಿದ್ಯಾಲಯದ ಆವರಣದಲ್ಲಿ ಕಳೆದ 40 ವರ್ಷಗಳಿಂದಲೂ ಒಂದು ಸೇನಾ ಫಿರಂಗಿ ಇದೆ. ಆದರೆ ಅದು ಬೇರೊಂದು ವಿದ್ಯಮಾನದ ರೂಪಕ ವಾಗಿದೆ. ಅದು ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲಿ ಭಾರತ ಸೇನೆಯು ವಶಪಡಿಸಿಕೊಂಡ ಪಾಕಿಸ್ತಾನದ ಟ್ಯಾಂಕರ್. ಅದು ಬಾಹ್ಯ ಶತ್ರುವಿನ ವಿರುದ್ಧದ ಭಾರತದ ಸೇನಾ ವಿಜಯವನ್ನು ಸಂಕೇತಿಸುತ್ತದೆ. ಆದರೆ ಜೆಎನ್‌ಯುವಿನ ಉಪಕುಲಪತಿಯು ವಿಶ್ವವಿದ್ಯಾಲಯದ ಆವರಣದಲ್ಲಿ ಭಾರತೀಯ ಸೇನಾಪಡೆಯ ಟ್ಯಾಂಕರ್ ಒಂದನ್ನು ಸ್ಥಾಪಿಸಬೇಕೆಂದು ಕೋರುತ್ತಿದ್ದಾರೆ. ಕಾರಣ ವೇನೆಂದರೆ ಆ ವಿಶ್ವವಿದ್ಯಾಲಯವು ರಾಷ್ಟ್ರದ್ರೋಹಿಗಳ ಅಡ್ಡೆಯಾಗಿದೆ ಯೆಂದು ಕೆಲವು ಸ್ವಘೋಷಿತ ರಾಷ್ಟ್ರೀಯವಾದಿಗಳು ಮಾಡಿರುವ ಆರೋಪ. ಇಂಥಾ ಒಂದು ವಿದ್ಯಮಾನದ ಪರಿಣಾಮ ವೇನಾಗುತ್ತದೆ ಎಂಬ ಬಗ್ಗೆ ಯಾರಿಗಾದರೂ ಅನುಮಾನ ವಿದ್ದರೆ ಅವರು ಆ ಕಾರ್ಗಿಲ್ ಯುದ್ಧದ ಸ್ಮರಣೆ ಸಮಾರಂಭದಲ್ಲಿ ಇತರರು ಮಾಡಿದ ಭಾಷಣವನ್ನು ಗಮನಿಸಬಹುದು.

ಆ ಸಮಾರಂಭದಲ್ಲಿ ಮಾತನಾಡಿದ ಖ್ಯಾತ ಕ್ರಿಕೆಟಿಗ ಗೌತಮ್ ಗಂಭೀರ್ ಅವರು ನಾಗರಿಕರಿಗೆ ಸೇನೆಯನ್ನು ಪ್ರಶ್ನಿಸುವ ಹಕ್ಕಿಲ್ಲ ಎಂದು ಘೋಷಿಸಿದರು. ಮತ್ತೊಬ್ಬ ಭಾಷಣಕಾರರಾದ ಖ್ಯಾತ ಬರಹಗಾರ ರಾಜೀವ್ ಮಲ್ಹೋತ್ರಾ ಅವರು ಈ ಸಮಾರಂಭವು ಕೇವಲ ಬಾಹ್ಯ ಯುದ್ಧದಲ್ಲಿ ಕಾರ್ಗಿಲ್ ಅನ್ನು ಮರಳಿ ಗೆದ್ದುಕೊಂಡ ಸ್ಮರಣೆ ಸಮಾರಂಭ ಮಾತ್ರವಲ್ಲ. ಬದಲಿಗೆ ಆಂತರಿಕ ಯುದ್ಧದಲ್ಲಿ ಜೆಎನ್‌ಯು ಮರಳಿ ವಶಪಡಿಸಿಕೊಳ್ಳುತ್ತಿರುವ ಸಮಾರಂಭವೂ ಆಗಿದೆ ಎಂದು ವ್ಯಾಖ್ಯಾನಿಸಿದರು. ನಿವೃತ್ತ ಸೇನಾಧಿಕಾರಿ ಜಿ.ಡಿ. ಭಕ್ಷಿಯವರಂತೂ ನಾವು ಜೆಎನ್‌ಯುವನ್ನು ಗೆದ್ದುಕೊಂಡಿದ್ದಕ್ಕೆ ಮಾತ್ರ ಸಂತೃಪ್ತಿಪಡದೆ ಹೈದರಾಬಾದ್ ಮತ್ತು ಜಾಧವ್ಪುರ್ ವಿಶ್ವವಿದ್ಯಾಲಯದ ಕೋಟೆಗಳನ್ನೂ ವಶಪಡಿಸಿಕೊಳ್ಳಲು ಸಮರ ಸಾರಬೇಕೆಂದು ಅಬ್ಬರಿಸಿದರು. ಇವು ಒಬ್ಬ ಉಪಕುಲಪತಿಗಳ ಉಪಸ್ಥಿತಿಯಲ್ಲಿ ಒಂದು ಸಾರ್ವಜನಿಕ ಕಾರ್ಯಕ್ರಮದಲ್ಲಿ ಆಡಿದ ಮಾತುಗಳು. ಹಾಲೀ ಆಡಳಿತದಡಿ ಸೈನಿಕತ್ವದ ವಿಜೃಂಭಣೆಗಳು ಮತ್ತು ಅದು ಮಾತ್ರ ರಾಷ್ಟ್ರೀಯವಾದದ ಅತ್ಯುನ್ನತ ದ್ಯೋತಕವೆಂಬ ರಾಜಕೀಯ ದಿನೇದಿನೇ ಹೆಚ್ಚುತ್ತಿರುವುದು ಸ್ಪಷ್ಟವಾಗುತ್ತಿದೆ. ■

ಕನಸಿನಲ್ಲಿ ಕನ್ನಯ್ಯ ಕುಮಾರ್



2017ನೇ ಆಗಸ್ಟ್ 5 ಮತ್ತು 6 ರಂದು ಎರಡು ದಿನ ಬೆಂಗಳೂರಿನ ಶಿಕ್ಷಕರ ಸದನದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಹೋರಾಟಗಳ ರಾಷ್ಟ್ರೀಯ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು, ದೇಶದ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಎಲ್ಲಾ ಸಮಾನ ಮನಸ್ಕ ವಿದ್ಯಾರ್ಥಿ ಸ್ನೇಹಿತರೆಲ್ಲಾ ಅಲ್ಲಿ ಸೇರಿದ್ದರು. ಅದರ ಮುಖ್ಯ ಆಶಯ ವಿದ್ಯಾರ್ಥಿ ಹೋರಾಟಗಳ ಹೊಸ ಅಲೆಯನ್ನು ಬೆಸೆಯುವುದು.

ಇದಕ್ಕಾಗಿ ದೇಶದ ನಾನಾ ಕಾಲೇಜು ಮತ್ತು ವಿ.ವಿ.ಗಳಿಂದ ವಿದ್ಯಾರ್ಥಿಗಳು ಆಗಮಿಸಿದ್ದರು. ಸಿಟಿ ರೈಲ್ವೆ ನಿಲ್ದಾಣದಿಂದ ಕಾವೇರಿ ಭವನದವರೆಗೆ ಬೆಳಗ್ಗೆ ರ್‍ಯಾಲಿ ಆರಂಭವಾಯಿತು.

ನೂರಾರು ಯುವಜನರು ಜೊತೆಗೂಡಿ ಹೆಜ್ಜೆ ಹಾಕಿದರು. ಅವರೊಂದಿಗೆ ನಾವೂ ಕೆಲವು ಹಿರಿಯರೂ ಸಹ ಹೆಜ್ಜೆ ಹಾಕಿದೆವು. ಇದು ಫ್ಯಾಸಿಸಮ್ ಕಾರ್ಪೋರೇಟ್ ಶಕ್ತಿಗಳನ್ನು ಉತ್ತೇಜಿಸುವ ಕಾಲ. ರ್‍ಯಾಲಿಗೆ ಚಾಲನೆ ಕೊಟ್ಟ ಜೆಎನ್‌ಯು ವಿದ್ಯಾರ್ಥಿ ಮುಖಂಡ ಕನ್ಹಯ್ಯ ಕುಮಾರ್ “ಒಂದು ದೇಶ ಒಂದು ತೆರಿಗೆ ಇದ್ದಂತೆ ಒಂದು ದೇಶ ಒಂದು ಶಿಕ್ಷಣ ನೀತಿ ಭಾರತದಲ್ಲಿ ಏಕಿಲ್ಲ?” ಎಂದು ಪ್ರಶ್ನಿಸಿದರು.


ಕನ್ಹಯ್ಯ ಗೌರಿ ಲಂಕೇಶರ ಮಾನಸ ಪುತ್ರ. ಈತನನ್ನು ಒಮ್ಮೆ ನೋಡಬೇಕೆಂಬ ಆಶೆಯಿಂದ ಈ ಸಮಾವೇಶಕ್ಕೆ ನಾನು ಹೋಗಿದ್ದು. ಗೌರಿ ಅವರ ಜೊತೆ ಕುಳಿತಿದ್ದ ಕನ್ಹಯ್ಯನನ್ನು ಕಂಡು “ನಿನ್ನನ್ನು ಭೇಟಿ ಆಗಿದ್ದಕ್ಕೆ ತುಂಬಾ ಸಂತೋಷವಾಗುತ್ತಿದೆ” ಎಂದು ಆತನ ಕೈ ಕುಲುಕಿದೆ.

ಆ ದಿನದ ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದು ಮಿರ್ಜಾ ಗಾಲಿಬ್‌ನ ಬಗ್ಗೆ ಪವನ್ ಕೆ ವರ್ಮ ಅವರು ಬರೆದಿರುವ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುಸ್ತಕವನ್ನು ಓದಿ ಸುಮಾರು ಹನ್ನೊಂದು ಗಂಟೆಗೆ ನಿದ್ದೆ ಮಾಡಿದೆ. ಬೆಳಗ್ಗೆ ನಾಲ್ಕು ಗಂಟೆ ಸುಮಾರಿಗೆ ಒಂದು ಕನಸು ಬಿತ್ತು.

ಆ ಕನಸಿನಲ್ಲಿ ನಾನು ಕನ್ಹಯ್ಯನನ್ನು ನೋಡಲು ರೈಲ್ವೆ ಸ್ಟೇಷನ್ನಿಗೆ ಹೋಗಿದ್ದೇನೆ. ಆತ ಚಪಾತಿ ತಿನ್ನುತ್ತಿದ್ದಾನೆ. ನನ್ನನ್ನು ಕಂಡು ಇದ್ದ ಒಂದೇ ಒಂದು ಚಪಾತಿಯಲ್ಲಿ ನನಗೂ ಅರ್ಧ ಕೊಡಲು ಬಂದಿದ್ದಾನೆ. ನಾನು “ಬೇಡಪ್ಪ ನನಗೂ ಊಟ ಆಯಿತು. ನೀನೇ ತಿನ್ನು, ನಿನ್ನನ್ನು ಕಂಡದ್ದೇ ಊಟ ಮಾಡಿದಷ್ಟು ಸಂತೋಷವಾಯಿತು” ಎಂದು ಹೇಳುತ್ತಿದ್ದೆ. ಅಷ್ಟರಲ್ಲಿ ರೈಲು ಹೊರಡುವ ಸಿಗ್ನಲ್ ಕೇಳಿ ಬಂತು. ನನಗೂ ಎಚ್ಚರವಾಯಿತು! ಕಣ್ಣು ತೆರೆದೆ.

ಇದೇ ಕನ್ಹಯ್ಯ ಕುಮಾರ್ ಕಳೆದ ವರ್ಷ ಜೆಎನ್‌ಯುನಲ್ಲಿ ಮಾಡಿದ ಭಾಷಣವನ್ನು ಗೌರಿ ಲಂಕೇಶ್ ಪತ್ರಿಕೆಯಲ್ಲಿ ಓದಿ, ಭವಿಷ್ಯದ ಭರವಸೆಯ ಈ ಯುವಕನನ್ನು ಕುರಿತು ಪುರಾಣದ ಕರ್ಣನಿಗೆ ಹೋಲಿಸಿ ಒಂದು ಕವನವನ್ನು ಬರೆದಿದ್ದೆ. ಅದು ಗೌರಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು.

■ ಪ್ರೊ. ಶಿವರಾಮಯ್ಯ



ಇದು ಶಿವಯೋಗ ಮಂದಿರದ ಸಂಸ್ಕೃತಿಯೇ ಸ್ವಾಮಿಗಳೆ?



ಆಗಸ್ಟ್ 5, 2017 ರಂದು ರಾಮದುರ್ಗ ತಾಲೂಕಿನ ಗೊಡಚಿಯ ಮಡಿವಾಳ ಮಾಚಿದೇವರು ಐಕ್ಯವಾದ ಪವಿತ್ರ ಸ್ಥಾನದಲ್ಲಿ ಗುರು ವಿರಕ್ತರ ಸಮಾವೇಶವೆಂದು ವೀರಶೈವ ಲಿಂಗಾಯತ ಒಂದೇ ಎಂದು ಹೇಳುವ ಬಹುತೇಕ ಪಂಚಾಚಾರ್ಯರ ಪತಾಕೆ ಹಿಡಿದು ಅನೇಕ ಸ್ವಾಮಿಗಳು ಮನಬಂದಂತೆ ಬಾಯಿ ಹರಿಬಿಟ್ಟಿದ್ದಾರೆ. ಡಾ ಮಾತೆ ಮಹಾದೇವಿ ಅವರ ಬಗ್ಗೆ ಅತ್ಯಂತ ಅಸಡ್ಡೆ ಮತ್ತು ಅವಹೇಳನಕಾರಿ ಮಾತುಗಳನ್ನು ಆಡಿದ್ದಾರೆ. ಮಾನವೀಯ ಮೌಲ್ಯಗಳನ್ನು ಮರೆತು ಅನಾಗರಿಕ ಭಾಷೆಯಲ್ಲಿ ಮಾತಾಜಿಯವರನ್ನು ಮುದುಕಿ ಎಂತಲೂ, ಅನೇಕ ವಿರಕ್ತ ಮಠಾಧೀಶರು ಮಾತಾಜಿಯ (ಮುದುಕಿಯ) ಸೆರಗು ಹಿಡಿದುಕೊಂಡು ಹೋಗುತ್ತಾರೆ ಎಂತಲೂ ಟೀಕಿಸಿದ್ದಾರೆ. ಅಷ್ಟೇ ಅಲ್ಲ, ಹಾನಗಲ್ಲ ಗುರು ಕುಮಾರ ಸ್ವಾಮಿಗಳ ಬಗ್ಗೆ ಮಾತಾಜಿಯಾಗಲಿ ಇತರ ಯಾರೇ ಆಗಲಿ ಇಲ್ಲಸಲ್ಲದ್ದನ್ನು ಮಾತನಾಡಿದರೆ ಅವರನ್ನು ವೇದಿಕೆಯ ಮೇಲೆ ಹೋಗಿ ಹೊಡೆಯುವ ಸಾಮರ್ಥ್ಯವನ್ನು ದೇವರು ಕೊಡಲಿ ಎಂದು ನಾಚಿಕೆ ಬಿಟ್ಟು ಕೇಳಿಕೊಂಡಿದ್ದಾರೆ. ಇದುವೆನಾ ಶಿವಯೋಗ ಮಂದಿರದ ಸಂಸ್ಕೃತಿ? ಇದೇನಾ ಗುರು ಹಾನಗಲ್ಲ ಕುಮಾರ ಸ್ವಾಮಿಗಳ ಕಲಿಸಿದ ನೀತಿ ಪಾಠ?

ಲಿಂಗೈಕ್ಯ ಲಿಂಗಾನಂದ ಸ್ವಾಮಿಗಳು ಹಾಗೂ ಮಾತಾಜಿಯವರು ಬಸವ ಭಕ್ತಿಯನ್ನು ನಾಡಿನಲ್ಲಿ ಪಸರಿಸಿದ್ದಾರೆ. ತಾತ್ವಿಕ ಭಿನ್ನತೆ ಬಗ್ಗೆ ಆರೋಗ್ಯಪೂರ್ಣ ಚರ್ಚೆ ಬಿಟ್ಟು ಇಂತಹ ಉಡಾಫೆ ಮಾತುಗಳನ್ನು ಆಡಿದರೆ ಎಚ್ಚರ. ಬಸವ ಭಕ್ತರು ಸಹಿಸರು.

ಇಲ್ಲಿಯವರೆಗೆ 'ಬಸವಣ್ಣ' ಎನ್ನದ ವಿರಕ್ತ ಗುರು ಪೀಠದ ಸ್ವಾಮಿಗಳಿಗೆ ಈಗ ಒಮ್ಮೆಲೇ ಬಸವಣ್ಣನವರ ಮೇಲೆ ಅಪಾರವಾದ ಭಕ್ತಿ ಬಂದಿತೆ?

ಜವಾಬ್ದಾರಿಯುತ ಸ್ಥಾನದಲ್ಲಿರುವವರು ಸ್ವಾಮಿಗಳು. ಹಾಗಿರುವಾಗ ಒಬ್ಬ ವಿರಕ್ತ ಮಠಾಧೀಶ ಹೀಗೆ ಅಸಡ್ಡೆ ಮಾತನಾಡಿರುವುದು ಆತನ ನಾಲಿಗೆಯ ಸಂಸ್ಕೃತಿ ಹೇಳಿಕೊಡುತ್ತದೆ. ಯಾರಾದರೂ ಆ ಸ್ವಾಮಿ ಯಾರೆಂದು ಗುರುತಿಸಿ ತಿಳಿಸಿದರೆ ಇನ್ನೊಮ್ಮೆ ಹೀಗೆ ಲಜ್ಜೆಗೆಟ್ಟು ಮಾತನಾಡುವ ಹತಾಶ ಮನಸ್ಸನ್ನು ಹತೋಟಿಯಲ್ಲಿ ಇಡಲು ಎಚ್ಚರಿಸೋಣ.

- ಡಾ. ಶಶಿಕಾಂತ ಪಟ್ಟಣ, ರಾಮದುರ್ಗ

ಕಮಲ್ ಹಾಸನ್ ಮಗಳು ಮತ್ತು ಬೌದ್ಧ ಧರ್ಮ

ಕಮಲ್ ಹಾಸನ್ ಮಗಳು ಅಕ್ಷರ ಹಾಸನ್ 'ನಾಸ್ತಿಕಳಾಗಿದ್ದರೂ ಬೌದ್ಧ ಧರ್ಮ ಸೇರಿದಳು' ಎಂದು ಪತ್ರಿಕೆಗಳು ಸುದ್ದಿ ಮಾಡಿವೆ. ಮೂಲತಃ ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು 'ನಾಸ್ತಿಕ' ಧರ್ಮಗಳೇ ಆಗಿವೆ. ಹಾಗಾಗಿ ಅವುಗಳಿಗೆ 'ಎಥಿಕಲ್ ರಿಲೀಜನ್ಸ್' ಎಂದು ಕರೆಯುತ್ತಾರೆ. ಅಂದರೆ ಬೇರೆ ಎಲ್ಲಾ ಧರ್ಮಗಳು 'ದೈವ ಕೇಂದ್ರಿತ' (ಗಾಡ್ ಸೆಂಟ್ರಿಕ್) ಧರ್ಮಗಳಾದರೆ ಬೌದ್ಧ ಧರ್ಮ ಮಾತ್ರ 'ನೀತಿ-ತತ್ವ ಕೇಂದ್ರಿತ' (ಎಥಿಕ್ಸ್ ಸೆಂಟ್ರಿಕ್) ಧರ್ಮವಾಗಿದೆ.

ಬೌದ್ಧ ಧರ್ಮ 'ಕರ್ಮ ಸಿದ್ಧಾಂತ'ದಲ್ಲಿ ಅಂದರೆ 'ಶುದ್ಧ ಜೀವನದಲ್ಲಿ ಮತ್ತು ಪ್ರಕೃತಿ ಆಧಾರಿತ ಜೀವನ ಶೈಲಿಯಲ್ಲಿ' ನಂಬಿಕೆ ಇಡುತ್ತದೆಯೇ ಹೊರತು ದೇವರಲ್ಲಿ ನಂಬಿಕೆ ಇಡುವುದಿಲ್ಲ, ಚಾರ್ವಾಕ ಸಿದ್ಧಾಂತವೇ ಬೌದ್ಧ ಧರ್ಮದ ಮೂಲ ತಿರುಳು. ಆಸ್ತಿಕ ಅಂದರೆ ದೇವರು ಹಾಗೂ ವೇದಗಳಲ್ಲಿ ನಂಬಿಕೆ ಮತ್ತು ಆಸ್ಥೆ ಇರುವವನು. ಆದರೆ ದೇವರ ಅಸ್ತಿತ್ವದಲ್ಲಿ ನಂಬಿಕೆಯೇ ಇಲ್ಲದವನು ನಾ-ಆಸ್ತಿಕ. ಬೌದ್ಧರೂ ದೇವರು ಮತ್ತು ವೇದಗಳಲ್ಲಿ ನಂಬಿಕೆ ಇಡುವುದಿಲ್ಲ, ಆದರಿಂದಾಗಿ ಅವರು ನಾ-ಆಸ್ತಿಕರು. ಹಾಗಾಗಿ ಶುದ್ಧ ಜೀವನ, ಮಾನವತೆ ಮತ್ತು ಉತ್ತಮ ತಾತ್ವಿಕ ನಿಲುವುಳ್ಳ ಎಲ್ಲಾ ನಾಸ್ತಿಕರೂ ಆಟೋಮ್ಯಾಟಿಕ್ ಆಗಿ ಬೌದ್ಧರು ಎನಿಸಿಕೊಳ್ಳಲು ಅರ್ಹರು.

ಎರಡನೇ ಮುಖ್ಯ ವಿಷಯವೆಂದರೆ, ಮೂರ್ತಿ ಪೂಜೆ ಜೈನರಿಂದ ಶುರುವಾಯಿತು. ಜೈನ ಧರ್ಮ ಸಹ ದೇವರಲ್ಲಿ ನಂಬಿಕೆ ಇಡುವುದಿಲ್ಲ, ಅದು ಸಹ ಕೇವಲ ಶುದ್ಧ ನೀತಿ-ತತ್ವ ಆಧಾರಿತ (ಎಥಿಕಲ್) ಜೀವನದಿಂದ ಜೀವನ-ಮರಣದ ವಿಷವರ್ತುಲದಿಂದ ಮುಕ್ತಿ ಪಡೆಯಲು ಸಾಧ್ಯ ಎಂದು ಪ್ರತಿಪಾದಿಸುತ್ತದೆ. ದೇವರ ಭಕ್ತಿ ಎಂಬುದು ಮೂಲ ಜೈನಧರ್ಮದಲ್ಲಿ ಇರಲೇ ಇಲ್ಲ, ಈಗಿನ ಜೈನರು ಹಿಂದೂ



ಧರ್ಮದ 'ಭಕ್ತಿ ಸಿದ್ಧಾಂತ'ವನ್ನು ಅಳವಡಿಸಿಕೊ…
ಧರ್ಮವನ್ನು ಕಲ್ಮಶಗೊಳಿಸಿದ್ದಾರೆ. ಮೊದಲು…
ದೇವರ ನಂಬಿಕೆ ಇರದಿದ್ದರಿಂದ ಧ್ಯಾನದಲ್ಲಿ…
ಕೇಂದ್ರೀಕರಿಸಲು ತೀರ್ಥಂಕರರ ಮೂರ್ತಿ…
ಧ್ಯಾನಿಸತೊಡಗಿದರು. ನಂತರ ತಾಂತ್ರಿಕ…
ಪ್ರಭಾವದಿಂದ ತಂತ್ರ ವಿಧಿಗಳು ಜೈನ…
ಪ್ರವೇಶಗೊಂಡು ಯಕ್ಷ-ಯಕ್ಷಿಯರ…
ಪ್ರವೇಶವಾಯಿತು. ಯಕ್ಷ-ಯಕ್ಷಿಯರನ್ನು ಜೈ…
ತೀರ್ಥಂಕರರ ಸೇವೆ ಹಾಗೂ ರಕ್ಷಣೆ ಮಾಡು…
ಶಕ್ತಿಗಳೆಂದು ಪೂಜಿಸತೊಡಗಿದರು. ಪದ್ಮಾ…
ಯಕ್ಷಿ ಹಾಗೂ ಧರಣೇಂದ್ರ ಎಂಬ ಯಕ್ಷನ…
ರೂಪದಲ್ಲಿ ಜೈನರು ಪೂಜಿಸುತ್ತಾರೆ. ಅದುವೇ…
ನಾಗ ಪೂಜೆಗೆ ನಾಂದಿಯಾಗಿ ವೈದಿಕ ಧರ್ಮ…
ನಾಗಪೂಜೆ ಶುರುವಾಯಿತು. ಹೀಗೆ ತೀ…
ಮೂರ್ತಿಯನ್ನು ಹಾಗೂ ಯಕ್ಷ-…
ಸಂಕೇತ-ಪ್ರತೀಕಗಳನ್ನು ಜೈನರು ಪೂಜಿಸುವು…
ವೈದಿಕರು ತಮ್ಮ ಅಗ್ನಿಪೂಜೆ ತೊರೆದು ಮೂ…
ತೊಡಗಿದರು. ಮೂಲತಃ ವೈದಿಕರು ಕೇವಲ…
ಪೂಜಿಸಿ ಅದರ ಸಂಕೇತವಾಗಿ ಬೆಂಕಿ ಉ…
ಮಾಡುತ್ತಿದ್ದರು. ಯಜ್ಞದಲ್ಲಿ ಅಗ್ನಿ-…
ಮುಖ್ಯವಾಗಿತ್ತು, ಅಗ್ನಿಗೆ ದವಸ-ಧಾನ್ಯ ಮ…
ಬಲಿ ಕೊಡಲಾಗುತ್ತಿತ್ತು, ನಂತರ ಜೈನರ…
ವೈದಿಕರೂ ವಿವಿಧ ದೇವರ ಮೂರ್ತಿ…
ಪೂಜಿಸತೊಡಗಿದರು. ಅಂಬಿಕಾ, ಲಕ್ಷ್ಮಿ,…
ಕುಮಾರ, ಈಶ್ವರ, ಬ್ರಹ್ಮ, ಕುಬೇರ, ಕಾಳಿ-…
ಹಿಂದೂ ದೇವರು ಜೈನ ತೀರ್ಥಂಕರರ…
ಸೇವಕರಾಗಿದ್ದರು, ಹಾಗಾಗಿ ಈ ಯಕ್ಷರ ಕಾಲ್ಪ…
ಮಾಡಿ ಜೈನರು ಪೂಜಿಸುತ್ತಿದ್ದರು. ವೈದಿಕರು…
ತೀರ್ಥಂಕರರ ಯಕ್ಷ ಸೇವಕರನ್ನೇ ತಮ್ಮ ಮೂಲ…
ಮೇಲ್ದರ್ಜೆಗೆ ಏರಿಸಿ ಪೂಜಿಸತೊಡಗಿದರು…
ಮಾಹಿತಿಗಾಗಿ ಗೂಗಲ್‌ನಲ್ಲಿ 'ಜೈನ್- ಬು…
ಯಕ್ಷಿಣಿ' ಎಂಬ ವಿಭಾಗದ ವಿಕಿ…


ಮೋದಿ ಮತ್ತು ಆತನ ಅಲ್ಪಮತಿ ಹಿಂಬಾಲಕರು

ಸೋನಿಯಾ ಗಾಂಧಿ ಆರ್ಥಿಕ ತಜ್ಞೆ, ಆಡಳಿತ ತಜ್ಞೆ, ಸಂವಿಧಾನ ತಜ್ಞೆ, ಶಿಕ್ಷಣ ತಜ್ಞೆ, ಆರೋಗ್ಯ ತಜ್ಞೆ, ಮಿಲಿಟರಿ ರಣನೀತಿ ತಜ್ಞೆ, ವಿದೇಶಾಂಗ ನೀತಿತಜ್ಞೆ, ಸಂಸ್ಕೃತಿ ತಜ್ಞೆ, ಕ್ರೀಡಾ ತಜ್ಞೆ- ಹೀಗೆ ಎಲ್ಲಾ ರಂಗದಲ್ಲೂ ಅಗಾಧ ಪಾಂಡಿತ್ಯ ಹೊಂದಿದ ಪ್ರಪಂಚದ ಅದ್ವಿತೀಯ ಬುದ್ಧಿವಂತೆಯಂತೆ! ಹೀಗೆ ಹೇಳಿದ್ದು ಕಾಂಗ್ರೆಸ್ಸಿಗರಲ್ಲ, ಬಿಜೆಪಿಯವರು ಹೀಗೆ ತಿಳಿದಿದ್ದು ಅಷ್ಟೇ!

ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಮೋದಿ ಮತ್ತು ಚೇಲಾಗಳು ಮಾತುಮಾತಿಗೆ ಸೋನಿಯಾ ಗಾಂಧಿ ಮತ್ತು ಇಟಲಿಯನ್ನು ಆಡಳಿತಾತ್ಮಕ ವಿಷಯದಲ್ಲಿ ಎಳೆದು ತಂದು ದೂಷಿಸಿ ರಸ್ತೆ-ಬೀದಿಗಳಲ್ಲಿ ನಿಂತು ಸೋನಿಯಾಗೆ ಪೆದ್ದುಪೆದ್ದಾಗಿ ಬಹಿರಂಗ ಪ್ರಶ್ನೆ ಹಾಕುತ್ತಿದ್ದರು. ಆಗ ದವಸ ಧಾನ್ಯ ಸ್ವಲ್ಪ ದುಬಾರಿಯಾದಾಗ ಸಾರ್ವಜನಿಕ ವೇದಿಯಿಂದ ಸೋನಿಯಾಗೆ ಪ್ರಶ್ನೆಗಳ ಸುರಿಮಳೆ ಹಾಕಿದ್ದು ಇದೆ ಮೋದಿ, ಜೈಟ್ಲಿ, ಸುಷ್ಮಾ ಮತ್ತು ಸ್ಮೃತಿ ಇರಾನಿ. ಪೆಟ್ರೋಲ್ ತುಟ್ಟಿಯಾದಾಗ ಬಿಜೆಪಿ ದೂಷಿಸಿದ್ದು ಸೋನಿಯಾರನ್ನೇ ಹೊರತು ಪ್ರಧಾನ ಮಂತ್ರಿ ಅಥವಾ ಪೆಟ್ರೋಲಿಯಂ ಮಂತ್ರಿಯನ್ನಲ್ಲ, ಯಾವುದೇ ರಾಜ್ಯದಲ್ಲಿ ಬರಗಾಲ ಅಥವಾ ನೆರೆ ಬಂದಾಗ ಪರಿಹಾರಕ್ಕಾಗಿ ಬಿಜೆಪಿ ಪ್ರಶ್ನಿಸುತ್ತಿದ್ದದ್ದು "ಸೋನಿಯಾರೇ ನೀವೇನು ಮಾಡುತ್ತಿದ್ದೀರಾ" ಎಂದು. ಯುಪಿಎ ಸರಕಾರ ಯಾವುದೇ ಹೊಸ ಜನಪರ ಯೋಜನೆ ತಂದಾಗಲೂ ಪ್ರಧಾನಿ ಮನಮೋಹನ್ ಸಿಂಗರನ್ನು ಪ್ರಶ್ನಿಸುವ ಬದಲು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ ಪ್ರಶ್ನಿಸುತ್ತಿದ್ದದ್ದು ಸೋನಿಯರನ್ನು, ರೇಲ್ವೆ ಬಜೆಟ್ ಅಥವಾ ಸಾಮಾನ್ಯ ಬಜೆಟ್ ಬಂದಾಗಲೂ ಬಿಜೆಪಿಯವರು ಏನಾದರೊಂದು ಐಬು ತೋರಿಸಿ ಟೀಕಿಸುತ್ತಿದ್ದದ್ದು ಸೋನಿಯಾರನ್ನು, ಸಾಧಾರಣ ವಿದ್ಯಾವಂತೆ ಆಗಿರುವ ಸೋನಿಯಾ ಪದವೀಧರೆಯೂ ಅಲ್ಲ, ಆದರೂ ವಿಶ್ವಸ್ತರದ ಆರ್ಥಿಕ ತಜ್ಞರಾಗಿರುವ ಮನಮೋಹನ್ ಸಿಂಗರಿಗಿಂತ ಸೋನಿಯಾ ಹೆಚ್ಚಿನ ಆರ್ಥಿಕ ತಜ್ಞೆ ಎನ್ನುವ ರೀತಿಯಲ್ಲಿ ಬಿಜೆಪಿಯವರು ಎಲ್ಲ ಆರ್ಥಿಕ ನೀತಿಯ ಕುರಿತ ಪ್ರಶ್ನೆಗಳನ್ನು ಸೋನಿಯಾಗೇ ಹಾಕುತ್ತಿದ್ದರು.

ಈಗ ಸೋನಿಯಾಗಿಂತ ಹೆಚ್ಚು ಕಲಿತಿರುವ ಅಮಿತ್ ಶಾ ಬಿಜೆಪಿ ಅಧ್ಯಕ್ಷನಾಗಿದ್ದಾನೆ. ಆದರೆ ಈಗ ಎನ್‌ಡಿಎ ಸರಕಾರದ ಯಾವುದೇ ನೀತಿಯ ಕುರಿತು ಯಾರಾದರೂ ಅಮಿತ್ ಜೈನನಿಗೆ ಪ್ರಶ್ನೆ ಹಾಕಿದರೆ ತಕ್ಷಣ ಕೇಂದ್ರದ ಮಂತ್ರಿಗಳು ಅಮಿತ್ ಶಾ ಯಾವುದೇ ಮಂತ್ರಿ ಅಲ್ಲ, ಅವನು ಪಕ್ಷದ ವಿಷಯದಲ್ಲಿ ಮಾತ್ರ ನಿರ್ಧಾರ ಕೈಗೊಳ್ಳುತ್ತಾನೆಯೇ ಹೊರತು ಸರಕಾರದ ಆರ್ಥಿಕ ನೀತಿ ಹಾಗೂ ಯೋಜನೆಗಳ ಬಗ್ಗೆ ಅವನೆಂದೂ ಹಸ್ತಕ್ಷೇಪ ಮಾಡುವುದಿಲ್ಲ ಎನ್ನುತ್ತಾರೆ. ಹಾಗಾದರೆ ಇದೇ ಮಾತು ಸೋನಿಯಾ ಕಾಂಗ್ರೆಸ್ ಅಧ್ಯಕ್ಷೆ ಆಗಿದ್ದಾಗಲೂ ಅನ್ವಯವಾಗುತ್ತಿತ್ತು ಎಂಬ ಕಾಮನ್ ಸೆನ್ಸ್ ಬಿಜೆಪಿಯವರಿಗೆ ಇಲ್ಲದಿದ್ದದ್ದು ಯಾಕೆ?

ಸೋನಿಯಾರ ವಿದೇಶಿ ಮೂಲದ ಕಾರಣ ಮುಗ್ಧ ಭಾರತೀಯರನ್ನು ರಾಷ್ಟ್ರೀಯತೆಯ ನೆಪದಲ್ಲಿ ಸೋನಿಯಾ ವಿರುದ್ಧ ಪ್ರಚೋದಿಸುವುದು ಸುಲಭ ಎಂದು ಹಿಂದೂತ್ವವಾದಿ ಬಿಜೆಪಿಗೆ ಗೊತ್ತಿತ್ತು, ಜತೆಗೆ ಪುರುಷಪ್ರಧಾನ ಅಹಂಕಾರಿ ಮನಸ್ಥಿತಿಯ ಭಾರತೀಯರಲ್ಲಿ ಮಹಿಳೆಯರ ಬಗ್ಗೆ ಮೂಲತಃ ಇರುವ ಅನಾದರ ಸಹ ಮನುವಾದಿ ಬಿಜೆಪಿಗೆ ಗೊತ್ತಿತ್ತು. ಹಾಗಾಗಿ ಹೆಂಗಸರ ಬಗ್ಗೆ ಸಾಮಾನ್ಯರಲ್ಲಿ ಇರುವ ಪೂರ್ವಾಗ್ರಹ ಹಾಗೂ ತಾತ್ಸಾರವನ್ನು ನಗದೀಕರಿಸಲು ಬಿಜೆಪಿಯು ಎಲ್ಲಾ ಸರಕಾರಿ ಆಡಳಿತದ ವಿಷಯದಲ್ಲೂ ಸೋನಿಯಾರು ಕಾಂಗ್ರೆಸ್ಸಿನ ಬೃಹಸ್ಪತಿಯೋ ಎನ್ನುವಂತೆ ಅವರನ್ನು ನಡುವೆ ಎಳೆದು ತಂದು ಹಂಗಿಸುತ್ತಿತ್ತು. ಸೋನಿಯಾರಿಂದ ಅನುಮತಿ ಪಡೆಯದೇ ಪ್ರಧಾನಿ ಸಿಂಗ್ ಸಹಿತ ಯಾವುದೇ ಯುಪಿಎ ಸಚಿವ ಯಾವುದೇ ಆರ್ಥಿಕ, ಆಡಳಿತಾತ್ಮಕ, ವಿದೇಶಾಂಗ ರಾಜತಾಂತ್ರಿಕ, ಮಿಲಿಟರಿ ರಣತಂತ್ರ ಮುಂತಾದ ಯಾವುದೇ ಸರಕಾರಿ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎನ್ನುವಂತೆ ಬಿಜೆಪಿಗರು ಉದ್ದೇಶಪೂರ್ವಕ ಬಿಂಬಿಸತೊಡಗಿದರು. ಬಿಜೆಪಿಯ ಈ ಮಹಿಳಾದ್ವೇಷ ಮತ್ತು ಕ್ರೈಸ್ತದ್ವೇಷದಿಂದ ಹೆಂಡತಿ ಬಿಟ್ಟುಓಡಿಹೋಗಿದ್ದ ಮೋದಿಗೆ ಚುನಾವಣೆಯಲ್ಲಿ ಬಹಳ ಲಾಭವಾಯಿತು ನಿಜ. ಆದರೆ ಈಗ ಅದೇ ಉಲ್ಟಾ ಹೊಡೆಯುತ್ತಿದೆ. ಯಾಕೆಂದರೆ ಮನಮೋಹನ್ ಸಿಂಗ್



ಸರಕಾರ ಜಾರಿಗೆ ತಂದ ಎಲ್ಲಾ ಯೋಜನೆಗಳ…
ಯಥಾವತ್ ಮುಂದುವರಿಸುತ್ತಿದ್ದಾನೆ. ಅಷ್ಟೇ…
ತನ್ನ ಸ್ವಂತ ಯೋಜನೆ ಎಂದು ಬಾಲಿಶವಾಗಿ ಬಿ…
ಹಿಂದೆಲ್ಲಾ ಸೋನಿಯರು ಇಟಲಿಯಿಂದ ತ…
ಬಾಲಿಶ ಯೋಜನೆಗಳು ಭಾರತದಲ್ಲಿ ಯಶಸ್ವಿ…
ಎಂದು ಹೀಯಾಳಿಸುತ್ತಿದ್ದ ಬಿಜೆಪಿ ಈ…
ಸೋನಿಯಾರ ಅವೇ ಅಪಕ್ವ ಬಾಲಿಶ ಯೋ…
ಮೋದಿಯ ಸ್ವಂತ ಯೋಜನೆ ಎಂದು…
ಬಿಂಬಿಸುತ್ತಿದೆ. ಯುಪಿಎ ಸರಕಾರದ ಯೋ…
ಮೋದಿ ಯಥಾವತ್ ನಕಲು ಮಾಡಿದ್ದರಿಂದ…
ಗಾಂಧಿ ಮೋದಿಗಿಂತ ಬಹಳ ಹೆಚ್ಚು ಬುದ್ಧಿ…
ದೊಡ್ಡ ಆರ್ಥಿಕ ತಜ್ಞೆ ಮತ್ತು ಮಿಲಿಟರಿ…
ಎಂದು ಬಿಜೆಪಿ ಪರೋಕ್ಷ ಒಪ್ಪಿಕೊಂಡಂತಾಯಿ…
ಯಾವ ಪ್ರಶ್ನೆಯನ್ನು ಪಾರ್ಟಿಯ ಅಧ್ಯಕ್ಷರಿಗೆ…
ಹಾಗೂ ಯಾವ ಪ್ರಶ್ನೆಗಳನ್ನು ಪ್ರಧಾನಿ ಅ…
ಖಾತೆಯ ಮಂತ್ರಿಗಳಿಗೆ ಹಾಕಬೇಕು ಎಂದು ಸ…
ಅಲ್ಪಮತಿಗಳು ಈ ಮೋದಿ ಮತ್ತು ಅವರ ಬಿ…

2013 ರಲ್ಲಿ ಪಾಕಿ ಸೈನಿಕರು ನಮ್ಮ ವೀ…
ಕೊಂದು ತಲೆ ಕಡಿದಾಗಲೂ ಇದೇ ಮೋ…
ಪ್ರಧಾನ ಮಂತ್ರಿ ಅಥವಾ ರಕ್ಷಣಾ ಮಂತ್ರಿ…
ಪ್ರಶ್ನೆ ಹಾಕುವ ಬದಲು ಸೋನಿಯಾರ ಮೇ…
ಪ್ರಹಾರ ಮಾಡುತ್ತಾ ಸೋನಿಯಾಗೆ ಭಾರತದ…
ಬಗ್ಗೆ ಸ್ವಲ್ಪವಾದರೂ ಕಾಳಜಿ ಇದ್ದರೆ ನ…
ಒಂದು ತಲೆಗೆ ಬದಲಾಗಿ ಪಾಕಿಗಳ ಹತ್ತು…
ಕಡಿದು ತರಬೇಕು ಎಂದು ಚಾಲೆಂಜ್ ಮ…
ಸೋನಿಯರನ್ನು ಮೋದಿ ಗುಜರಾತಿನ ಒ…
ಹಂತಕಿ ಎಂದು ತಪ್ಪು ತಿಳಿದಿರಬೇಕು. …
ಮೋದಿ ತಾನೇ ಪ್ರಧಾನಿ ಆಗಿರುವಾಗ ದು…
ತಲೆ ಕಡಿದು ತರುವುದು ಒತ್ತಟ್ಟಿಗಿರಲಿ ಅವರ …
ತರಲಿಕ್ಕೆ ಆಗುತ್ತಿಲ್ಲ.

ಚೆಡ್ಡಿ ಭೈರಪ್ಪನವರು ಬಿಜೆಪಿಯ ಒಂದ…
ಅರೆಸಾಕ್ಷರ ಕಾರ್ಯಕರ್ತನಂತೆ ಪ್ರತಿಯೊಂದಕ್…
ಮೇಡಂ" ಎಂದು ಸೋನಿಯಾರನ್ನು ದೂ…
ನೋಡಿದರೆ ಭೈರಪ್ಪರು ಎಲ್ಲವನ್ನೂ ಆಳವಾ…
ಸಂಶೋಧಿಸಿದ ನಂತರವೇ ಮಾತನಾಡುತ್ತಾ…
ಬರೆಯುತ್ತಾರೆ ಎಂಬ ಜನರ ಅಭಿಪ್ರಾಯ…
ಅನಿಸುತ್ತಿದೆ.

- ಮಲ್ಲಿಕಾರ್ಜುನ ಶೆಟ್ಟರ…


'ಕಾಂಗ್ರೆಸ್ ಮುಕ್ತ' ಎಂಬ ಫ್ಯಾಸಿಸ್ಟ್ ಗೀಳು

ಚೀನಾ ಬಿಟ್ಟರೆ ವಿಶ್ವದ ಅತೀಹೆಚ್ಚು ಬರೋಬ್ಬರಿ ...ನೂರಿಪ್ಪತ್ತೈದು ಕೋಟಿ ಜನಸಂಖ್ಯೆಯ ನಮ್ಮ ಭಾರತದಲ್ಲಿ ...ಕ್ಕವಿಲ್ಲದಷ್ಟು ಜಾತಿಗಳು, ಅನೇಕ ಧರ್ಮಗಳು, ಪಂಗಡ ...ಗಳು, ವಿಭಿನ್ನ ಸಂಪ್ರದಾಯಗಳು, ಆಹಾರ ಪದ್ಧತಿಯಿಂದ ...ಡಿದು ಅಂತ್ಯಸಂಸ್ಕಾರದವರೆಗೆ ವೈವಿಧ್ಯತೆಯಿಂದ ಕೂಡಿದ ...ದ್ಧತಿಗಳು, ಹಲವಾರು ಭಾಷೆಗಳು, ಅನೇಕ ಪ್ರಾದೇಶಿಕ ...ಭಿನ್ನತೆಗಳಂತಹ ವೈವಿಧ್ಯತೆಯ ಮೊತ್ತವೇ ನಮ್ಮ ಭಾರತ. ...ಕಾರಣಕ್ಕೆಂದೇ "ವಿವಿಧತೆಯಲ್ಲಿ ಏಕತೆ" ಎಂಬ ...ಲ್ಲನ್ನೂ ಒಳಗೊಳ್ಳುವ ಜಾತ್ಯತೀತ-ಧರ್ಮಾತೀತ ಸಿದ್ಧಾಂತ ...ನ್ನು ಅಳವಡಿಸಿಕೊಂಡಂತಹ ದೇಶ ನಮ್ಮದು. ಆದರೆ, ...ಗ ಸರ್ವಾಧಿಕಾರದ ಛಾಯೆಯಡಿಯಲ್ಲಿ ಎಲ್ಲವನ್ನೂ ...ದೇ ಸೂತ್ರದಡಿಯಲ್ಲಿ ಒತ್ತಾಯಪೂರ್ವಕವಾಗಿ ತರು ...ತಹ ಅಪಾಯಕಾರಿ ಯೋಜನೆ-ಯೋಚನೆಗಳು ...ರ್ಯಪ್ರವೃತ್ತವಾಗಿವೆ.

ಒಂದೇ ಧರ್ಮ (ಹಿಂದೂ), ಒಂದೇ ಭಾಷೆ (ಹಿಂದಿ), ...ದೇ ಸಿದ್ಧಾಂತ (ವೈದಿಕ) ಇಂತವುಗಳೇ ಭಾರತದ ಪ್ರಮುಖ ...ಹದಿಯಾಗಬೇಕು ಉಳಿದವೆಲ್ಲ; ಮೂಲೆಗೆ ತಳ್ಳಲ್ಪಡ ...ಬೇಕೆಂಬ ಈ ಚಿಂತನೆ ನಿನ್ನೆ ಮೊನ್ನೆಯದಲ್ಲದಿದ್ದರೂ ಇವತ್ತಿನ ...ನಗಳಲ್ಲಿ ಅದು ಹೆಚ್ಚು ಪ್ರಭಾವವನ್ನು ಗಿಟ್ಟಿಸಿಕೊಂಡು ...ದೇಶವನ್ನು ಆವರಿಸತೊಡಗಿರುವುದಂತೂ ಸತ್ಯ. ಕಳೆದ ...ಲವು ವರ್ಷಗಳಿಂದ ಸುದ್ದಿ ಮಾಡುತ್ತಿರುವ 'ಕಾಂಗ್ರೆಸ್ ಮುಕ್ತ ಭಾರತ' ಎಂಬ ಲೆಕ್ಕಾಚಾರವೂ ಕೂಡ ಈ ಕಾರ್ಯಾ...ಚರಣೆಯದ್ದೇ ಒಂದು ಭಾಗ.

ಹೌದು, ಕಾಂಗ್ರೆಸ್ ಎಂಬುವುದು ದೇಶದಲ್ಲಿವತ್ತು ...ವರ್‌ಫುಲ್ ಆಗಿ ಉಳಿದಿದೆಯೋ ಇಲ್ಲವೋ ಎಂಬುವುದು ...ರೆ ವಿಚಾರ. ಆದರೆ ಭಾರತದ ರಾಜಕೀಯದಲ್ಲಿ ಕಾಂಗ್ರೆಸ್ ...ಬ ಹೆಸರಿಗೆ ಅದರದ್ದೇ ಆದ ಪ್ರಭಾವಳಿ ಇದ್ದಿರುವುದನ್ನು ...ತ್ರ ಯಾರಿಗೂ ಅಲ್ಲಗಳೆಯಲಾಗದು. ನೆಹರೂ, ಇಂದಿರಾ, ...ಜೀವ್‌ರಂತಹ ಘಟಾನುಘಟಿಗಳು ಆಯಾ ಕಾಲ ಹಾಗು ...ಸಂದರ್ಭಕ್ಕೆ ತಕ್ಕಂತೆ ಕಾಂಗ್ರೆಸ್‌ನ ಹೆಸರಿನಡಿಯಲ್ಲೇ ಆಳ್ವಿಕೆ ...ನಡೆಸಿ ತಮ್ಮದೇ ಆದಂತಹ ಪ್ರಭಾವವನ್ನು ಬೀರಿ ...ಹೋದಂತವರು. ಇವರುಗಳಲ್ಲೆಲ್ಲ ತಪ್ಪನ್ನೂ ಕೂಡ ...ಹುಡುಕಬಹುದಾದರೂ ಕೊಡುಗೆಗಳೇ ಇಲ್ಲ ಎಂದು ...ಹೇಳಿಬಿಟ್ಟರೆ ಅದು ಬಾಲಿಶತನದ ವಾದವಾದೀತು. ಇಂದು ...ಕಾಂಗ್ರೆಸ್ ತನ್ನದೇ ಆದ ತಪ್ಪುಗಳಿಂದಲೋ ಅಥವ ಇನ್ನಿತರ ...ರಾಜಕೀಯ ಕಾರಣಗಳಿಂದಾಗಿಯೋ ಹೊಸ ಪೀಳಿಗೆಯ ...ನಾಯಕರ ಕೊರತೆಯಿಂದಾಗಿ ದುರ್ಬಲವಾಗಿರುವುದು ಹೌದು. ಆದರೆ ...ಕಾಂಗ್ರೆಸ್ ಎನ್ನುವುದು ದೇಶಕ್ಕಂಟಿದ ಶಾಪ; ಭಾರತವನ್ನು ...ಅದರಿಂದ ಮುಕ್ತಗೊಳಿಸಬೇಕೆನ್ನುವ ಸಿದ್ಧಾಂತವೇ ಹಿಟ್ಲರ್‌ನನ್ನು ...ಆರಾಧಿಸುವ ಸರ್ವಾಧಿಕಾರೀ ಮನೋಭಾವದವರಿಗೆ ಮಾತ್ರ ...ಸರಿಯೆನಿಸಬಹುದು.

ಹಿಟ್ಲರ್‌ಶಾಹಿಗಳು ತಮ್ಮ ಅಜೆಂಡಾಗಳ ಅನುಷ್ಠಾನಕ್ಕಾಗಿ ...ವಿರೋಧಿಸುವವರೇ ಇಲ್ಲದಂತಾಗಲು ತಮ್ಮ ವಿರೋಧಿಗಳ ...ಸಮೂಲೋತ್ಪಾಟನೆ ಸದಾ ಅವರಿಗೆ ಮುಖ್ಯವೆನಿಸಿತ್ತು. ...ಭಾರತದಲ್ಲಿ 'ಹುಕ್ ಆರ್ ಕುಕ್' ಕಾಂಗ್ರೆಸ್ ಮುಕ್ತ ...ಎನ್ನುವ ಹಿಟ್ಲರ್‌ಶಾಹಿಗಳ ಯೋಜನೆ ಬಹುತೇಕ ...ಯಶಸ್ವಿಯೂ ಆದ ಪರಿಣಾಮದಿಂದ ಸದ್ಯಕ್ಕೆ ಕಾಂಗ್ರೆಸ್ ...ಪ್ರಭಾವಶಾಲಿಯಾಗುಳಿದಿರುವುದು ಕೇವಲ ಕರ್ನಾಟಕದಲ್ಲಿ



ಮಾತ್ರ. ಅದಕ್ಕೇ ಈ ಫ್ಯಾಸಿಸ್ಟ್ ಶಕ್ತಿಗಳಿಗೆ ಕರ್ನಾಟಕದ ಮೇಲೆ ಸದಾ ಕಣ್ಣು. ಕಾರಣ ಸದ್ಯದಲ್ಲಿಯೇ ಬರಲಿರುವ ಕರ್ನಾಟಕ ವಿಧಾನಸಭಾ ಚುನಾವಣೆ.

ಕಳೆದಬಾರಿ ಬಿಜೆಪಿಯವರ ಆಪರೇಷನ್ ಕಮಲ ತಂತ್ರ ಅವರಿಗೆ ಗೆಲುವಿನ ತಾತ್ಕಾಲಿಕ ಯಶಸ್ಸನ್ನು ಕೊಟ್ಟಿತಾದರೂ ಅದು ಮುಂದೆ ಬಣ ರಾಜಕೀಯ, ರೆಸಾರ್ಟ್ ರಾಜಕೀಯ, ರೆಡ್ಡಿಯ ಕಳ್ಳ ದುಡ್ಡಿನ ಹಂಗಿನ ಅನೈತಿಕತೆ ಮೊದಲಾದ ಕಾರಣಗಳಿಗಾಗಿ ಕೆಟ್ಟ ಹೆಸರನ್ನೂ ಕೂಡ ಕೊಟ್ಟ ಕಾರಣಕ್ಕಾಗಿ ಹಳೆಯ ತಂತ್ರದ ಬಗ್ಗೆ ಕರ್ನಾಟಕದಲ್ಲಿ ಯಾರಿಗೂ ಅಂತಾ ಆಸಕ್ತಿ ಇಲ್ಲ. ಇನ್ನು ಬಿಜೆಪಿ ಆಡಳಿತಾವಧಿಯಲ್ಲಿ ಮೂರು ಮೂರು ಮುಖ್ಯಮಂತ್ರಿಗಳಿಂದ ಕಡಿದು ಕಟ್ಟೆ ಹಾಕಿದಂತಹ ಸಾಧನೆಗಳನ್ನು ಎದುರಿಟ್ಟುಕೊಂಡು ಹೋರಾಡೋಣವೆಂದರೆ ಅಂತಹ ಯಾವ ಹೆಗ್ಗಳಿಕೆಯ ವಿಚಾರವೂ ಭೂತ ಕನ್ನಡಿಯಿಟ್ಟು ನೋಡಬೇಕಷ್ಟೆ.

ಹೀಗಾಗಿ ಇನ್ನುಳಿದಿರುವುದು ಒಂದೇ ತಂತ್ರ ಅದು ಅಡ್ಡಹಾದಿಯ ತಂತ್ರ. ಅಂದರೆ ಪ್ರತಿರೋಧಿ ಪಡೆಗೆ ಕೆಟ್ಟ ಹೆಸರನ್ನು ತಂದು ಅದನ್ನೇ ಜನಮನದಲ್ಲಿ ಬಿಂಬಿಸಿ ಅದರ ದುರ್ಲಾಭ ಪಡೆಯುವುದು. ಅದಕ್ಕೊಂದು ತಾಜಾ ಉದಾಹರಣೆಯೆಂದರೆ ಮೊನ್ನಿನ ಡಿಕೆಶಿ ಪರಿವಾರದ ಮೇಲಿನ ಐಟಿ ದಾಳಿಯಂತಹ ಪೂರ್ವ ನಿಯೋಜಿತ ಪ್ರಕರಣ.

ಇತ್ತೀಚೆಗೆ ಚುನಾವಣಾ ಪೂರ್ವ ಸಿದ್ಧತೆಯ ನೆಪದಲ್ಲೇ ಕರಾವಳಿಯಲ್ಲಿ ಕೋಮುಗಲಭೆ ಹುಟ್ಟು ಹಾಕುವ ನೆಪಕ್ಕೆ ಕಲ್ಲಡ್ಕ ಭಟ್ಟರನ್ನು ಬಂಧಿಸುವಂತೆ ಚೆಡ್ಡಿ ಪಡೆಯೇ ಸರಕಾರವನ್ನು ದೊಡ್ಡ ಮಟ್ಟದಲ್ಲಿ ಪ್ರಚೋದಿಸಲು ಯತ್ನಿಸಿತ್ತು. ಕಲಾಯಿ ಅಶ್ರಫ್ ಕೊಲೆ ನೆಪದಲ್ಲಿ ಬಂಧನದ ಸಂಭವನೀಯತೆ ಎದುರಾದಾಗ ಸಾಮಾನ್ಯವೆಂಬಂತೆ ಎಬ್ಸ್ಕಾಂಡ್ ಆಗುವ ಬದಲು ನಮ್ಮ ಭಟ್ಟರು ಕಲ್ಲಡ್ಕ ಪರಿಸರದಲ್ಲೇ ಪೊಲೀಸರೆದುರೇ ಬಹಿರಂಗವಾಗಿ ಅಡ್ಡಾಡುತ್ತಿದ್ದನಲ್ಲದೇ ಬಿಸಿ ರೋಡಿನಲ್ಲಿ ಅವರನ್ನು ಪೊಲೀಸರೆದುರೇ ಚೇಲಾಗಳು ಮೆರವಣಿಗೆಯಲ್ಲಿ ಹೊತ್ತು ಕುಣಿದಾಡಿದ್ದರು. ಬಂಧನವಾದರೂ ಕೂಡ ಕಾರ್ನಿಕ್ ಹೇಳುವಂತೆ ಚೆಡ್ಡಿಗಳೇ ತುಂಬಿರುವ ಖಾಕಿ ಪಡೆಯಲ್ಲಿ ಭಟ್ಟನಿಗೆ ರಾಜಾತಿಥ್ಯ ಸಿಗುವುದೇ ಹೊರತು ಭಯದ ಯಾವ ಸಾಧ್ಯತೆಯೂ ಇಲ್ಲದ ಭರವಸೆಯ ಕಾರಣ ಭಟ್ಟನೂ ಬಂಧನಕ್ಕೊಳಗಾಗಿ ಸ್ವಾತಂತ್ರ್ಯ ಹೋರಾಟಗಾರನ ಲುಕ್ಕಿನಲ್ಲಿ ರಾಷ್ಟ್ರಮಟ್ಟದ ಸುದ್ದಿಯಾಗೋ ತವಕದಲ್ಲಿದ್ದ. ಆದರೆ ಸರಕಾರದ ಜಾಣ ನಡೆಯಿಂದಾಗಿ ಚೆಡ್ಡಿಗಳ ಈ ಪ್ಲಾನು ಭಯಂಕರವಾಗಿ ಟುಸ್ಸಾಗಿಬಿಟ್ಟಿತು. ನಂತರದ ದಿನಗಳಲ್ಲಿ ಜನರನ್ನು ಪ್ರಚೋದಿಸಲು ಬಂಟ್ವಾಳಕ್ಕೆ ಬಂದ ಯಡ್ಡಿ, ಶೋಭಾ, ಕಟೀಲರಂತವರ ಬೆಂಕಿ ಹಾಗು ಪಂಡ-ಪುಂಡತನದ ಮಾತುಗಳು ಅವರಿಗೇ ತಿರುಗುಬಾಣವಾದವೇ ವಿನಹ ಏನೂ ಗಿಟ್ಟಲಿಲ್ಲ.

ಇವನ್ನೆಲ್ಲ ಡೆಲ್ಲಿಯಲ್ಲಿ ಕೂತು ಗಮನಿಸುತ್ತಾ ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷರಿಗೆ ಮತ್ತು ಸಂಸದರಿಗೆಲ್ಲ ವಾರ್ನ್ ಮಾಡುತ್ತಿದ್ದ ಅಮಿತ್ ಶಾ ಕರ್ನಾಟಕದ ಚೆಡ್ಡಿ ಪಡೆ ಸಿದ್ದರಾಮಯ್ಯನನ್ನು ಅಲುಗಾಡಿಸಲಾಗದೇ ತಡಬಡಾಯಿಸುತ್ತಿರುವುದನ್ನು ನೋಡಿ ಅಲ್ಲಿಂದಲೇ ಬುಸುಗುಡುತ್ತಿದ್ದ. ಇನ್ನು ಅಮಿತ್ ಶಾನ ಪರಿಸ್ಥಿತಿಯೋ ಪಾಪ ಅದು ಆತನೊಬ್ಬನಿಗೇ ಗೊತ್ತು ಹೇಗೆಂದರೆ, ಬುಲೆಟ್ ಟ್ರೈನೇನೂ, ಪಾಕ್-ಚೀನಾಗಳ ಒದ್ದು ಕೆಡವುದೇನೂ, ಸ್ವಿಸ್ ಬ್ಯಾಂಕ್ ಹಣ ತಂದು ಪ್ರತಿಯೊಬ್ಬರ ಜೇಬಿಗೂ ಹದಿನೈದು ಲಕ್ಷ ಪಾಕೆಟ್ ಮನಿ ಕೊಡುವುದೇನೂ, ಎಪ್ಪತ್ತು ವರ್ಷ ಕಾಂಗ್ರೆಸಿಗರು ಹಾಳುಮಾಡಿದ ದೇಶವನ್ನು ಸ್ವರ್ಗವಾಗಿಸುವುದೇನೂ... ಇದರಲ್ಲಿ ಯಾವ ಆಶ್ವಾಸನೆಗಳೂ ಈಡೇರದೆ ಕೆಟ್ಟ ಪರಿಸ್ಥಿತಿಯಲ್ಲಿ ರಾಷ್ಟ್ರಾಧ್ಯಕ್ಷನಾಗಿ ಜನರೆದುರು ಓಟು ಕೇಳಲು ಹೋಗುವಂತಹ ದುರ್ವಿಧಿ ಈತನದ್ದು. ಈ ಹತಾಶೆಯ ಪ್ರತಿಬಿಂಬವನ್ನು ಜನರು ದೆಹಲಿಯೇ ಮೊದಲಾದ ಚುನಾವಣೆಗಳಲ್ಲಿ ತೋರಿಸಿಕೊಟ್ಟ ಬಳಿಕ ಶಾ ಎಲ್ಲೂ ಕೂಡ ಸಾಧನೆಯ ಹೆಸರಿನಲ್ಲಿ ಓಟು ಗಿಟ್ಟಿಸುವ ತಂತ್ರಕ್ಕೆ ಇಳಿಯಲೇ ಇಲ್ಲ.

ಹಣ, ರಾಜಕಾರಣಿಗಳ ಖರೀದಿ, ಒಳರಾಜಕೀಯ, ಕೋಮುಗಲಭೆ, ಏನು ಒತ್ತಿದರೂ ಬಿಜೆಪಿಗೆ ಮತ ಹೋಗುವ ಎಲೆಕ್ಟ್ರಾನಿಕ್ ಮತಯಂತ್ರಗಳು, ನೋಟ್ ಬ್ಯಾನ್ ಕೂಡ ಚುನಾವಣೆ ಗೆಲ್ಲುವ ತಂತ್ರವೇ ಎಂಬ ವಾದವೂ ಇದೆ. ಉ.ಪ್ರ. ಚುನಾವಣೆಗೂ ಮುನ್ನ ಚುನಾವಣೆ ಖರ್ಚಿಗೆಂದು ರಾಜಕಾರಣಿಗಳು ಕೂಡಿಡುವ ಸಾವಿರ ಐನೂರರ ಕೋಟಿಗಟ್ಟಲೆ ಮೊತ್ತದ ಹಣವನ್ನು ಸುದ್ದಿಯಿಲ್ಲದಂತೆ ಏಕಾಏಕಿ ನಿಷೇಧಿಸಿದ್ದು ವಿರೋಧಿಗಳನ್ನು ಬಗ್ಗು ಬಡಿಯಲಾಗಿದೆಯೇ ಹೊರತು ಇದರ ಹಿಂದೆ ಯಾವ ದೇಶೋದ್ಧಾರದ ದೂರದೃಷ್ಟಿ ಇಲ್ಲವೆಂಬುವುದು ಮುಂದೆ ಸಾಬೀತಾಗುತ್ತಾ ಹೋಯಿತು. (ನೋಟ್ ಬ್ಯಾನ್ ಆದರೂ ಬಿಜೆಪಿಗರ ಕೈಗೆ ಕಂತೆಗಟ್ಟಲೆ ಹೊಸ ನೋಟುಗಳು ಬಂದಿದ್ದವು.) ಅಲ್ಲದೇ ರಾತ್ರಿ 'ದೇಶಾದ್ಯಂತ ಟೀವಿಯಲ್ಲಿ ನೋಟ್ ಬ್ಯಾನ್ ಭಾಷಣ ಬಿಗಿದಿದ್ದ ಮಹಾನುಭಾವರು ಮರುದಿನ ಮುಖ ಮುಚ್ಚಿಕೊಳ್ಳಲು ಜಪಾನ್‌ಗೆ ಹಾರಿದ್ದೂ ಕೂಡ ಈ ಉತ್ತರಿಸಲಾಗದ ರಾಜಕೀಯ ದೂರದೃಷ್ಟಿ ಇದ್ದರೂ ಸಾಮಾಜಿಕ ದೂರದೃಷ್ಟಿ ಇರದ ಈ ವಿಚಾರಕ್ಕಾಗಿಯೇ ಎನ್ನುವ ವಾದವಿದೆ. ಈಗ ಇಂತದೇ ಅಡ್ಡಹಾದಿಯ ತಂತ್ರವನ್ನು ಗುಜರಾತ್ ಚುನಾವಣಾ ನೆಪದಲ್ಲಿ ಬಳಸಲಾಗುತ್ತಿದೆ. ಕಾಂಗ್ರೆಸನ್ನು ಹಳಿಯುವ 'ಇಂದು ಸರ್ಕಾರ್' ಎಂಬ ಸಿನಿಮಾ ಬಿಡುಗಡೆ, ಶಾಸಕರಿಗೆ ಆಮಿಷಗಳಂತಹ ಇಂತಹ ಅಡ್ಡದಾರಿ ತಂತ್ರಗಳು "ಮಾದರಿ" ಗುಜರಾತ್‌ನ ಚುನಾವಣೆ ಗೆಲ್ಲಲು ಬೇಕಂತೆ ಇವರಿಗೆ ಎಂಥಾ ವಿಪರ್ಯಾಸ?


ಕೇಂದ್ರ ಸರಕಾರದ ಹದ್ದುಬಸ್ತಿನಲ್ಲಿರುವ ಐಟಿ ಇಲಾಖೆಯನ್ನು ಬಳಸಿಕೊಂಡು ಆವತ್ತು ಲಕ್ಷ್ಮೀ ಹಾಗು ರಮೇಶ್ ಜಾರಕಿಹೊಳಿ, ಈಗ ಡಿಕೆಶಿಯಂತವರ ಮೇಲೆ ದಾಳಿ ನಡೆಸಿರುವುದು ಕಾನೂನಾತ್ಮಕವಾಗಿ ತಪ್ಪೇನೂ ಅಲ್ಲದಿದ್ದರೂ ತುರ್ತು ಪರಿಸ್ಥಿತಿಯಂತಹ ನೋಟ್ ಬ್ಯಾನ್ ಸಮಯದಲ್ಲೇ ಅದ್ದೂರಿ ಮದುವೆಗಳನ್ನು ಮಾಡಿ ಮಿಂಚಿದ್ದ ರೆಡ್ಡಿ ಹಾಗು ಗಡ್ಕರಿಯಂತವರ ಮೇಲೆ ಈ.ಐಟಿಗಳಿಗೇಕೆ ಆಸಕ್ತಿಯಿಲ್ಲ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ. ಬಿಜೆಪಿಗರ ಮೇಲೂ ದಾಳಿಗಳಾಗಿವೆ ಎಂದು ಬಿಂಬಿಸಲು ಸಂಸದ ಸಿದ್ದೇಶ್ವರ್ ಮೇಲೆ ದಾಳಿಗಳಾದರೂ ಮೂಲತಃ ಹಿಂದಿನಿಂದಲೂ ದೊಡ್ಡ ಉದ್ಯಮವನ್ನೇ ನಡೆಸುತ್ತಿರುವ ಸಿದ್ದೇಶ್ವರರಂತವರ ಲೆಕ್ಕಗಳು ಬಹುತೇಕ ಸರಿಯಾದ ರೀತಿಯಲ್ಲೇ ಇರುತ್ತವೆಯೇ ಹೊರತು ಲಟಾರಿ ಸೈಕಲ್‌ನಲ್ಲಿ ಓಡಾಡುತ್ತಿದ್ದ ರೆಡ್ಡಿ ಹೆಲಿಕಾಪ್ಟರ್‌ನಲ್ಲಿ ತಿರುಗುವಂತಹ 'ಪವಾಡ'ಗಳ ಮೂಲ ಹುಡುಕುವ ಪ್ರಮೇಯಗಳು ಇಲ್ಲಿರದು. ಆ ರೀತಿಯಾಗಿ ನೋಡಿದರೆ ರಾಜ್ಯದಲ್ಲಿ ಯಡಿಯೂರಪ್ಪ ಬಿಡಿ, ಹುಡ್ಕೋ ಖ್ಯಾತಿಯ ಅನಂತ್ ಕುಮಾರ್, ಸತ್ಪುರುಷ ಖ್ಯಾತಿಯ ಸದಾನಂದ ಗೌಡರು, ಸ್ವಂತ ಊರಲ್ಲಿ ಒಂದೆರಡು ಎಕರೆ ಜಮೀನು ಬಿಟ್ಟರೆ ಮಣಿಪಾಲ ಕೆಎಮ್‌ಸಿಯಲ್ಲಿ ಪರಿಚಾರಕಿಯಾಗಿ ಚಿಲ್ಲರೆ ಸಂಬಳ ಪಡೆಯುತ್ತಿದ್ದ ಶೋಭಕ್ಕನವರು ಇಂದು ತಮ್ಮ ಹಾಗು ಸಹೋದರ ಲಕ್ಷ್ಮಣ ಗೌಡರ ಹೆಸರಲ್ಲಿ ಮಾಡಿಟ್ಟ 250 ಕೋಟಿ ಬೆಲೆಯ ಆಸ್ತಿ ಮುಂತಾದವುಗಳ ಕುರಿತಾಗಿಯೂ ಕೂಡ ಐಟಿ ರೈಡ್‌ಗಳಾಗ ಬೇಕಲ್ಲವೇ? ಯಾಕಿಲ್ಲ?

ಅಂತೂ ಕಾಂಗ್ರೆಸ್ ಮುಕ್ತವೇ ಇವರ ಗುರಿ. ಕಾಂಗ್ರೆಸ್ ನಾಶವಾದರೆ ಮುಂದೆ ವಿರೋಧರಹಿತ ವಾತಾವರಣದಲ್ಲಿ ಫ್ಯಾಸಿಸ್ಟ್ ಅಜೆಂಡಾಗಳ ಜಾರಿ. ಅದುವೇ ವೈದಿಕಶಾಹಿಯ ರಾಮರಾಜ್ಯಕ್ಕೆ ನಾಂದಿ.

- ಸತೀಶ ಪೂಜಾರಿ, ಮಂಗಳೂರು

...ನೋಡಬಹುದು.) ಒಟ್ಟಾರೆ ಈಗಿನ ವೈದಿಕ ಧರ್ಮವೆಂದರೆ ...ಬೌದ್ಧ ಮತ್ತು ಜೈನ ಧರ್ಮಗಳ ಸಮ್ಮಿಲನದಿಂದ ಹುಟ್ಟಿದ ...ಒಂದು "ವಿಕಲಾಂಗ" ಮಗು! ಭಾರತದಲ್ಲಿ ಅತಿ ಹಳೆಯ ...ಲಿಖಿತ ಗ್ರಂಥ ಸಿಕ್ಕಿರುವುದು ಪಾಲಿ ಹಾಗೂ ಪ್ರಾಕೃತ ...ಭಾಷೆಗಳಲ್ಲಿ. ಈ ಎರಡೂ ಭಾಷೆಗಳು ಬ್ರಾಹ್ಮಿ ಲಿಪಿ ...ಬಳಸುತ್ತಿದ್ದವು. ಆಗ ನಾಗರಿ/ದೇವನಾಗರಿ ಲಿಪಿ ಇನ್ನೂ ...ಬಳಕೆಗೆ ಬಂದಿರಲಿಲ್ಲ. ಅತ್ಯಂತ ಹಳೆಯ ಸಂಸ್ಕೃತ ಲಿಖಿತ ...ದಾಖಲೆ ಇರುವುದು ಕೇವಲ 2000 ವರ್ಷ ಹಳೆಯದು ...ಮಾತ್ರ. ಹಾಗಾಗಿ ಬೌದ್ಧ ಮತ್ತು ಜೈನ ಧರ್ಮಗಳು ...ತಮ್ಮ ಧಾರ್ಮಿಕ ಗ್ರಂಥಗಳನ್ನು ರಚಿಸಿದ ಸುಮಾರು 600 ವರ್ಷಗಳ ನಂತರ ಸಂಸ್ಕೃತ ಭಾಷೆ ಮತ್ತು ದೇವನಾಗರಿ ಲಿಪಿಯಲ್ಲಿ ಇರುವ ಎಲ್ಲಾ ವೈದಿಕ ಗ್ರಂಥಗಳು ರಚನೆ ಆಗಿದ್ದು. ಆದುದರಿಂದ ಸಂಸ್ಕೃತ ಭಾಷೆ ಮತ್ತು ವೈದಿಕ ತತ್ವಗಳು ಬೌದ್ಧ ಮತ್ತು ಜೈನ ಧರ್ಮಗಳ ಮೂಲದಿಂದ ಕೃತಿಚೌರ್ಯ ಮಾಡಿದವುಗಳಾಗಿವೆ. ಪಾಲಿ ಮತ್ತು ಪ್ರಾಕೃತ ಭಾಷೆಗಳು ಸಂಸ್ಕೃತ ಭಾಷೆಯ ಹಿರಿಯಕ್ಕ ಎಂದೇ ಹೇಳಬೇಕು. ಇದು ಸಂಸ್ಕೃತವೇ ಎಲ್ಲಾ ಭಾರತೀಯ ಭಾಷೆಗಳ ತಾಯಿ ಹಾಗೂ ಬೌದ್ಧ-ಜೈನ ಧರ್ಮಗಳು ವೈದಿಕ ಧರ್ಮದ ಮೂಲದಿಂದ ಹುಟ್ಟಿದವುಗಳು ಎಂದು ವಾದಿಸುವವರ ಬಾಯಿ ಮುಚ್ಚಿಸುತ್ತದೆ. ಭಗವದ್ಗೀತೆಯಲ್ಲಿ ಇರುವ ತತ್ವಗಳನ್ನು ಬೌದ್ಧ-ಜೈನರು ಕಾಪಿ ಮಾಡಿದ್ದಲ್ಲ, ಉಲ್ಟಾ ಬೌದ್ಧ-ಜೈನ ಧರ್ಮದ ತತ್ವಗಳನ್ನು ಭಗವದ್ಗೀತೆಯಲ್ಲಿ ವೈದಿಕರು ಕಾಪಿ ಮಾಡಿದ್ದು. ಹಾಗಾಗಿ ಕಮಲ್ ಹಾಸನ್‌ರ ಮಗಳು ಅಕ್ಷರಾ ಹಾಸನ್ ನಾಸ್ತಿಕಳಾಗಿದ್ದರೂ ಬೌದ್ಧ ಧರ್ಮ ಸ್ವೀಕರಿಸಿದ್ದು ಅವಳು ತನ್ನ ಮೂಲ ಧರ್ಮಕ್ಕೆ ಮರಳಿದಳು (ಘರ್ ವಾಪ್ಸಿ) ಎಂದೇ ಹೇಳಬಹುದು.


- ಆರ್.ಬಿ.ಶೇಣವ, ಮಂಗಳೂರು



ಅಮಿತ್ ಶಾ ರಕ್ಷಣಾ ಮಂತ್ರಿ?

ಕೇಂದ್ರ ಸರಕಾರದ ಎಲ್ಲಾ ಸ್ಟ್ರಾಟೆಜಿಕ್ ಇಲಾಖೆಗಳಲ್ಲಿ ಗುಜರಾತಿಗಳನ್ನು ತಂದು ಕೂಡಿಸಿದರೆ ತಾನು ಭಾರತದ ಸರ್ವಾಧಿಕಾರಿ ಆಗುವುದು ಸುಲಭ ಎಂಬುದು ಮೋದಿಯ ದೂರಗಾಮಿ ಲೆಕ್ಕಾಚಾರ. ಅದಕ್ಕಾಗಿಯೇ ಐಟಿ ಇಲಾಖೆ, ಸಿಬಿಐ, ರಿಸರ್ವ್ ಬ್ಯಾಂಕ್, ಚುನಾವಣಾ ಆಯೋಗ, ಈಡಿ-ಜಾರಿ ನಿರ್ದೇಶನಾಲಯ, ಹೀಗೆ ಮೋದಿ ಎಲ್ಲೆಡೆ ಗುಜರಾತಿ ಮೇಲ್ಜಾತಿಯವರನ್ನೇ ಮುಖ್ಯಸ್ಥರಾಗಿ ತಂದು ಕೂಡಿಸಿರುವುದು.

ಆದರೆ ವ್ಯಾಪಾರಿ ಬುದ್ಧಿಯ ಗುಜರಾತಿಗಳು ಮೂಲತಃ




ಪುಕ್ಕಲರಾಗಿರುವುದರಿಂದ ಮಿಲಿಟರಿಯಲ್ಲಿ ಯಾವನೇ ಒಬ್ಬ ಗುಜರಾತಿ-ಮಾರ್ವಾಡಿ ಮೇಲಿನ 'ಜನರಲ್' ಹುದ್ದೆಯಲ್ಲಿ ಇಲ್ಲ. ಹಾಗಾಗಿ ಯಾವುದೇ ಗುಜರಾತಿಯನ್ನು ಮಿಲಿಟರಿಯ (ಆರ್ಮಿ-ನೇವಿ-ಏರ್‌ಫೋರ್ಸ್) ಸೇನಾಪಡೆಯ (ಜನರಲ್) ಮುಖ್ಯಸ್ಥನಾಗಿ ನೇಮಿಸಲು ಮೋದಿಗೆ ಈವರೆಗೆ ಸಾಧ್ಯವಾಗಿಲ್ಲ. ಆದಕ್ಕಾಗಿ ಆವನು ಅಮಿತ್ ಶಾನನ್ನು ರಾಜ್ಯಸಭೆಗೆ ಕರೆತಂದು ಈ ಗುಜರಾತಿಯನ್ನು ರಕ್ಷಣಾ ಸಚಿವನಾಗಿ ನೇಮಿಸುವ ಪ್ಲಾನ್ ಹಾಕಿದ್ದಾನೆ. ಮನೋಹರ್ ಪರಿಕರ್ ಗೋವಾಕ್ಕೆ ಮರಳಿದ ಬಳಿಕ ರಕ್ಷಣಾ ಮಂತ್ರಿ ಹುದ್ದೆಯನ್ನು ಅರುಣ್ ಜೈಟ್ಲಿ ಹಂಗಾಮಿಯಾಗಿ ನಿರ್ವಹಿಸುತ್ತಿದ್ದು ಇಂತಹ ಪ್ರಮುಖ ಖಾತೆಗೆ ಪೂರ್ಣಾವಧಿ ರಕ್ಷಣಾ ಮಂತ್ರಿ ಇಲ್ಲ. ಅಂಜುಬುರುಕ ಅರುಣ್ ಜೈಟ್ಲಿ ಅಸಮರ್ಥ. ಹಾಗಾಗಿ ಪಕ್ಕಾ ಕ್ರಿಮಿನಲ್ ಬುದ್ಧಿಯ ಜೈನ ಅಮಿತ್ ಶಾನನ್ನೇ ಡಿಫೆನ್ಸ್ ಮಿನಿಸ್ಟರ್ ಮಾಡುವ ಮೋದಿಯ ಪ್ಲಾನ್ ಕಾರ್ಯಗತವಾದರೆ ಬೇರೆ ಎಲ್ಲಾ ಇಲಾಖೆಗಳಂತೆ ಸೇನಾಪಡೆಯೂ ಗುಜರಾತಿಗಳ ಕೈಯಲ್ಲಿ ಸಿಕ್ಕಿಬಿದ್ದು ಮೋದಿ ಸರ್ವಾಧಿಕಾರಿ ಆಗುವ ಹಾದಿ ಸುಗಮವಾಗುತ್ತದೆ. ಎಷ್ಟೇ ಆಗಲಿ, ಈಗ ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಇಬ್ಬರೂ ಪಕ್ಕಾ ಹಿಂದುತ್ವವಾದಿ ಸಂಘಿಗಳಾಗಿರುವುದರಿಂದ ಮೋದಿಗೆ ಸರ್ವಾಧಿಕಾರಿ ಆಗುವುದು ಸುಲಭವಾಗಿದೆ. ಆದರೆ ಅವರಿಗೆ ಒಂದೇ ಒಂದು ದೊಡ್ಡ ಬಂಡೆಕಲ್ಲು ಅಡ್ಡಿ ಎಂದರೆ ಕೇವಲ ನಮ್ಮ ವೀರ ದೇಶಭಕ್ತ ಸೇನಾಪಡೆ. ಅದಕ್ಕಾಗಿ ಸರಿಯಾಗಿ ನಡೆದಾಡಲೂ ಆಗದ ಕೊಣಪ ಅಮಿತ್ ಶಾನನ್ನು ರಕ್ಷಣಾ ಮಂತ್ರಿ ಮಾಡುವ ಪ್ಲಾನ್ ಮೋದಿಯದು!

ಮೊನ್ನೆ ಡಿ.ಕೆ.ಶಿವಕುಮಾರ್ ಮೇಲೆ ಆದಾಯ ತೆರಿಗೆ ದಾಳಿ ಮಾಡಿ ಅಲ್ಲಿ ರೆಸಾರ್ಟ್‌ನಲ್ಲಿ ಇರುವ 44 ಗುಜರಾತಿನ ಶಾಸಕರನ್ನು ಬೆದರಿಸಲು ತನ್ನ ಕೈಗೊಂಬೆಯಾದ ಐಟಿ ಇಲಾಖೆಯ ಜತೆ ಸಿಆರ್‌ಪಿಎಫ್ ನಂತಹ ಶಸ್ತ್ರಸನ್ನದ ಅರೆ-ಸೇನಾಪಡೆ ಕಳಿಸಿರುವುದು ಒಂದು ಸ್ಯಾಂಪಲ್ ಅಷ್ಟೇ. ಇನ್ನು ಅಮಿತ್ ಶಾ ರಕ್ಷಣಾಮಂತ್ರಿ ಆದ ಮೇಲೆ ರಾಜಕೀಯ ವಿರೋಧಿಗಳನ್ನು ಸದೆಬಡಿಯಲು ನೇರವಾಗಿ ಸೇನಾಪಡೆಯನ್ನೇ ದುರುಪಯೋಗ ಮಾಡುವುದು ಖಚಿತ. ಅನೇಕ ಅಮಾಯಕರ ನಕಲಿ ಎನ್‌ಕೌಂಟರ್ ಮೂಲಕ ಮಾನವ ರಕ್ತದ ರುಚಿ ಕಂಡ ಹುಲಿ ಎಂದಾದರೂ ಸುಮ್ಮನಿರಲು ಸಾಧ್ಯವೇ?

- ವೀರಪ್ಪ ಡಿ.ಎನ್. ಮಡಿಕೇರಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಬಹುದು ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 23-08-2017 RNI No. KARKA



ಕೂಸಿಗೆ ಮೊದಲೇ ಕುಲಾವಿ ರೆಡಿ!

ಸಂತೋಷ್ ಆನಂದ್ ರಾಂ ಸದ್ಯಕ್ಕೆ ಸ್ಯಾಂಡಲ್‌ವುಡ್‌ನ ಬೇಡಿಕೆಯ ನಿರ್ದೇಶಕ. ಅವರು ಆಕ್ಷನ್ ಕಟ್ ಹೇಳಿದ 'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ', 'ರಾಜಕುಮಾರ' ಎರಡೂ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಚಿಂದಿ ಉಡಾಯಿಸಿವೆ. ಹಾಗಾಗಿ ಸಹಜವಾಗೇ ಅವರ ಮೂರನೆ ಸಿನಿಮಾದ ಬಗ್ಗೆ ಇನ್ನಿಲ್ಲದ ನಿರೀಕ್ಷೆಗಳು ಭುಗಿಲೆದ್ದಿವೆ. ಯಶ್, ಪುನೀತ್ ನಂತರ ಯಾವ ಹೀರೋಗೆ ಸಿನಿಮಾ ಮಾಡ್ತಾರೆ? ಕಥೆ ಏನು? ಟೈಟಲ್ ಯಾವ್ದು? ಹೀರೋಯಿನ್ ಯಾರು? ಎಂಬೆಲ್ಲ ಪ್ರಶ್ನೆಗಳು ಗಾಂಧಿನಗರದ ಸಂದಿಗೊಂದಿಯಿಂದ ನುಗ್ಗಿ ಬರುತ್ತಿದ್ದವು. ಆದ್ರೆ ಇಂಥಾ ಪ್ರಶ್ನೆಗಳನ್ನೆಲ್ಲ ಓವರ್‌ಟೇಕ್ ಮಾಡಿರೋ ಸಂತೋಷ್, ತಮ್ಮ ಮೂರನೇ ಸಿನಿಮಾದ ಸ್ಕ್ರಿಪ್ಟ್‌ಗೂ ಮೊದಲೇ ರಿಲೀಸ್ ದಿನಾಂಕವನ್ನೇ ಪ್ರಕಟಿಸಿಬಿಟ್ಟಿದ್ದಾರೆ. ಹೌದು, ಮುಂದಿನ ವರ್ಷದ ಡಿಸೆಂಬರ್ 25ಕ್ಕೆ ಅವರ ಮೂರನೇ ಸಿನಿಮಾ ರಿಲೀಸ್ ಆಗುತ್ತಂತೆ. ಈಗಿನ್ನೂ ಹೊಸ ಆಫೀಸ್‌ನಲ್ಲಿ ಕೂತು ಸಿನಿಮಾಗೆ ಕಥೆ ಬರೆಯುತ್ತಿರುವ ಸಂತೋಷ್ ಆದಾಗಲೇ ರಿಲೀಸಿಂಗ್ ಡೇಟ್ ಅನೌನ್ಸ್ ಮಾಡಿರೋದು ನೋಡಿದ್ರೆ ಅವರ ಕಾನ್ಫಿಡೆನ್ಸ್ ಮೆಚ್ಚಲೇಬೇಕು. ಅಂದಹಾಗೆ, ಸ್ಕ್ರಿಪ್ಟ್ ಕೆಲಸ ಸಂಪೂರ್ಣ ಮುಗಿದ ಬಳಿಕ ಹೀರೊ ಯಾರು ಅನ್ನೋದನ್ನು ಹೇಳ್ತಾರಂತೆ. ಸದ್ಯಕ್ಕಂತು ಹ್ಯಾಟ್ರಿಕ್ ಹೀರೋ ಶಿವಣ್ಣನಿಗೋಸ್ಕರ 'ರಣರಂಗ' ಅಂತ ಸಿನಿಮಾ ಮಾಡಲಿದ್ದಾರೆ ಎನ್ನುವ ಸುದ್ದಿ ಗಾಂಧಿನಗರದಲ್ಲಿದೆ. ಅದು ನಿಜವೋ, ಸುಳ್ಳೋ ಅನ್ನೋದನ್ನು ಸಂತೋಷ್ ಖಾತ್ರಿ ಮಾಡುತ್ತಿಲ್ಲ.

ತೆಲುಗು ಚಿರು ಜೊತೆ ಕನ್ನಡದ ಕಿಚ್ಚ?

ಕಿಚ್ಚ ಸುದೀಪ್‌ಗೂ, ತೆಲುಗಿನ ಟಾಲಿವುಡ್‌ಗೂ ಎಲ್ಲಿಲ್ಲದ ನಂಟು. ರಾಯಲ್‌ಸೀಮ ರಕ್ತಚರಿತ್ರೆಯ ರಾಂಗೋಪಾಲ್ ವರ್ಮನ ಫೇವರಿಟ್ ನಟ ಸುದೀಪ್ 'ಈಗ', 'ಬಾಹುಬಲಿ' ಸಿನಿಮಾಗಳಲ್ಲಿ ಮಿಂಚಿ ತೆಲುಗು ಪ್ರೇಕ್ಷಕರ ಮನಗೆದ್ದಿದ್ದರು. ಇದೀಗ ಮತ್ತೊಂದು ಟಾಲಿವುಡ್ ಮೆಗಾ ಆಫರ್ ಸುದೀಪ್ ಅರಸಿಬಂದಿರುವ ಸುದ್ದಿ ಕೇಳಿಬರುತ್ತಿದೆ. ಅದೂ ಮೆಗಾಸ್ಟಾರ್ ಚಿರಂಜೀವಿ ಜೊತೆ ನಟಿಸುವ ಅವಕಾಶ! ಚಿರಂಜೀವಿಯವರ ಬಹುನಿರೀಕ್ಷಿತ 151ನೇ ಸಿನಿಮಾದ ಪ್ರಮುಖ ಪಾತ್ರದಲ್ಲಿ ನಟಿಸಲು ಸುದೀಪ್ ಜೊತೆ ಮಾತುಕತೆ ನಡೆಸಲಾಗಿದೆಯಂತೆ. ತೆಲುಗಿನ ಸ್ವಾತಂತ್ರ್ಯ ಹೋರಾಟಗಾರ 'ಉಯ್ಯಲವಾಡ ನರಸಿಂಹ ರೆಡ್ಡಿ' ಅವರ ಜೀವನಚರಿತ್ರೆ ಆಧರಿಸಿದ ಈ ಸಿನಿಮಾಕ್ಕೆ ನಿರ್ದೇಶಕ ಸುರೇಂದರ್ ರೆಡ್ಡಿ ಆಕ್ಷನ್ ಕಟ್ ಹೇಳಲು ಹೊರಟಿದ್ದಾರೆ. ಸಿನಿಮಾದಲ್ಲಿ ಸುದೀಪ್‌ಗೆ ಆಫರ್ ಮಾಡಿರುವ ರೋಲ್ ತುಂಬಾ ಪವರ್ ಫುಲ್ ಪಾತ್ರವಂತೆ. ಕನ್ನಡ ಹಾಗೂ ತೆಲುಗಿನಲ್ಲಿ ಮಾತನಾಡುವ ಪಾತ್ರ ಆಗಿರೋದ್ರಿಂದ ಅದಕ್ಕೆ ಸುದೀಪ್ ಅವರೇ ಸೂಕ್ತ ಅನ್ನೋದು ಚಿತ್ರತಂಡದ ಅಭಿಪ್ರಾಯ. ಅಂದಹಾಗೆ, ಈ ಸಿನಿಮಾದಲ್ಲಿ ಅಮಿತಾಬ್ ಬಚ್ಚನ್ ಕೂಡ ಇರಲಿದ್ದಾರೆ ಎಂಬ ಸುದ್ದಿಯೂ ಕೇಳಿಬರುತ್ತಿದೆ. ಅಂದಹಾಗೆ, ಈ ಮೊದಲು ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆ ದಿನ ಚಿತ್ರ ಸೆಟ್ಟೇರುತ್ತೆ ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ ಅದು ಮುಂದಕ್ಕೋಗುವ ಸಾಧ್ಯತೆ ಇದೆ.





ಸಿನಿ ಹಾದಿಗೆ ಮತ್ತೊಂದು ರಾಜ್

ಕನ್ನಡದ ಕಲಾಸೇವೆಗೆಂದೇ ಅವತರಿಸಿದಂತಿರುವ ರಾಜ್ ಮತ್ತೊಂದು ಕುಡಿ ಸ್ಯಾಂಡಲ್‌ವುಡ್‌ನ ಸಿನಿಹಾದಿ ತುಳಿಯಲ ಈಗಾಗಲೇ ರಾಜ್‌ಕುಮಾರ್‌ರ ಮೂವರು ಮಕ್ಕಳಲ್ಲದೆ, ರಾ ವಿನಯ್ ಕೂಡಾ ನಾಯಕನಟನಾಗಿ ಮಿಂಚಿದ್ದರು. ಇದೀಗ ಡಾ.ರಾ ಕಿರಿಯ ಪುತ್ರಿ ಪೂರ್ಣಿಮಾ ಮತ್ತು ನಟ ರಾಮ್‌ಕುಮಾರ್ ದ ಧೀರೆನ್ ರಾಮ್‌ಕುಮಾರ್ ಸಿನಿ ಪಯಣ ಆರಂಭಿಸಲು ತಯ ಸುದ್ದಿ ಕೇಳಿಬಂದಿದೆ.

ಇತ್ತೀಚೆಗಷ್ಟೇ ವ್ಯಾಸಂಗ ಮುಗಿಸಿದ ಧೀರೆನ್ ಸಿನಿರಂಗಕ್ಕೆ ರೀತಿಯ ತಯಾರಿಯಲ್ಲಿ ಬ್ಯುಸಿಯಂತೆ. ಅಭಿನಯ ತರಂಗದ ಗ ರಂಗಭೂಮಿ ಕಲೆಯನ್ನು, ಜೈ ಎಂಬುವವರ ಬಳಿ ನೃತ್ಯವನ್ನು ಕ ಧೀರೆನ್ ಫೈಟಿಂಗ್ ಸ್ಟಂಟ್‌ಗಳನ್ನೂ ಕರಗತ ಮಾಡಿಕೊಳ್ಳುತ್ತಿದ್ದಾ ಒಂದೆರಡು ಪ್ರಾಜೆಕ್ಟ್‌ಗಳು ಅವರನ್ನು ಅರಸಿ ಬಂದಿದ್ದು ಯಾವುದ ಆಗಿಲ್ಲ. ಸಿನಿಮಾ ಹೊಂಗನಸಿನಲ್ಲಿರೋ ಧೀರೆನ್‌ಗೆ ತಾತ ಮತ್ತು ರೋಲ್ ಮಾಡೆಲ್‌ಗಳಾಗಿರೋದು ರಾಜ್ ಫ್ಯಾಮಿಲಿಯಿಂದ ಪ್ರತಿಭೆಯ ಕುಡಿ ಚಿಗುರುವ ಭರವಸೆಯನ್ನು ಮೂಡಿಸಿದೆ. ಮಾಸ್ ಆಡಿಯನ್ಸ್ ಇಬ್ಬರನ್ನೂ ಸೆಳೆಯುವ ಕಥೆಯ ಮೂಲಕ ಲಾಂಚ್ ಮಾಡಲು ತಯಾರಿ ಸಾಗಿವೆ ಎಂಬುದೇ ಲೇಟೆಸ್ಟ್



ವಿಷ್ಣು ಅಭಿಮಾನಿಗಳ ಹೀಗೊಂದು ಅಭಿಯಾನ


ಅದ್ಯಾಕೋ ವಿಷ್ಣುದಾದಾ ಇಹಲೋಕ ತ್ಯಜಿಸಿದರೂ ವಿವಾದಗಳು ಅವರನ್ನು ಬಿಡುವಂತೆ ಕಾಣುತ್ತಿಲ್ಲ. ಅವರ ಸಮಾಧಿ, ಸ್ಮಾರಕವಾಗುವ ವಿಚಾರವೇ ಬೆಂಗಳೂರು-ಮೈಸೂರು ಹೆದ್ದಾರಿ ನಡುವೆ ಸಿಲುಕಿ ನಲುಗುತ್ತಿರುವ ಹೊತ್ತಲ್ಲಿ ಅವರ ಬಿರುದಿನ ಸುತ್ತ ಇನ್ನೊಂದು ವಿವಾದ ಕದಲಾಡುತ್ತಿದೆ. ಸಾಹಸಸಿಂಹ, ಅಭಿನವ ಭಾರ್ಗವ, ಕರ್ನಾಟಕ ಸುಪುತ್ರ ಎಂಬೆಲ್ಲ ಬಿರುದುಗಳೊಟ್ಟಿಗೆ 'ಮೈಸೂರು ರತ್ನ' ಎಂಬ ಬಿರುದೂ ಹಲವು ದಶಕಗಳ ಹಿಂದೆಯೇ ಡಾ.ವಿಷ್ಣುವರ್ಧನ್‌ರ ಹೆಸರಿನ ಮುಂದೆ ಸೇರಿಕೊಂಡಿತ್ತು. ಆದರೆ ಮೊನ್ನೆ 'ಕರಿಯ-2' ಚಿತ್ರತಂಡ ಚಾಲೆಂಜಿಂಗ್ ಸ್ಟಾರ್ ದರ್ಶನ್‌ರಿಗೆ 'ಮೈಸೂರು ರತ್ನ' ಬಿರುದು ನೀಡಲು ಮುಂದಾಗಿತ್ತು. ಅದನ್ನು ನಯವಾಗೇ ತಿರಸ್ಕರಿಸಿದ ದರ್ಶನ್ ಆ ಬಿರುದನ್ನು 'ಕರಿಯ-2' ಚಿತ್ರದ ನಾಯಕನಿಗೆ ನೀಡಿ ಎಂದಿದ್ದರು. ವಿಷ್ಣುಗಿದ್ದ ಬಿರುದನ್ನು ಒಪ್ಪಿಕೊಳ್ಳಲು ನಿರಾಕರಿಸಿದ ದರ್ಶನ್‌ರನ್ನು ಅಭಿನಂದಿಸಿರುವ ವಿಷ್ಣು ಅಭಿಮಾನಿಗಳು ಒಬ್ಬ ಹೊಸ ನಟನಿಗೆ ಆ ಬಿರುದು ನೀಡುವಂತೆ ಶಿಫಾರಸ್ಸು ಮಾಡಿದ್ದರ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಈ ಕುರಿತು ಫೇಸ್‌ಬುಕ್ ಅಭಿಯಾನವನ್ನೇ ವಿಷ್ಣು ಅಭಿಮಾನಿಗಳು ಶುರು ಮಾಡಿದ್ದಾರೆ. ವಿವಾದ ಹುಟ್ಟುಹಾಕುವುದು ನಮ್ಮ ಉದ್ದೇಶವಲ್ಲ, ದಾದಾ ಮೇಲಿನ ನಮ್ಮ ಅಭಿಮಾನಕ್ಕಾಗಿ ಯಾರ ವಿರುದ್ಧವೂ ಕೇಂದ್ರಿತವಾಗದ ಈ ಅಭಿಯಾನ ನಡೆಸುತ್ತಿದ್ದೇವೆ ಎಂಬ ನಯವಾದ ಒಕ್ಕಣೆಯೊಂದಿಗೆ ಶುರುವಾಗಿರುವ ಅಭಿಯಾನ ಸಾಮಾಜಿಕ ತಾಣದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದೆ. ಕನ್ನಡದ ಒಬ್ಬ ಪ್ರತಿಭಾವಂತ ಸ್ನೇಹಜೀವಿ ನಟ ಮತ್ತೆಮತ್ತೆ ವಿವಾದಕ್ಕೆ ಸಿಲುಕುತ್ತಿರೋದು ನಿಜಕ್ಕೂ ಬೇಸರದ ಸಂಗತಿ.

ಧ್ರುವ ಉಳಿಸಿಹೋದ ನೆ

ಇತ್ತೀಚೆಗಷ್ಟೆ ಬದುಕು ಕೊನೆಗಾಣಿಸಿಕೊಂಡ ಪ್ರತಿಭಾವಂತ ನಟ ಧ್ರು ನೆನಪೊಂದನ್ನು ಉಳಿಸಿಹೋಗಿದ್ದಾರೆ. ಮಾತು ಬಾರದ, ಕಿವಿಯೂ ಕೇಳದ ಲಿಪ್‌ಸಿಂಕಿಂಗ್ ಮೂಲಕ ಗ್ರಹಿಸಿ ಅಭಿನಯಿಸುತ್ತಿದ್ದುದು ಕೇವಲ ಸಿನಿ ಮಾತ್ರವಲ್ಲ, ಆತ್ಮಸ್ಥೈರ್ಯ ಕಳೆಕೊಂಡ ಪ್ರತಿಯೊಬ್ಬರಿಗೂ ಸ್ಫೂರ್ತಿಯಾ ಅಂಥಾ ಧ್ರುವ ಯಃಕಶ್ಚಿತ್ ಸಾಲಕ್ಕೆ ಬೆದರಿ ಆತ್ಮಹತ್ಯೆ ಮಾಡಿಕೊಂಡಿದ ಅದೇನೇ ಇರಲಿ, ಸಾಯುವುದಕ್ಕೆ ಮುನ್ನ ಆತ ನಟಿಸಿ, ಕಾಸು ಸುರಿದ ಕೊನೆ 'ಕಿಚ್ಚು' ಹಲವು ಕಾರಣಕ್ಕೆ ಸುದ್ದಿ ಮಾಡುತ್ತಿದೆ. ಮೊದಲನೆಯದಾಗಿ ಇದು ಬದುಕನ್ನು ಆವರಿಸಿದ ಕಾಡ್ಗಿಚ್ಚನ್ನು ಕೇಂದ್ರವಾಗಿಸಿಕೊಂಡ ಆರಣ್ಯ ಸಂರಕ್ಷಣೆಯ ಕತೆ ಎನ್ನುವ ಕಾರಣ. ಎರಡನೆಯದಾಗಿ, ಈ ಚಿತ್ರದಲ್ಲಿ ಧ್ರುವಗೆ ನಾಯಕಿಯಾಗಿ ನಟಿಸಿದ ಬಹುಭಾಷಾ ನಟಿ ಅಭಿನಯ ಕೂಡಾ ಆತನಂತೆಯೇ ಹುಟ್ಟು ಮಾತಿಲ್ಲದ, ಕಿವಿಯೂ ಕೇಳದ ನಟಿ. ಈ ನಿಜಜೀವನದ ಇಬ್ಬರು ವಿಶಿಷ್ಟ ಕಲಾವಿದರು, ಚಿತ್ರದಲ್ಲೂ ಅದೇ ರೀತಿಯ ಪಾತ್ರಗಳಲ್ಲಿ ಬಣ್ಣಹಚ್ಚಿರುವುದು ಚಿತ್ರದ ಮತ್ತೊಂದು ವಿಶೇಷ.

ಕನ್ನಡ, ತೆಲುಗು, ತಮಿಳು ಸಿನಿಮಾಗಳಲ್ಲಿ ಅಭಿನಯಿಸಿರುವ ಅಭಿನಯ 'ಹುಡುಗರು' ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ತಂಗಿಯಾಗಿ ಕಾಣಿಸಿಕೊಂಡಿದ್ದರು. ಪ್ರದೀಪ್ ರಾಜ್ ನಿರ್ದೇಶಿಸಿರುವ 'ಕಿಚ್ಚು' ಚಿತ್ರದಲ್ಲಿ ರಾಗಿಣಿ ದ್ವಿವೇದಿ, ಸಾಯಿಕುಮಾರ್, ಪ್ರದೀಪ್ ರಾಜ್ ಮೊದಲಾದವರ ಜೊತೆ ಧ್ರುವನ ಆಪ್ತನಟ ಸುದೀಪ್ ಕೂಡಾ ಗೆಸ್ಟ್ ಅಪಿಯರೆನ್ಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ.



■ ಗಿರೀಶ್ ತಾಳಿಕಟ್ಟೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2661642
Fax : 26604536, E-mail :lankesh70@rediffmail